BUDGET ESTIMATES FOR 1967-68—DEMANDS FOR GRANTS

(Demand Nos. 17 and 37)

(Debate—Contd.)

†ಶ್ರೀ ಕೆ. ವಿ. ಶಂಕರ ಗೌಡ.—ಮಾನ್ಯ ಸಭಾಪತಿಗಳೇ, ಕಳೆದ ಎರಡು ದಿವಸಗಳಿಂದ ಈ ಸಭೆಯ ಮಾನ್ಯ ಸದಸ್ಯರು ಮಾಡಿರುವ ಭಾಷಣಗಳನ್ನು ನಾನು ಗಮನವಿಟ್ಟು ಕೇಳಿದ್ದೇನೆ. ಅನೇಕ ಜನ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಈ ಸಭೆಯ ಸದಸ್ಯರಲ್ಲಿ ಕೆಲವರು ಆವೇಶಪೂರಿತವಾದ ಭಾಷಣವನ್ನೂ ಕೂಡ ಮಾಡಿದ್ದಾರೆ. ಈ ಸಭೆಯ ಸದಸ್ಯರೆಲ್ಲರ ಗುರಿಯಲ್ಲಿ ಕವಲು ಇಲ್ಲ. ಗುರಿ ಒಂದೇ. ಅದೇನೆಂದರೆ, ಪ್ರಜಾಹಿತ ಸಾಧನೆ ಮತ್ತು ರಾಷ್ಟ್ರ ನಿರ್ಮಾಣ. ಈ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣವು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಇಂಥಾ ಪ್ರಮುಖವಾದ ಪಾತ್ರವನ್ನು ವಹಿಸತಕ್ಕಂಥ ಶಿಕ್ಷಣದ ಬಗ್ಗೆ ರಚನಾತ್ಮಕವಾದ ಸಲಹೆಗಳು ಸ್ವಾಗತಾರ್ಹ. ಈ ಮಾನ್ಯ ಸಭೆಯ ಸದಸ್ಯರು ಮಾತನಾಡಿರತಕ್ಕ ಎಲ್ಲಾ ವಿಷಯಗಳಿಗೂ ಉತ್ತರ ಕೊಡುತ್ತೇನೆಂಬ ಭರವಸೆ ನನಗೆ ಇಲ್ಲ. ಮುಖ್ಯವಾಗಿ ತತ್ವ ಮತ್ತು ನೀತಿಗಳಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಎಂದರೆ, ಉಳಿದ ವಿಚಾರಗಳ ಬಗ್ಗೆ ನಿರ್ಲಕ್ಷ್ಯ ದಿಂದಿರುತ್ತೇನೆಂದು ಯಾರು ಭಾವಿಸಿಕೊಳ್ಳಬಾರದು. ಸಾಧ್ಯವಾದಷ್ಟು ಮಟ್ಟಿಗೆ ಅವುಗಳ ಪಟ್ಟಿಯನ್ನು ಮಾಡಿಕೊಂಡಿದ್ದೇನೆ. ಅವುಗಳ ಬಗ್ಗೆ ಸರ್ಕಾರದ ನಿಯಮಗಳಿಗನುಸಾರವಾಗಿ ಮಾಡಬೇಕಾದ ಕೆಲಸಗಳು ಏನಾದರೂ ಇದ್ದರೆ ಆದಷ್ಟು ಜಾಗ್ರತೆ ಮಾಡುತ್ತೇನೆ ಎಂಬ ಅಶ್ವಾಸನೆ ಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಚ್ಛಿಸುತ್ತೇನೆ.

ಮಾನ್ಯ ಸಭಾಪತಿಗಳೇ, ನಾವು ನಮ್ಮ ಮಕ್ಕಳಿಗೆ ಕೊಡತಕ್ಕ ಶಿಕ್ಷಣ ನಮ್ಮ ಸಂಸ್ಕೃತಿ ಮತ್ತು ಪರಂಪರೆಗೆ ಅನುಗುಣವಾಗಿ ಇರಬೇಕು; ನಮ್ಮ ಜನರ ಆರ್ಥಿಕ, ಸಾಮಾಜಿಕ, ಹಾಗೂ ನೈತಿಕ ಪ್ರಗತಿಗೆ ಇಂಬುಕೊಡುವಂಥಾದ್ದು ಆಗಿರಬೇಕು; ಆಶೆ ಆಕಾಕ್ಷೆಗಳನ್ನು ಈಡೇರಿಸುವಂಥಾದ್ದು ಆಗಿರಬೇಕು; ಜನರ ಜೀವನದ ವ್ಯವಸ್ಥೆಗೆ ಹೊಂದಿಕೊಳ್ಳುವಂಥಾದ್ದು ಆಗಿರಬೇಕು. ಈ ಅವಶ್ಯಕತೆಗಳನ್ನು ಪೂರೈಸುವ ದೃಷ್ಟಿಯಿಂದ ಶಿಕ್ಷಣ ಪದ್ಧತಿಯನ್ನು ಸುಧಾರಣೆ ಮಾಡತಕ್ಕ ಕೆಲಸ ನಮ್ಮ ದೇಶದಲ್ಲಿ ಸಾಕಷ್ಟು ಮಟ್ಟಿಗೆ ನಡೆದಿದೆ. ಇದಕ್ಕಾಗಿ ಇಂಡಿಯಾ ಸರ್ಕಾರದವರು ಅನೇಕ ಕಮಿಟಿಗಳನ್ನು ಸ್ಥಾಪಿಸಿದ್ದಾರೆ. ಮತ್ತು ವರದಿಗಳನ್ನು ತಯಾರಿಸಿದರೂ ಕೂಡ ಕೊನೆಗೆ ಕೊಠಾರಿ ಆಯೋಗ ರಚಿಸಲ್ಪಟ್ಟಿತು. ಅವರ ವರದಿ ಸಿದ್ಧವಾಗಿದೆ. ದೇಶದ ಮುಂದೆ ಈ ವರದಿ ಏನಿದೆ ಇದರ ಬಗ್ಗೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊಠಾರಿ ಕಮಿಟಿಯಲ್ಲಿರತಕ್ಕಂಥ ಎಲ್ಲಾ ಶಿಫಾರಸು ಗಳನ್ನೂ ಕೂಡ ಅನುಷ್ಠಾನಕ್ಕೆ ತರುವುದಕ್ಕೆ ಅರ್ಹವಾಗಿವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಬಹುಭಾಗ ವಿಷಯಗಳು ಅನುಷ್ಠಾನಕ್ಕೆ ತರುವುದಕ್ಕೆ ಅರ್ಹವಾಗಿವೆ.

[Mr. DEPUTY SPEAKER in the Chair]

ಒಂದೆರಡು ಪ್ರಮುಖ ವಿಚಾರದಲ್ಲಿ ಅಭಿಪ್ರಾಯ ಭೇದವಿದೆ. ಅದರಲ್ಲಿ ಮುಖ್ಯವಾದುದು ತ್ರಿಭಾಷಾ ಸೂತ್ರ. ಇದು ದೇಶದ ದುರಾದೃಷ್ಟ. ಈ ತ್ರಿಭಾಷಾ ಸೂತ್ರದ ಬಗ್ಗೆ ಒಂದು ರೀತಿ ಗೊಂದಲ ವುಂಟಾಗಿದೆ. ಕಳೆದ ತಿಂಗಳಿನಲ್ಲಿ ದೆಹಲಿಯಲ್ಲಿ ಎಲ್ಲ ರಾಜ್ಯಗಳ ಶಿಕ್ಷಣ ಮಂತ್ರಿಗಳ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಕೂಡ ಭಿನ್ನಾಭಿಪ್ರಾಯ ತಲೆದೋರಿತು. ಇದನ್ನು ಬಗೆಹರಿಸಲು ಮತ್ತು ಒಂದು ಒಪ್ಪಿಗೆಗೆ ಬರಲು ಕೆಲವು ರಾಜ್ಯಗಳ ಶಿಕ್ಷಣ ಮಂತ್ರಿಗಳನ್ನೊಳಗೊಂಡಂಥ ಒಂದು ಸಣ್ಣ ಕಮಿಟಿಯನ್ನು ಮಾಡಲಾಗಿತ್ತು. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ, ತ್ರಿಭಾಷಾ ಸೂತ್ರವನ್ನು ಒಂದು ರೀತಿಯಲ್ಲಿ ನಾವು ಒಪ್ಪಿಕೊಂಡಿದ್ದೇವೆ. ಇದನ್ನು ಜಾರಿಗೆ ತರುವುದಕ್ಕೆ ಯಾರೇ ವಿರೋಧಿಸಿದರೂ ಕೂಡ ಇದು ಖಂಡಿತವಾಗಿ ಜಾರಿಗೆ ಬರುತ್ತದೆ ಎಂದು ಆಶ್ವಾಸನೆ ಈ ಸಂದರ್ಭ ದಲ್ಲಿ ಕೊಡಲು ಇಚ್ಛೆಪಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವುದಕ್ಕೆ ಗಮನ ಕೊಡುತ್ತೀರಾ? ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸರಕಾರದ ಅಭಿಪ್ರಾಯವೇನು?

ಶ್ರೀ ಕೆ. ಶಂಕರ ಗೌಡ.—ಹೌದು. ಅದು ಸರಕಾರದ ಅಭಿಪ್ರಾಯ. ನನ್ನ ಅಭಿಪ್ರಾಯವೂ ಅದೇ ಇದೆ.

ಇನ್ನು ಬೋಧನ ಮಾಧ್ಯಮದ ವಿಚಾರವಾಗಿ ಕೆಲವು ಸದಸ್ಯರು ಮಾತನಾಡಿದ್ದಾರೆ. ಪ್ರಾಂತೀಯ ಭಾಷೆ ಬೋಧನ ಮಾಧ್ಯಮವಾಗಬೇಕು ಎನ್ನುವ ವಿಚಾರದಲ್ಲಿ ಯಾವ ವಿವಾದವಿಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ಕನ್ನಡ ಮಾಧ್ಯಮ ಮಾಡತಕ್ಕ ಕೆಲಸವಾಗಿದೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ಮೈಸೂರು ಬೆಂಗಳೂರು ಹಾಗೂ ಕರ್ನಾಟಕ ಯೂನಿವರ್ಸಿಟಿಯಲ್ಲಿ ಕನ್ನಡ ಬೋಧನ ಮಾಧ್ಯಮವುಳ್ಳ ತರಗತಿಗಳನ್ನು ಪ್ರಾರಂಭ ಮಾಡಲಾಗಿದೆ. ಕನ್ನಡ ಬೋಧನ ಮಾಧ್ಯಮ ಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಪೂರ್ವಭಾವಿಯಾಗಿ ಕೆಲವು ಕೆಲಸಗಳನ್ನು ಸಾಧಿಸ ಬೇಕಾಗುತ್ತದೆ. ಅದರಲ್ಲಿ ಮುಖ್ಯವಾದುದು ಮೊದಲನೆಯದು ಅಂದರೆ, ಸಾಕಷ್ಟು ಪ್ರಮಾಣದಲ್ಲಿ ಪಠ್ಯ ಪುಸ್ತಕಗಳು ತಯಾರಾಗಬೇಕು. ಎರಡನೆಯದಾಗಿ ರಾಜ್ಯದ ಆಡಳಿತ ಭಾಷೆ ಕನ್ನಡವಾಗ ಬೇಕು. ಮೂರನೆಯದಾಗಿ ಎಲ್ಲ ರಾಜ್ಯಗಳಲ್ಲಿ ಏಕ ಕಾಲದಲ್ಲಿ ಪ್ರಾಂತೀಯ ಭಾಷೆ ಬೋಧನ ಮಾಧ್ಯಮವಾಗಬೇಕು. ನಾಲ್ಕನೆಯದಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪರೀಕ್ಷೆಗಳು ಪ್ರಾಂತೀಯ ಭಾಷೆಯಲ್ಲಿ ನಡೆಯುವಂತೆ ಆಗಬೇಕು. ಈ ನಾಲ್ಕು ಕೆಲಸಗಳಾದರೆ ಪ್ರಾಂತೀಯ ಭಾಷೆ ಬೋಧನ ಮಾಧ್ಯಮವಾಗುವುದರಲ್ಲಿ ಯಾವ ಕಷ್ಟವಿಲ್ಲ. ಇದನ್ನು ಸಾಧ್ಯವಾದ ಮಟ್ಟಿಗೆ ಜಾರಿಗೆ ತರಲು ಪ್ರಯತ್ನ ಮಾಡಿದ್ದೇವೆ. ಅನೇಕ ಕಾಲೇಜುಗಳಲ್ಲಿ ಶಾಲೆಗಳಲ್ಲಿ ಕನ್ನಡ ಬೋಧನ ಮಾಧ್ಯಮ ವಾಗಿ ಇಟ್ಟುಕೊಂಡಿದ್ದಾರೆ. ಪಠ್ಯ ಪುಸ್ತಕ ತಯಾರುಮಾಡುವುದಕ್ಕೆ ಸಕಲ ಪ್ರೋತ್ಸಾಹ ಕೊಡುತ್ತಿ ದ್ದೇವೆ. ನನ್ನ ಆಶಯ ಇನ್ನು ಐದು ವರ್ಷಗಳಲ್ಲಿ ಕನ್ನಡ ಬೋಧನ ಮಾಧ್ಯಮವಾಗಬೇಕು ಎಂದು ಇದೆ.

ಶ್ರೀ ಎಲ್. ಶ್ರೀಕಂಠಯ್ಯ.—ತ್ರಿಭಾಷಾ ಸೂತ್ರದಿಂದ ಮಕ್ಕಳಿಗೆ ಕಲಿಯುವುದಕ್ಕೆ ಎಷ್ಟೋ ತೊಂದರೆಯಾಗುತ್ತಿದೆ ಅಲ್ಲವೇ ?

ಶ್ರೀ ಕೆ. ವಿ. ಶಂಕರ ಗೌಡ.—ತ್ರಿಭಾಷಾ ಸೂತ್ರದಿಂದ ಮಕ್ಕಳಿಗೆ ತೊಂದರೆಯಾಗುತ್ತದೆ ಅಂದರೆ ಅಂಥ ತೊಂದರೆ ಅನುಭವಿಸಿಲ್ಲ. ಈಗಾಗಲೇ ಅದು ಜಾರಿಯಲ್ಲಿ ಇದೆ. ಕನ್ನಡ ಹಿಂದೀ ಇಂಗ್ಲೀಷ್ ಭಾಷೆ ಮಕ್ಕಳು ಕಲಿಯುತ್ತಿದ್ದಾರೆ. ಮೊದಲು ನಾಲ್ಕು ವರ್ಷ ಮಾತೃ ಭಾಷೆಯಲ್ಲಿ, ಐದನೇ ವರ್ಷದಲ್ಲಿ ಇಂಗ್ಲೀಷ್ ಪ್ರಾರಂಭಿಸುತ್ತೇವೆ. ಆರನೇ ವರ್ಷದಲ್ಲಿ ಹಿಂದೀ ಪ್ರಾರಂಭಿಸಿದ್ದೇವೆ. ಇದರಿಂದ ಯಾವ ತೊಂದರೆಯಾಗಿಲ್ಲ. ಶಿಕ್ಷಣ ಮಾಧ್ಯಮ ವಿಷಯದಲ್ಲಿ ಕೆಲವು ವಿಷಯಗಳನ್ನು ಸದಸ್ಯರು ತಿಳಿಸಿದ್ದಾರೆ. ಇನ್ನು ಹತ್ತು ವರ್ಷಗಳಲ್ಲಿ ಎಲ್ಲ ಹಂತದಲ್ಲಿ ತಾಂತ್ರಿಕ ಕಾಲೇಜುಗಳಲ್ಲಿ ಅಧಿಕೃತ ಕಾಲೇಜುಗಳಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗುವುದರಲ್ಲಿ ಯಾವ ಸಂದೇಹವಿಲ್ಲ ಎಂದು ಈ ಸಭೆಗೆ ತಿಳಿಸಲು ನಾನು ಸಂತೋಷಪಡುತ್ತೇನೆ.

ಕೊಠಾರಿ ಆಯೋಗದವರು ಮಾಡಿರುವ ಶಿಫಾರಸುಗಳಲ್ಲಿ ಮುಖ್ಯವಾದ ವಿಷಯ 'ಸ್ಟ್ರಕ್ಚರ್ ಆಫ್ ಎಜುಕೇಷನ್ ಎಂದರೆ ಶಿಕ್ಷಣದ ಚೌಕಟ್ಟು, ಸ್ವರೂಪ. ಇದು 15 ವರ್ಷಗಳ ಕಾಲ ಇರ ಬೇಕು ಎಂದು ಅವರು ಸಿಫಾರಸು ಮಾಡಿದ್ದಾರೆ. ಅದನ್ನು ವಿವಿಧ ಭಾಗಗಳಾಗಿ ವಿಂಗಡಿಸಿದ್ದಾರೆ. ಮೊದಲು 10 ವರ್ಷಗಳು ಸಾಮಾನ್ಯ ಶಿಕ್ಷಣ. ಇದು 7 ವರ್ಷದ ಪ್ರಾಥಮಿಕ ಶಿಕ್ಷಣ ಎಂಬು ದಾಗಿಯೂ 3 ವರ್ಷದ ಪ್ರೌಢ ಶಿಕ್ಷಣ ಎಂಬುದಾಗಿಯೂ ವಿಭಾಗಿಸಲ್ಪಟ್ಟಿದೆ. ಆಮೇಲೆ ಎರಡು ವರ್ಷಗಳು ಹೈಯರ್ ಸೆಕೆಂಡರಿ, ಇದಾದ ಮೇಲೆ ಮೂರು ವರ್ಷಗಳು ಡಿಗ್ರಿ ತರಗತಿಗಳು. ಈ ಅಭಿಪ್ರಾಯವನ್ನು ಸಾಧಾರಣವಾಗಿ ನಾವು ಒಪ್ಪಿಕೊಳ್ಳುವಂಥ ಸ್ಥಿತಿಯಲ್ಲಿದ್ದೇವೆ. ಆದರೆ ಈಗ ಒಂದು ವರ್ಷದ ಹೈಯರ್ ಸೆಕೆಂಡರಿ ಜಾರಿಯಲ್ಲಿದೆ. ಇದನ್ನು ಎರಡು ವರ್ಷಕ್ಕೆ ಬದಲಾವಣೆ ಮಾಡತಕ್ಕ ಕೆಲಸ ನಡೆಯಬೇಕಾಗಿದೆ. ಇದರಲ್ಲಿ ಒಂದು ಅಡ್ಡಿ ಇದೆ. ಎಲ್ಲ ರಾಜ್ಯಗಳಲ್ಲೂ ಇದು ಏಕಕಾಲದಲ್ಲಿ ಆಗಬೇಕು. ಇಲ್ಲದೇ ಇದ್ದರೆ ಒಂದು ರಾಜ್ಯದಲ್ಲಿ ಎರಡು ವರ್ಷ ಇದ್ದು ಮತ್ತೊಂದು ರಾಜ್ಯದಲ್ಲಿ ಒಂದು ವರ್ಷವಿದ್ದರೆ, ಎರಡು ವರ್ಷವಿರತಕ್ಕ ರಾಜ್ಯಗಳ ಮಕ್ಕಳು ಒಂದು ವರ್ಷ ಇರತಕ್ಕ ರಾಜ್ಯಗಳಿಗೆ ವಲಸೆ ಬಂದು ಪರೀಕ್ಷೆಗೆ ಕುಳಿತುಕೊಳ್ಳುವ ಸಂದರ್ಭಗಳಿವೆ. ಇದನ್ನು ಮೈಸೂರು ದೇಶದಲ್ಲಿ ಈಗ ಸ್ವಲ್ಪಮಟ್ಟಿಗೆ ನಾವು ನೋಡುತ್ತಿದ್ದೇವೆ. ಕೇರಳ ರಾಜ್ಯದಲ್ಲಿ ಎರಡು ವರ್ಷ ಹೈಯರ್ ಸೆಕೆಂಡರಿ ಇದೆ. ಮೈಸೂರಿನಲ್ಲಿ ಒಂದು ವರ್ಷ ಹೈಯರ್ ಸೆಕೆಂಡರಿ ಇರುವುದರಿಂದ ಕೇರಳದ ಕೆಲವು ಮಕ್ಕಳು ಮೈಸೂರಿಗೆ ವಲಸೆ ಬಂದು ಒಂದು ವಿಧವಾದ ಗೊಂದಲ ಉಂಟಾಗಿರುವುದನ್ನು ನಾವು ನೋಡಬಹುದು. ಆದುದರಿಂದ ಇದನ್ನು ಜಾರಿಗೆ ಕೊಡಬೇಕಾದರೆ ಎಲ್ಲ ರಾಜ್ಯಗಳೂ ಏಕ ಕಾಲದಲ್ಲಿ ಜಾರಿಗೆ ಕೊಡತಕ್ಕುದು ಉತ್ತಮ ಮತ್ತು ಎರಡು ವರ್ಷಗಳ ಹೈಯರ್ ಸೆಕೆಂಡರಿ ಇರು ವುದು ಬಹಳ ಶ್ರೇಷ್ಠವಾದ ಕೆಲಸ. ಒಂದು ವರ್ಷದ ಹೈಯರ್ ಸೆಕೆಂಡರಿ ಇರುವುದರಿಂದ ನಮ್ಮ

ಶಿಕ್ಷಣದ ಮಟ್ಟ ಕಡಮೆಯಾಗುವುದಕ್ಕೆ ಅವಕಾಶ ಕೊಟ್ಟಂತಾಗಿದೆ. ಆದುದರಿಂದ ಇದನ್ನು ಎರಡು ವರ್ಷ ಮಾಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿರಲಾರದು ಎಂದು ನಾನು ಊಹಿಸಿಕೊಂಡಿದ್ದೇನೆ. ಇದನ್ನು ಎರಡು ವರ್ಷ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಮಾನ್ಯ ಸಭಾಪತಿಗಳೇ, ನಮ್ಮ ಶಿಕ್ಷಣದ ಪದ್ಧತಿಯಲ್ಲಿರತಕ್ಕ ದೊಡ್ಡ ನ್ಯೂನತೆಯೇನೆಂದರೆ, ಆವಶ್ಯಕತೆ ಹಾಗೂ ಅರ್ಹತೆ ಮತ್ತು ಪ್ರವೃತ್ತಿಯ ಮೇಲೆ ವಿದ್ಯಾರ್ಥಿಗಳನ್ನು ಆರಿಸದೆ ಇರತಕ್ಕದ್ದು. ಆವಶ್ಯಕತೆ ಇರಲಿ ಇಲ್ಲದೆ ಇರಲಿ, ಅವಶ್ಯಕತೆ ಎಂದರೆ ಮ್ಯಾನ್ ಪವರ್ ರಿಕ್ವೈರ್‌ಮೆಂಟ್ಸ್, ಅರ್ಹತೆ ಇರಲಿ, ಇಲ್ಲದೆ ಇರಲಿ ಪ್ರತಿಯೊಬ್ಬರೂ ಪದವೀಧರರಾಗಬೇಕು ಎಂದು ಆಶಿಸುತ್ತೇವೆ. ಅದರಲ್ಲಿಯೂ ಎಂ.ಬಿ.ಬಿ.ಎಸ್., ಮಾಡಬೇಕು ಇಲ್ಲದೆ ಇದ್ದರೆ ಬಿ.ಇ., ಮಾಡಬೇಕು ಎಂದು ಆಶಿಸುತ್ತೇವೆ. ಪದವೀಧರರಾಗುವುದರಲ್ಲಿಯೂ ಪ್ರತಿಯೊಬ್ಬರೂ ಕೂಡ ವೈಜ್ಞಾನಿಕ ವಿಭಾಗವನ್ನೇ ಅಧ್ಯಯನ ಮಾಡಬೇಕೆಂದು ಅಪೇಕ್ಷಿಸುತ್ತೇವೆ. ಇದು ದೊಡ್ಡ ನ್ಯೂನತೆ. ಮಾನ್ಯ ಸದಸ್ಯರನೇಕರು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಸರಿಯಾಗಿ ಸೀಟು ಸಿಕ್ಕುತ್ತಿಲ್ಲ ಎನ್ನುವ ಆಕ್ಷೇಪಣೆಯನ್ನು ಎತ್ತಿದ್ದಾರೆ. ಹೀಗೆ ಆಗುವುದಕ್ಕೆ ಈ ನ್ಯೂನತೆಯೇ ದೊಡ್ಡ ಕಾರಣ. ದೇಶದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಎಷ್ಟು ಜನ ಮಕ್ಕಳು ಪಾಸಾಗಿದ್ದಾರೆ ಅವರೆಲ್ಲರಿಗೂ ಕೂಡ ಪಿ.ಯು.ಸಿ., ಅಥವಾ ಹೈಯರ್ ಸೆಕೆಂಡರಿಯಲ್ಲಿ ಸಾಕಾದಷ್ಟು ಸ್ಥಳಾವಕಾಶವಿದೆ. ಎಷ್ಟು ಜನ ಮಕ್ಕಳು ಪಿ.ಯು.ಸಿ.ಯಲ್ಲಿ ಪಾಸಾಗಿದ್ದಾರೆ, ಅವರೆಲ್ಲರಿಗೂ ಬಿ.ಎ., ಬಿ.ಎಸ್‌ಸಿ., ತರಗತಿಗಳಲ್ಲಿ ಸಾಕಾದಷ್ಟು ಸ್ಥಳಾವಕಾಶವಿದೆ. ಆದರೆ ಬರೀ ವೈಜ್ಞಾನಿಕ ತರಗತಿಗಳಿಗೇ ಹೋಗಬೇಕೆಂಬ ಚಪಲವಿರುವುದರಿಂದ ಸ್ಥಳಾಭಾವವುಂಟಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಬೇರೆ ವಿಭಾಗವನ್ನು ತೆಗೆದುಕೊಂಡರೆ ಅವರಿಗೆ ಸರಿಯಾಗಿ ಕೆಲಸಗಳು ಸಿಕ್ಕದೆ ತೊಂದರೆಯಾಗುತ್ತಲ್ಲ, ಸ್ವಾಮಿ.

ಶ್ರೀ ಕೆ. ವಿ. ಶಂಕರ ಗೌಡ.—ನಾನು ಹೇಳುವುದನ್ನು ಮಾನ್ಯ ಸದಸ್ಯರು ಗಮನವಿಟ್ಟು ಕೇಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವಶ್ಯಕತೆಯ ದೃಷ್ಟಿಯಿಂದ ಮಕ್ಕಳನ್ನು ವಿಭಾಗಿಸುತ್ತಿಲ್ಲ ಮತ್ತು ಮ್ಯಾನ್ ಪವರ್ ರಿಕ್ವೈರ್‌ಮೆಂಟ್ ನೋಡಿಕೊಂಡು ಮಕ್ಕಳನ್ನು ಆರಿಸುತ್ತಿಲ್ಲ. ಇದನ್ನು ಗಮನಿಸಿ ಆರಿಸುವ ಪದ್ಧತಿ ಜಾರಿಗೆ ಬರಬೇಕು. ಈಗ ನಮ್ಮ ಓದತಕ್ಕಂಥ ವಿಭಾಗಗಳನ್ನು ವಿವಿಧ ರೂಪಕ್ಕೆ ತಿರುಗಿಸಬೇಕು. ಡೈವರ್ಸಿಫಿಕೇಷನ್ ಆಫ್ ಕೋರ್ಸಸ್ ಅದನ್ನು ಜಾರಿಗೆ ತರಬೇಕು. ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕು. ಯಾವ ಯಾವ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೆಷ್ಟು ಕೆಲಸ ಇದೆ ಎನ್ನತಕ್ಕಂಥಾದ್ದು ತಯಾರು ಮಾಡಬೇಕು. ಇದನ್ನು ಮಾಡುವುದಕ್ಕಾಗಿ ಬೇರೆ ಬೇರೆ ಯೂನಿಟ್ಟುಗಳನ್ನು ವಿದ್ಯಾಭ್ಯಾಸ ಇಲಾಖೆಯಲ್ಲಿ ವ್ಯವಸ್ಥೆ ಮಾಡಿ ಪ್ರಯತ್ನ ಮಾಡಲಾಗಿದೆ. ಮುಂದೆ ಬರತಕ್ಕ ವರ್ಷದಲ್ಲಿ ವಿದ್ಯಾರ್ಥಿ ಅರ್ಹತೆ ಮತ್ತು ಪ್ರವೃತ್ತಿ ಅವುಗಳನ್ನು ಗಮನಿಸಿಕೊಂಡು ಮ್ಯಾನ್‌ಪವರ್ ರಿಕ್ವೈರ್‌ಮೆಂಟ್ಸ್ ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳನ್ನು ಆರಿಸುವ ಏರ್ಪಾಡನ್ನು ಕೈಗೊಳ್ಳಬೇಕು.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಮ್ಯಾನ್ ಪವರ್ ರಿಕ್ವೈರ್‌ಮೆಂಟ್ಸ್ ಎಂದರೆ ಏನು ?

ಶ್ರೀ ಕೆ. ವಿ. ಶಂಕರ ಗೌಡ.—ಯಾವ ಯಾವ ಕ್ಲಾಸಿಗೆ ಎಷ್ಟೆಷ್ಟು ಜನ ಬೇಕಾಗುತ್ತದೆ ಎನ್ನತಕ್ಕಂಥಾದ್ದು. ಇದಕ್ಕೆ ಮಾನ್ಯ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಕೆಲವರು ಆಕ್ಷೇಪಣೆ ಎತ್ತುತ್ತಾರೆ. ಈ ರೀತಿ ಮಾಡಿದರೆ ಕೆಲವು ವರ್ಗದವರಿಗೆ ಅನ್ಯಾಯವಾಗುತ್ತದೆ ಎನ್ನುವ ಶಂಕೆ ಇದೆ. ಆಗಾಗ್ಗೆ ಆಕ್ಷೇಪಣೆ ಮಾತುಗಳು ಆಗುವ ಅವಕಾಶ ಉಂಟು. ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ಮುಂದಿನ ವರ್ಷದಲ್ಲಿ ಅರ್ಹತೆ ಮತ್ತು ಪ್ರವೃತ್ತಿ ಆಧಾರದ ಮೇಲೆ ಮತ್ತು ಅವಶ್ಯಕತೆಯ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿಭಾಗಿಸುವ ಕೆಲಸ ಸಾಗಿಸಬೇಕಾಗಿದೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಈ ಸಂದರ್ಭದಲ್ಲಿ ಮೆರಿಟ್ ಮತ್ತು ಅರ್ಹತೆ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಅರ್ಹತೆಯನ್ನು ಪತ್ತೆ ಹಚ್ಚುವುದಕ್ಕೆ ಇಟ್ಟುಕೊಂಡಿರತಕ್ಕ ಕ್ರಮ ಏನು ಇದೆ ಅದು ದೋಷಯುಕ್ತವಾಗಿದೆಯೆಂದರೆ, ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಬರೀ ಪರೀಕ್ಷೆಯಲ್ಲಿ ಬರತಕ್ಕ ಅಂಕಗಳ ಮೇಲೆ ವಿದ್ಯಾರ್ಥಿಗಳ ಅರ್ಹತೆಯನ್ನು ಪರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಪ್ರತ್ಯೇಕವಾದ ಪರೀಕ್ಷಾ ಪದ್ಧತಿಯನ್ನೇ ಜಾರಿಗೆ ತರಬೇಕಾಗಿದೆ. ಈ ವರ್ಷ ಇಂಜನೀಯರಿಂಗ್ ಕಾಲೇಜುಗಳಿಗೆ ಅರ್ಜಿ ಹಾಕಿಕೊಂಡ ವಿದ್ಯಾರ್ಥಿಗಳನ್ನು ಆರಿಸುವುದಕ್ಕೆ ಇಂತಹ ಪದ್ಧತಿಯನ್ನು ಜಾರಿಗೆ ಕೊಡಬೇಕು ಎಂದು ಎಚ್ಚರಿಸಲಾಗಿತ್ತು ಆದರೆ ಕಾಲಾವಕಾಶ ಇಲ್ಲದೇ ಇದ್ದುದರಿಂದ ಅದನ್ನು ಜಾರಿಗೆ ಕೊಡಲಾಗಲಿಲ್ಲ. ಮುಂದಿನ ವರ್ಷದಲ್ಲಿ ವಿದ್ಯಾರ್ಥಿಗಳ

(ಶ್ರೀ ಕೆ. ವಿ. ಶಂಕರ ಗೌಡ)

ಅರ್ಹತೆಯನ್ನು ಮತ್ತು ಪ್ರವೃತ್ತಿಯನ್ನು ಪತ್ತೆ ಮಾಡುವುದಕ್ಕೆ ಒಂದು ಪರೀಕ್ಷೆಯನ್ನು ಉಂಟು ಮಾಡಿ ಆ ಪರೀಕ್ಷೆಯಲ್ಲಿ ಗೆದ್ದವರಿಗೆ ತಾಂತ್ರಿಕ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ಆಲೋಚಿಸುತ್ತಾ ಇದೆ. ಮಾನ್ಯ ಸಭಾಪತಿಗಳೇ, ಕಳೆದ 2 ದಶಕಗಳಲ್ಲಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗಿವೆ. ಜನರಲ್ಲಿ ಅಸಾಧಾರಣವಾದ ಜಾಗೃತಿ ಮೂಡಿದೆ. ಪ್ರತಿಯೊಬ್ಬರಿಗೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎನ್ನತಕ್ಕ ಆಕಾಂಕ್ಷೆ ಹುಟ್ಟಿದೆ. ಈ ಕಾರಣದಿಂದ ಶಾಲಾಕಾಲೇಜುಗಳನ್ನು ಸ್ಥಾಪನೆ ಮಾಡಬೇಕು ಎನ್ನುವ ಒತ್ತಾಯ ಬಹಳವಾಗಿ ಹೆಚ್ಚಿತು. ಆ ಒತ್ತಾಯಕ್ಕೆ ಮನ್ನಣೆ ಕೊಡುವುದಕ್ಕಾಗಿ ಅಗಾಧ ಪ್ರಮಾಣದಲ್ಲಿ ನಾವು ಶಾಲಾಕಾಲೇಜುಗಳನ್ನು ಎರಡು ದಶಕಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಪೂರ್ಣ ಅಂಕಿಅಂಶಗಳು ಇಲ್ಲದೇ ಇದ್ದರೂ ಕೆಲವು ಅಂಕಿಅಂಶಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. 1956ನೇ ಇಸವಿಯಲ್ಲಿ ನಮ್ಮ ದೇಶದಲ್ಲಿ ಇದ್ದಂಥ ಮಾಧ್ಯಮಿಕ ಶಾಲೆಗಳು 1,558 ಇದ್ದುದು 1966ನೇ ಇಸವಿಯಲ್ಲಿ 10,124 ಆಗಿದೆ. ಈ ರೀತಿ 10 ವರ್ಷದಲ್ಲಿ 1,558 ಇದ್ದುದು 10,124 ಆಗಿದೆ. ಹೈಸ್ಕೂಲುಗಳನ್ನು ತೆಗೆದುಕೊಂಡರೆ 1956 ರಲ್ಲಿ ಇದ್ದಂಥ ಹೈಸ್ಕೂಲ್ ಶಾಲೆಗಳ ಸಂಖ್ಯೆ 486 ಇದ್ದುದು 1966 ರಲ್ಲಿ 1,670 ಆಗಿದೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—1956ನೇ ಇಸವಿಯ ಅಂಕಿಅಂಶಗಳು ಹಳೇ ಮೈಸೂರಿಗೆ ಸಂಬಂಧ ಪಟ್ಟವುಗಳೇ ಅಥವಾ ಹೊಸ ಮೈಸೂರಿಗೆ ಸಂಬಂಧಪಟ್ಟವುಗಳೇ?

ಶ್ರೀ ಕೆ. ವಿ. ಶಂಕರ ಗೌಡ.—ಎರಡೂ ಸೇರಿದೆ. 10 ವರ್ಷದಲ್ಲಿ ಮಾಧ್ಯಮಿಕ ಶಾಲೆಗಳ ಸಂಖ್ಯೆಗಳನ್ನು ತೆಗೆದುಕೊಂಡರೆ ಒಂದಕ್ಕೆ 10 ರಷ್ಟು ಹೆಚ್ಚಾಗಿದೆ. ಹೈಸ್ಕೂಲ್‌ಗಳ ಸಂಖ್ಯೆ ತೆಗೆದುಕೊಂಡರೆ ಒಂದಕ್ಕೆ 4 ರಷ್ಟು ಹೆಚ್ಚಾಗಿದೆ. ಇದು ಮಹತ್ತರವಾದ ಸಾಧನೆ. ಇದನ್ನು ಅಲ್ಲಗಳೆಯಲಾರರು ಎಂದು ನಂಬಿಕೊಂಡಿದ್ದೇನೆ. ಈ ದೊಡ್ಡ ಸಾಧನೆಗಾಗಿ ಶಹಬಾಸ್‌ಗಿರಿ ಕೊಡಬೇಕು.

ಇನ್ನು ಶಿಕ್ಷಣದ ವಿಚಾರವಾಗಿ ಕೆಲವು ಅಂಶಗಳನ್ನು ಮುಚ್ಚು ಮರೆ ಇಲ್ಲದೆ ಒಪ್ಪಿಕೊಳ್ಳಬೇಕಾಗಿದೆ. ಮುಂದೆ ಬರುತ್ತದೆ, ಒಪ್ಪಿಕೊಳ್ಳುತ್ತೇನೆ. ಹೀಗೆ ಜನರ ಬೇಡಿಕೆಗಳನ್ನು ಮಾನ್ಯ ಮಾಡುವ ಉತ್ಸಾಹದಲ್ಲಿ ಗುಣವನ್ನು ಕಾಪಾಡಿಕೊಂಡು ಬರುವುದರಲ್ಲಿ ವಿಫಲರಾಗಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಕ್ವಾಂಟಿಟಿ ಆಫ್ ಎಕ್ಸ್‌ಪ್ಯಾನ್‌ಷನ್ ಮಾಡಿದ್ದೇವೆ, ಕ್ವಾಲಿಟಿಯನ್ನು ಉಳಿಸಿಕೊಂಡು ಬರುವುದರಲ್ಲಿ ನಾವು ವಿಫಲರಾಗಿದ್ದೇವೆ. ಮಾನ್ಯ ಸಭಾಪತಿಗಳೇ, ದೇಶದಲ್ಲಿ ಪ್ರಾರಂಭವಾಗಿರತಕ್ಕ ಎಲ್ಲಾ ಪಾಠಶಾಲೆಗಳಿಗೂ ಏಕಕಾಲದಲ್ಲಿ ತರಹೇತು ಆಗಿರತಕ್ಕ ಶಿಕ್ಷಕರನ್ನು ಒದಗಿಸುವುದಕ್ಕೆ, ಬೇಕಾದಂಥ ಕಟ್ಟಡಗಳನ್ನು ಒದಗಿಸುವುದಕ್ಕೆ, ಲ್ಯಾಬರೇಟರಿ, ಲೈಬ್ರರಿ ಮಾಡಿಸುವುದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. ನಮ್ಮಲ್ಲಿ ದುಡ್ಡೇ ಇಲ್ಲ. ದುಡ್ಡೇ ಇದಕ್ಕೆ ಮುಖ್ಯವಾದ ಅಡ್ಡಿ. ದುಡ್ಡಿನ ಅಭಾವದಿಂದ ಅಲ್ಲಲ್ಲಿ ಶಾಲಾಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆಗಲಿಲ್ಲ. ತರಹೇತಾದಂಥ ಶಿಕ್ಷಕರನ್ನು ನೇಮಿಸುವುದಕ್ಕೆ ಅವಕಾಶ ಆಗಲಿಲ್ಲ. ಲ್ಯಾಬರೇಟರಿ ಸ್ಥಾಪನೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಲೈಬ್ರರಿ ಸ್ಥಾಪನೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಆದರಿಂದ ಗುಣ ಬಹಳಮಟ್ಟಿಗೆ ಕಡಿಮೆ ಆಗಿದೆ. 20 ವರ್ಷದಲ್ಲಿ ನಡೆಸಿಕೊಂಡ ಬಂದ ನೀತಿ Something is better than nothing ಎನ್ನುವ ನೀತಿ. ದೇಶದ ಯಾವ ಚರಿತ್ರೆಯನ್ನು ತೆಗೆದುಕೊಂಡರೂ ಕೇವಲ 10-20 ವರ್ಷದಲ್ಲಿ ಇದನ್ನು ಪೂರ್ಣವಾಗಿ ಜಾರಿಗೆ ತಂದಿದ್ದೇವೆ ಎಂದು ಹೇಳುವ ಹಾಗೆ ಇಲ್ಲ. ಸ್ವಲ್ಪ ಕಾಲ ತೆಗೆದುಕೊಂಡಿದ್ದೇವೆ. ಏನೂ ಇಲ್ಲದೇ ಇರುವುದಕ್ಕಿಂತ ಸ್ವಲ್ಪ ಹೆಚ್ಚು ಮಾಡುವುದು ಲೇಸು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಶಾಲಾಕಾಲೇಜುಗಳನ್ನು ಪ್ರಾರಂಭ ಮಾಡಿದ್ದೇವೆ. ಮುಂದೆ ಬರತಕ್ಕ ವರ್ಷದಲ್ಲಿ ವಿಸ್ತರಣೆ ತಡೆಗಟ್ಟಿ ಆಗಿರತಕ್ಕಂಥ ವಿಸ್ತರಣೆಯನ್ನು ಬಲಪಡಿಸಿ, ಕ್ರೋಢೀಕರಿಸಿ ಗುಣವನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಪಡಬೇಕಾಗಿದೆ. ಇದಕ್ಕೆ ಈ ಸಭೆಯ ಮಾನ್ಯ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ, ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸುವುದಕ್ಕೆ, ಒತ್ತಾಯ ತರಬಾರದು ಎಂದು.

ಮಾನ್ಯ ಸಭಾಪತಿಗಳೇ, ಇನ್ನು ನರ್ಸರಿ ಸ್ಕೂಲ್ ವಿಷಯವಾಗಿ ಮಾನ್ಯ ಸಭೆಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಪ್ರೀ ಪ್ರೈಮರಿ ಎಜುಕೇಷನ್ ಏನು ಇದೆ ಅದರ ಜವಾಬ್ದಾರಿಯನ್ನು ಪೂರ್ಣಗಿ ಸರ್ಕಾರ ಹೊರತಕ್ಕದ್ದು ಕಷ್ಟವಾಗಿದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ನಾವು ಹೊತ್ತುಕೊಂಡಿರುವುದರಿಂದ ಪ್ರೀ ಪ್ರೈಮರಿ ಶಿಕ್ಷಣಕ್ಕೆ ಜವಾಬ್ದಾರಿ ಹೊರುವುದಕ್ಕೆ ತೊಂದರೆ

ಯಾಗಿದೆ. ಹಣದಿಂದ ಅಡಚಣೆಯಾಗಿದೆ. ಫ್ರೀ ಪ್ರೈಮರಿ ಸ್ಟೇಜನ್ನು ಖಾಸಗಿಯವರಿಗೆ ವಹಿಸಿದ್ದೇವೆ. ಆದರೆ ಅದನ್ನು ಪೂರ್ಣವಾಗಿ ಮರೆತಿಲ್ಲ. ಖಾಸಗಿ ಶಾಲೆಗಳಿಗೆ ಇರತಕ್ಕ ಹಣವನ್ನು ಕೊಡುತ್ತಾ ಇದ್ದೇವೆ. ಅಲ್ಲಿ ಶಿಕ್ಷಕರನ್ನು ತರಬೇತು ಮಾಡುವುದಕ್ಕಾಗಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಇನ್ನು ಕಡ್ಡಾಯ ಪ್ರಾಥಮಿಕ ಶಿಕ್ಷಣದ ವಿಚಾರವಾಗಿ ಮಾನ್ಯ ಸದಸ್ಯರು ಕೆಲವರು ಮಾತನಾಡಿದ್ದಾರೆ. ಕೆಲವರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಬಹಳಮಟ್ಟಿಗೆ ಯಶಸ್ವಿ ಆಗಿಲ್ಲ ಅದು ವಿಫಲವಾಗಿದೆ ಎನ್ನತಕ್ಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದು ಒಪ್ಪತಕ್ಕ ಮಾತಲ್ಲ. ನಾನು ಹೆಮ್ಮೆಯಿಂದ ಹೇಳುತ್ತೇನೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಬಹಳ ಮಟ್ಟಿಗೆ ಯಶಸ್ವಿಯಾಗಿದೆ ಎಂದು. 6 ವರ್ಷದಿಂದ 10 ವರ್ಷದವರೆಗೆ ಇರತಕ್ಕ ಮಕ್ಕಳಲ್ಲಿ ಶೇಕಡ 91 ರಷ್ಟು ಮಕ್ಕಳು ಈಗ ಪಾಠಶಾಲೆಗೆ ಬರುತ್ತಿದ್ದಾರೆ. ಪಾಠಶಾಲೆಗೆ ಬರತಕ್ಕ ಮಕ್ಕಳು ಬಿಟ್ಟುಹೋಗದಂತೆ ನೋಡುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ.

Sri K. H. PATIL (Hubli).—Are 91 per cent of the boys and girls attending the schools ? It is a suprise to us.

Sri K. V. SHANKARA GOWDA.—91 per cent have enrolled. More than 60 per cent are attending the schools.

ಮಕ್ಕಳು ಪ್ರಾಥಮಿಕ ಪಾಠಶಾಲೆಯನ್ನು ಬಿಟ್ಟುಹೋಗದಂತೆ ಅನೇಕ ಆಕರ್ಷಕ ಕಾರ್ಯಕ್ರಮಗಳನ್ನು ಜಾರಿಗೆ ಕೊಟ್ಟಿದ್ದೇವೆ. ಬಡ ಹುಡುಗರಿಗೆ ಸ್ಲೇಟು, ಪುಸ್ತಕ, ಸಮವಸ್ತ್ರಗಳು ಮತ್ತು ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನ ಹಾಜರಾತಿಗಾಗಿ ಕೊಡುವುದು, ಮಧ್ಯಾಹ್ನದ ಉಪಹಾರ ಮುಂತಾದುವನ್ನು ಕೊಡುತ್ತಿದ್ದೇವೆ. ಇದರಿಂದ ಬಹುಜನ ಮಕ್ಕಳು ಪಾಠಶಾಲೆಯನ್ನು ಬಿಡುತ್ತಿಲ್ಲ. ಸುಮಾರು 10 ಲಕ್ಷ ಪ್ರಾಥಮಿಕ ಶಾಲೆ ಮಕ್ಕಳಿಗೆ ವ್ಯಾಸಂಗಮಾಡುವವರಿಗೆ ಮಧ್ಯಾಹ್ನದ ವೇಳೆಯಲ್ಲಿ ಉಪಹಾರ ಕೊಡಲು ಏರ್ಪಾಡಾಗಿದೆ. ಫ್ರೀ ಪ್ರೈಮರಿ ಸ್ಟೇಜಿನಲ್ಲಿ 4 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ಕೊಡಲು ಏರ್ಪಾಡುಮಾಡಿದೆ. ಇವೆಲ್ಲವನ್ನೂ ಗಮನಿಸಿ ನಾವು ತುಲನಾತ್ಮಕವಾಗಿ ಪರಿಶೀಲಿಸಿದರೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಬಹಳಮಟ್ಟಿಗೆ ಯಶಸ್ವಿಯಾಗಿದೆ ಎಂದು ಹೇಳುತ್ತೇನೆ. ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ಕೊಡುವಾಗ ತರಬೇತಾಗಿರುವವರನ್ನು ಪಾಠ ಹೇಳಲು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸುತ್ತಿಲ್ಲ ಎಂದು ತಿಳಿಸಿದ್ದಾರೆ. ಇವರ ಅಭಾವವಿದ್ದರೂ ಕೂಡ ನಾವು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲೇಬೇಕು, ಗ್ರಾಮಾಂತರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲೇಬೇಕು. ಆದುದರಿಂದ ಪ್ರಾರಂಭಿಸಿದ್ದೇವೆ. ಆದರೆ ಏಕಕಾಲದಲ್ಲಿ ತರಬೇತಾದ ಉಪಾಧ್ಯಾಯರನ್ನು ಎಲ್ಲಾ ಶಾಲೆಗಳಿಗೂ ಹಾಕುವುದು ಕಷ್ಟ. ಈಗ ಇಲ್ಲಿ ನಮಲ್ಲಿ ಸುಮಾರು 70-80 ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ತರಬೇತು ಕೊಡುವ ಸಂಸ್ಥೆಗಳಿದ್ದರೂ ಕೂಡ ಸಾಕಾದಷ್ಟು ತರಬೇತಾದವರನ್ನು ಒದಗಿಸಲು ಸಾಧ್ಯವಾಗಿಲ್ಲ. ಆದಷ್ಟು ಮುಂದಿಯನ್ನು ಒದಗಿಸಲು ಸೂಕ್ತ ಕ್ರಮ ಕೈಗೊಂಡಿದ್ದೇವೆ. ಹೀಗೆ ಪ್ರಾಥಮಿಕ ಕಡ್ಡಾಯ ಶಿಕ್ಷಣ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಇನ್ನು ಪ್ರೌಢಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಜಿನ ಹಾವಳಿ ಹೆಚ್ಚಾಗಿದೆ ಎಂದು ಕೆಲವರು ಹೇಳಿದ್ದಾರೆ. ಅದರ ಬಗ್ಗೆ ಒಂದು ವಿಷಯವನ್ನು ಮುಖ್ಯವಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಯಾವ ಯಾವ ಸಂಸ್ಥೆಗಳು ಸರಕಾರದಿಂದ ಆರ್ಥಿಕ ಸಹಾಯವನ್ನು ಪಡೆಯುತ್ತಿವೆಯೋ ಆ ಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಫೀಜಿಲ್ಲ. ಅಂಥ ಸಂಸ್ಥೆಗಳಲ್ಲಿ ಎಲ್ಲಾದರೂ ಆ ಪದ್ಧತಿಯಿದ್ದರೆ ಮಾನ್ಯ ಸದಸ್ಯರು ಅದನ್ನು ಸರಕಾರದ ಗಮನಕ್ಕೆ ತಂದರೆ ಉಗ್ರ ಕ್ರಮ ಅವರ ಮೇಲೆ ಕೈಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ. ಯಾವ ಸಂಸ್ಥೆಗೂ ಕ್ಯಾಪಿಟೇಷನ್ ಫೀಜನ್ನು ತೆಗೆದುಕೊಳ್ಳಲು ಅವಕಾಶ ಕೊಡಬಾರದು. ಈಗ ಪ್ರಾಥಮಿಕ ಶಿಕ್ಷಣ ಮಾತ್ರವಲ್ಲ, ಪ್ರೌಢಶಾಲೆ ಶಿಕ್ಷಣಕ್ಕೂ ಫೀಜಿಲ್ಲ, ಅದನ್ನು ಮುಫತ್ತಾಗಿ ಕೊಡಲಾಗುತ್ತಿದೆ. ಹೈಸ್ಕೂಲಿನಲ್ಲಿ ಉಚಿತ ಶಿಕ್ಷಣವಿದೆ. ಆದುದರಿಂದ ಹೈಸ್ಕೂಲುಗಳಲ್ಲಿ ಕ್ಯಾಪಿಟೇಶನ್ ಫೀಜನ್ನು ವಿಧಿಸಬಾರದು, ನಮ್ಮಿಂದ ಗ್ರ್ಯಾಂಟ್ ಇನ್ ಏಡ್ ಪಡೆಯುತ್ತಿದ್ದರೆ ಕ್ಯಾಪಿಟೇಷನ್ ಫೀಜನ್ನು ವಿಧಿಸಲು ಅವಕಾಶವಿಲ್ಲ. ಕೆಲವು ಕಡೆ ವಿಧಿಸಿರಬಹುದು. ಅದನ್ನು ಗಮನಕ್ಕೆ ತಂದರೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಜನ್ನು ವಿಧಿಸುವ ವಿಚಾರವಲ್ಲಿ ಬಹಳ ಗೊಂದಲವಾಗಿದೆ. ಇವರಲ್ಲಿ ತಾತ್ವಿಕವಾಗಿ ನೋಡಿದರೆ ಕ್ಯಾಪಿಟೇಷನ್ ಫೀಜನ್ನು ವಿಧಿಸುವ ಸಂಸ್ಥೆ ಇರಲೇಬಾರದು ಎಂದು ಹೇಳುವ ಹಾಗಿಲ್ಲ. ಅನೇಕ ಖಾಸಗಿಯವರು ಸ್ತುತ್ಯಕಾರ್ಯವನ್ನು ಮಾಡಿದ್ದಾರೆಂದು ಹೇಳಲಿಷ್ಟಪಡುತ್ತೇನೆ. ಸರಕಾರ ಎಲ್ಲ ತಾಂತ್ರಿಕ ಶಾಲೆಗಳನ್ನೂ ಕೂಡ ತನ್ನ ಸ್ವಂತ ಹಣದಿಂದ ತೆರೆಯಲು ಸಾಧ್ಯವಿಲ್ಲ. ಎಲ್ಲ ಸರಕಾರ ತೆರೆಯಲು

(SRI K. V. SHANKARA GOWDA)

ಸಾಧ್ಯವಿಲ್ಲ ಅಂಥ ಕಡೆ ಖಾಸಗಿಯವರು ಮುಂದೆ ಬಂದು ಪ್ರಾರಂಭಿಸಿದರೆ ಅದಕ್ಕೆ ಪ್ರೋತ್ಸಾಹ ಕೊಟ್ಟರೆ ತಪ್ಪೇನೂ ಇಲ್ಲ, ಆದರೆ ಇಷ್ಟೇ ಕ್ಯಾಪಿಟೇಷನ್ ಫೀಜನ್ನು ತೆಗೆದುಕೊಳ್ಳಬೇಕೆಂದು ಒಂದು ನಿಯಮವಿರಬೇಕು. ಇದನ್ನು ಯೋಚನೆ ಮಾಡಿ ಜಾರಿಗೆ ತರಲು ಕ್ರಮ ತೆಗೆದುಕೊಂಡಿದ್ದೇವೆ. ಈ ಸಂಬಂಧದಲ್ಲಿ ವಿನಯವಾಗಿ ಒಂದು ಪ್ರಾರ್ಥನೆಮಾಡುತ್ತೇನೆ, ಬಹಳ ಉತ್ಪ್ರೇಕ್ಷೆ ಈ ಸಂದರ್ಭದಲ್ಲಿ ಮಾಡುವುದುಂಟು, ಯಾರಾದರೂ ಈ ಸಂಬಂಧವಾಗಿ ಬಂದು ಏನಾದರೂ ಹೇಳಿದರೆ ಅದು ಸತ್ಯ ಎಂದು ಭಾವಿಸಬಾರದು. ಕೆಲವು ಕಡೆ ಅಕ್ರಮವಿರಬಹುದು, ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಕೊಳ್ಳುವುದು. ಇಂಜನಿಯರಿಂಗ್ ಕಾಲೇಜಿನ ಬಗ್ಗೆ ಹೇಳುವುದಾದರೆ ಒಂದು ಸಂತೋಷದ ವಿಷಯವೇನೆಂದರೆ, ಮೊನ್ನೆ ಖಾಸಗಿ ಇಂಜನಿಯರಿಂಗ್ ಕಾಲೇಜಿನ ಅಧಿಕಾರ ವರ್ಗದವರನ್ನು ಬರಮಾಡಿದ್ದೆ, ಅವರ ಜೊತೆ ಚರ್ಚೆಮಾಡಿದೆ, ಅವರೆಲ್ಲರಿಗೂ ಕ್ಯಾಪಿಟೇಷನ್ ಫೀಸನ್ನು ತೆಗೆಯಬೇಕೆಂದು ಮನವಿ ಮಾಡಿದೆ. ಅವರೆಲ್ಲರಿಗೂ ಅನುದಾನವಿದ್ದರೆ, ಅವರೆಲ್ಲರೂ ಗ್ರ್ಯಾಂಟ್ ಇನ್-ಏಡ್ ಕೋಡ್ ಕೆಳಗೆ ಬಂದು ಒಂದೇ ಪೂಲಿಗೆ ಸೇರಬೇಕೆಂದು ಹೇಳಿದೆ. ಬಹುಶಃ ಅವರು ಅದಕ್ಕೆ ಒಪ್ಪಬಹುದೆಂದು ಕಾಣುತ್ತದೆ. ಆದುದರಿಂದ ಮುಂದಿನ ವರ್ಷದಿಂದ ಕ್ಯಾಪಿಟೇಷನ್ ಫೀಜು ಇರಲಾರದೆಂದು ನಾನು ಭಾವಿಸುತ್ತೇನೆ.

ವಿದ್ಯಾರ್ಥಿಗಳ ಅಶಿಸ್ತಿನ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ; ಇದು ಬಹಳ ಗಹನವಾದ ಮತ್ತು ಜಟಿಲವಾದ ಪ್ರಶ್ನೆ. ವಿದ್ಯಾರ್ಥಿಗಳ ಅಶಿಸ್ತು ಬಹಳ ಕಳವಳ ಉಂಟುಮಾಡುವ ವಿಷಯ. ಮಕ್ಕಳ ಗುಣ, ನಡತೆ ಬೆಳೆಯಬೇಕಾಗಿರುವಾಗ ಅದಕ್ಕೆ ಸರಿಯಾಗಿ ಗಮನಕೊಡದೆ ಬಿಟ್ಟು ಅದು ಶಿಥಿಲವಾದರೆ ಬಹಳ ಅಪಾಯಕಾರಿ. ಅದರ ಜವಾಬ್ದಾರಿಯನ್ನು ಎಲ್ಲರೂ ಹೊರಬೇಕು. ವಿದ್ಯಾರ್ಥಿಗಳ ಅಶಿಸ್ತಿಗೆ ನಾವೆಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಕಾರಣಕರ್ತರು. ಆದುದರಿಂದ ನಾನು ಈ ಸಭೆಯ ಮೂಲಕ ಪೋಷಕರು ಮತ್ತು ಜನ ನಾಯಕರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಇಂದು ಈ ವಿಷಯವನ್ನು ನಾವು ದೀರ್ಘವಾಗಿ ಆಲೋಚನೆ ಮಾಡಬೇಕು. ನಮ್ಮ ಆಶೋತ್ತರವೇನೇ ಇರಲಿ ಅದನ್ನು ಈಡೇರಿಸಿಕೊಳ್ಳುವಾಗ ಯಾವ ಮಾರ್ಗವನ್ನಾದರೂ ಅನುಸರಿಸಬಹುದು ಎಂಬ ಭಾವನೆಯನ್ನು ಬಿಡಬೇಕು, ನಮ್ಮ ಗುರಿ ಹೇಗೆ ಶುದ್ಧವಾಗಿರಬೇಕೋ ಹಾಗೆಯೇ ನಾವು ಅನುಸರಿಸುವ ಮಾರ್ಗವೂ ಕೂಡ ಶುದ್ಧವಾಗಿರಬೇಕು. ದೇಶದ ವಿದ್ಯಾರ್ಥಿಗಳಲ್ಲಿರುವ ಅಲ್ಲದಸಲ್ಲದ ಗೊಂದಲಮಾಡುವ ಭಾವನೆ, ಅಶಿಸ್ತು ಉಂಟುಮಾಡುವ ಭಾವನೆ ಇವೆಲ್ಲವೂ ಹೋಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡುವ ಇತರ ಕೆಲವು ಕ್ರಮಗಳನ್ನು ಜಾರಿಗೆ ಕೊಡಬೇಕಾಗಿದೆ, ಇದರ ಬಗ್ಗೆ ಕೊಠಾರಿ ಕಮಿಷನ್‌ನವರು ಒಂದು ರೀತಿಯಲ್ಲಿ ಶಿಫಾರ್ಸು ಮಾಡಿದ್ದಾರೆ, ಅದನ್ನು ನೋಡಿ ಯಾವರೀತಿ ಜಾರಿಗೆ ತರಬೇಕೆಂಬುದನ್ನು ತೀರ್ಮಾನಿಸುತ್ತೇವೆ ಎಂದು ಆಶ್ವಾಸನೆ ಕೊಡುತ್ತೇನೆ.

ಪಠ್ಯ ಪುಸ್ತಕಗಳ ವಿಚಾರದಲ್ಲಿ ಕೆಲವರು ಕೆಲವು ವಿಚಾರಗಳನ್ನು ಹೇಳಿದ್ದಾರೆ, ಅದನ್ನು ಮುಚ್ಚುಮರೆಯಿಲ್ಲದೆ ಒಪ್ಪುತ್ತೇನೆ. ಈಗ ಬರುವ ಪುಸ್ತಕಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಿಲ್ಲ, ದೇಶಪ್ರೇಮವನ್ನು ಪ್ರತಿಬಿಂಬಿಸುವುದಿಲ್ಲ. ಇದಕ್ಕೆ ಕೆಲವು ಕಾರಣಗಳಿವೆ, ನಾವು ಕೊಡುವ ಸಂಭಾವನೆ ಬಹಳ ಕಡಮೆ, ಪುಸ್ತಕ ಬರೆಯುವವರಿಗೆ ಸಾಕಷ್ಟು ಪ್ರತಿಫಲ ದೊರೆಯುವುದಿಲ್ಲ. ಆದುದರಿಂದ ಒಳ್ಳೆಯ ಮೇಧಾವಂತರು ಬರೆಯುವ ಪುಸ್ತಕಗಳು ದೊರೆಯುತ್ತಿಲ್ಲ. ಧೀಶಕ್ತಿ ಇರುವವರು, ಪಂಡಿತರು ಪಠ್ಯ ಪುಸ್ತಕಗಳನ್ನು ಬರೆಯಲು ಮುಂದೆ ಬರುತ್ತಿಲ್ಲ. ಆದುದರಿಂದ ಇದಕ್ಕೆ ಹೆಚ್ಚಿನ ಸಂಭಾವನೆ ಕೊಟ್ಟು ಪುಸ್ತಕಗಳನ್ನು ಬರೆಯುವ ವ್ಯವಸ್ಥೆಯನ್ನು ಇನ್ನು ಮುಂದೆ ಮಾಡಬೇಕಾಗಿದೆ. ಬರುವ ವರ್ಷ ಸರ್ಕಾರ ಇಂಥ ಕಾರ್ಯಕ್ರಮ ಕೈಗೊಳ್ಳುತ್ತದೆ ಮತ್ತು ಸಕಾಲದಲ್ಲಿ ಪುಸ್ತಕಗಳು ದೊರೆಯುತ್ತಿಲ್ಲ ಎಂಬ ದೂರು ಇದೆ, ಇದರಲ್ಲಿ ಸ್ವಲ್ಪ ಸತ್ಯಾಂಶವಿದೆ, ಇದಕ್ಕೆ ಕಾರಣ ಪುಸ್ತಕಗಳನ್ನು ಮಾರುವ ಏಜೆಂಟರು. ಅವರು ಮೊದಲು ಬೇಕಾದ ಪುಸ್ತಕಗಳ ಸಂಗ್ರಹ ಮಾಡದೆ ತೊಂದರೆಯಾಗುತ್ತಿದೆ. ಮೊದಲೇ ಹೆಚ್ಚು ಸಂಗ್ರಹ ಮಾಡಿದರೆ ಅದಕ್ಕೆ ಹಾಕಿರುವ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ ಎಂದು ಅವರು ಕೇವಲ ತರಗತಿ ಪ್ರಾರಂಭವಾಗುವುದಕ್ಕೆ 8—10 ದಿವಸಗಳ ಮುಂದೆ ಪಠ್ಯ ಪುಸ್ತಕಗಳ ಶೇಖರಣೆ ಮಾಡುತ್ತಾರೆ. ಹೀಗಾಗಿ ಪಠ್ಯ ಪುಸ್ತಕಗಳು ಸಕಾಲದಲ್ಲಿ ಒದಗುವುದಕ್ಕೆ ತೊಂದರೆಯಾಗಿದೆ. ನಾವು ಬಹಳ ಮೊದಲೇ ಪ್ರಿಂಟ್ ಮಾಡಲು ಕ್ರಮ ಕೈಕೊಳ್ಳೋಣವೆಂದರೆ ಪ್ರೆಸ್ಸಿನಲ್ಲಿ ಅಗಾಧ ಪ್ರಮಾಣದಲ್ಲಿ ಜಾಗ ಬೇಕಾಗುತ್ತದೆ, ಪುಸ್ತಕಗಳನ್ನು ಶೇಖರಣೆ ಮಾಡಲು ಸಾಕಾದಷ್ಟು ಜಾಗವಿಲ್ಲ. ಆದುದರಿಂದ ಫೇಸ್ ಮಾಡಿ ಮುದ್ರಿಸಬೇಕು. ಮತ್ತು ಜಾಗ್ರತೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಮಾರಾಟಗಾರರಿಗೆ ಪ್ರೋತ್ಸಾಹ

ಕೊಡಲು ಈಗ ಕೊಡುವ ಮಾರ್ಜಿನ್ ಇರುವುದನ್ನು ವೆತ್ಯಾಸಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಫೆಬ್ರವರಿ—ಮಾರ್ಚಿಯಲ್ಲಿ ಪುಸ್ತಕಗಳನ್ನು ಕೊಂಡರೆ ಒಂದು ಕಮಿಷನ್, ಮೇ—ಜೂನ್‌ನಲ್ಲಿ ಕೊಂಡರೆ ಒಂದು ಕಮಿಷನ್, ಜುಲೈ—ಆಗಸ್ಟಿನಲ್ಲಿ ಕೊಂಡರೆ ಒಂದು ಕಮಿಷನ್ ಹೀಗೆ ಕೊಡಲು ಏರ್ಪಾಡು ಮಾಡಬೇಕೆಂದಿದ್ದೇವೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಕೊಂಡಾಗ ಹೆಚ್ಚು ಕಮಿಷನ್ ಕೊಟ್ಟರೆ ಶೇಖರಣೆ ಮೊದಲೇ ಮಾಡಿ ಸಕಾಲದಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕಗಳು ದೊರೆಯಲು ಅವಕಾಶವಾಗುತ್ತದೆ ಎಂದು ಭಾವಿಸಿ ಹಾಗೆ ಮಾಡಲು ವಿಚಾರ ಮಾಡುತ್ತಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲರು ಬಹಳ ಉದ್ರೇಕಪೂರಿತವಾಗಿ ಭಾಷಣ ಮಾಡಿದ್ದಾರೆ. ಅವರ ಭಾವನೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಈ ಸಂದರ್ಭದಲ್ಲಿ ಒಂದು ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಸರ್ಕಾರದ ಜವಾಬ್ದಾರಿಯನ್ನು ಹೊಂದಿರತಕ್ಕ ನಾನಾಗಲೀ ನನ್ನ ಮಾನ್ಯ ಸಹೋದ್ಯೋಗಿಗಳಾಗಲೀ ಎಲ್ಲರೂ ಆತ್ಮ ಸಾಕ್ಷಿಯಾಗಿ ಕೆಲಸ ಮಾಡುತ್ತೇವೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಆತ್ಮ ಸಾಕ್ಷಿ ಎಂಬುದು ಪ್ರತಿಯೊಬ್ಬರಿಗೂ ಸಂಬಂಧಿಸಿದ ವಿಷಯ. ಹೇಳುವವನಿಗೂ ಕೇಳುವವನಿಗೂ ಸಂಬಂಧಪಟ್ಟ ವಿಚಾರ. ಆತ್ಮ ಶೋಧನೆ ಪ್ರತಿಯೊಬ್ಬರೂ ಮಾಡಬೇಕು. ಇದರಲ್ಲಿ ಸರ್ಕಾರ ಪಕ್ಷಪಾತ ತೋರಿಸುತ್ತಿಲ್ಲ. ಗುಂಪಿನ ದೃಷ್ಟಿಯಿಂದ ಕೆಲಸಮಾಡುತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ಆತ್ಮ ಶೋಧನೆಗೆ ಟೈಮ್ ಲಿಮಿಟ್ ಏನಾದರೂ ಇದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಆತ್ಮಶೋಧನೆ ಹುಟ್ಟಿದಂದಿನಿಂದ ಸಾಯುವವರೆಗೂ ಇರಬೇಕು. ಸ್ವಪ್ನ ಜಾಗ್ರತೆ ಸುಷುಪ್ತಿಯಲ್ಲಿಯೂ ಇರಬೇಕು.

ಶ್ರೀ ಬಿ. ಪಿ. ಗಂಗಾಧರ್.—ಗೋಪಾಲಗೌಡರು ಕೇಳಿರುವುದು, ಸತ್ತುಹೋದ ಮೇಲೆ ಮಾಡುವುದೋ, ಎಂದು.

ಶ್ರೀ ಕೆ. ವಿ. ಶಂಕರ ಗೌಡ.—ಇನ್ನು ಮಾನ್ಯ ಶ್ರೀ ಶಾಮಣ್ಣನವರು ಕಮರ್ಷಿಯಲ್ ಶಿಕ್ಷಣ ಸಂಸ್ಥೆಗಳಿಗೆ ಅನುದಾನಗಳನ್ನು ಕೊಡುತ್ತಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇದು ವಿಚಾರಣೆ ಮಾಡತಕ್ಕ ವಿಷಯ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಹೇಳಿದ ಮಾತು ಅಸತ್ಯವೇ, ಅಥವಾ ಸತ್ಯಕ್ಕೆ ದೂರವಾದುದೇ ಎಂದು ಹೇಳಿಲ್ಲ.

ಶ್ರೀ ಕೆ. ವಿ. ಶಂಕರ ಗೌಡ.—ಆ ವಿಷಯವನ್ನು ನೀವು ಸರಿಯಾಗಿ ತಿಳಿದುಕೊಳ್ಳದೆ ಹೇಳುತ್ತೀರಿ ಎಂದು ನಾನು ಹೇಳಲಿಷ್ಟಪಡುತ್ತೇನೆ.

1956ನೇ ಇಸವಿ, ಅಂದರೆ, ಸ್ಟೇಟ್ ರಿ-ಆರ್ಗನೈಸೇಷನ್‌ಗೆ ಮುಂಚೆ ಯಾವ ಯಾವ ಸಂಸ್ಥೆಗಳಿಗೆ ಇದನ್ನು ಕೊಡುತ್ತಿದ್ದೆವೋ, ಅಂಥ ಸಂಸ್ಥೆಗಳಿಗೆ ಮಾತ್ರ ಕೊಡುತ್ತಿದ್ದೇವೆ. ಮತ್ತು ಹೊಸದಾಗಿ ಆದ ಸಂಸ್ಥೆಗಳಿಗೆ ಕೊಡುತ್ತಾ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಯಾವ ಸಂಸ್ಥೆಗಳಿಗೂ ಖಂಡಿತವಾಗಿಯೂ ಕೊಡುತ್ತಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕೆ. ವಿ. ಶಂಕರ ಗೌಡ.—ಇದಕ್ಕೆ ಕಾರಣವೇನೆಂದರೆ, ಆರ್ಥಿಕ ಸಹಾಯವನ್ನು ಕೊಡುವುದಕ್ಕೆ ನಿಯಮ ಇನ್ನೂ ಆಗಿಲ್ಲ ; ಗ್ರ್ಯಾಂಟ್ ಇನ್ ಎಯಿಡ್ ರೂಲ್ಸ್ ಪರಿಶೀಲನೆಯಲ್ಲಿದೆ. ಅದರಿಂದ ಕಾಮರ್ಸ್ ಕಾಲೇಜುಗಳಿಗೂ ಕೊಡುವಂತಹ ವಿಚಾರ ಇದೆ. ಅದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಒಂದು ಯೂನಿವರ್ಸಿಟಿ ಆಗಬೇಕೆಂದು ಮಾನ್ಯ ಸದಸ್ಯರನೇಕರು ಒತ್ತಾಯ ಮಾಡಿದ್ದಾರೆ. ಒಬ್ಬ ಮಾನ್ಯ ಸದಸ್ಯರು ವಿಶ್ವಕ್ಕೆಲ್ಲಾ ಒಂದೇ ವಿಶ್ವವಿದ್ಯಾನಿಲಯ ಇರಬೇಕು ಎಂದು ಹೇಳಿದರು. ವಿಶ್ವವಿದ್ಯಾನಿಲಯಗಳು ಹೆಚ್ಚು ಇದ್ದಷ್ಟೂ ಒಳ್ಳೆಯದು. ವಿಶ್ವವಿದ್ಯಾನಿಲಯಗಳಲ್ಲಿ ಬೋಧನ ಕ್ರಮ ಮಾತ್ರವಲ್ಲದೆ ಸಂಶೋಧನೆ ಕೂಡ ಇದೆ. ಈಗ ಸಂಶೋಧನೆಗಳು ಬೇರೆ ಬೇರೆ ಪ್ರಮಾಣದಲ್ಲಿ, ನಾಗಾಲೋಟದಲ್ಲಿ ಓಡುತ್ತಿದೆ. ಇಂಥ ಸಂಶೋಧನೆಗಳಿಗೆ ಹೆಚ್ಚು ಹೆಚ್ಚು ಅನುಕೂಲಗಳನ್ನು ಒದಗಿಸುವುದು ಅವಶ್ಯಕ ಆದ್ದರಿಂದ ಹೆಚ್ಚು ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವುದರಲ್ಲಿ ಅಭ್ಯಂತರವಿಲ್ಲ. ಆದರೆ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ

(ಶ್ರೀ ಕೆ. ವಿ. ಶಂಕರ ಗೌಡ)

ಹೆಚ್ಚಿಗೆ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡತಕ್ಕದ್ದು ಕಷ್ಟ. ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಆಗಬೇಕು, ಮಲೆನಾಡಿಗೆ ಒಂದು ಆಗಬೇಕು, ಚಿತ್ರದುರ್ಗಕ್ಕೂ ಒಂದು ಆಗಬೇಕು. ಆದ್ದರಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಉಪಾಧ್ಯಾಯರು ರಾಜಕೀಯದಲ್ಲಿ ಪ್ರವೇಶ ಮಾಡುತ್ತಿದ್ದಾರೆಂದು ಒಂದು ದೂರು ಬಂತು. ಈ ರೀತಿ ಯಾರಾದರೂ ರಾಜಕೀಯದಲ್ಲಿ ಕೈಹಾಕಿದರೆ, ಅದು ಅಕ್ಷಮ್ಯ, ಮತ್ತು ಅಪರಾಧ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಹಾಕದೆ ಇರುವವರು ಯಾರು ? ನಾನು ಹೇಳುವುದು ಅತ್ಮ ಸಂಶೋಧನೆ ನಡೆಸಿ ಬಿಟ್ಟರೆ, "what is wrong with them" is not the point but what is right with them ಎಂದು ಗೊತ್ತಾಗುತ್ತದೆ.

ಶ್ರೀ ಕೆ. ವಿ. ಶಂಕರ ಗೌಡ.—ನನಗೆ ಬಂದಿರತಕ್ಕ ಸಮಾಚಾರದ ಪ್ರಕಾರ ನಿಜವಾಗಿ ಅವರನ್ನು ರಾಜಕೀಯಕ್ಕೆ ಹೆಚ್ಚಾಗಿ ಉಪಯೋಗಿಸಿಕೊಂಡವರು ವಿರೋಧ ಪಕ್ಷದವರು ಎಂದು ತಿಳಿದಿದ್ದೇನೆ. (ನಗು)

ಶ್ರೀ ಎಂ. ಎಸ್. ಕೃಷ್ಣನ್.—ಚುನಾವಣೆ ಕಾಲದಲ್ಲಿ ಕಾಂಗ್ರೆಸ್ಸಿನವರು ಉಪಯೋಗಿಸಿಕೊಳ್ಳಲಿಲ್ಲವೇ ?

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಒಂದು ವೇಳೆ ಅವರು ವಿರೋಧಪಕ್ಷಕ್ಕೆ ಸಹಾಯ ಮಾಡಿದ್ದಾರೆಂದರೆ ಈ ಜ್ಞಾನಿಗಳು ಆ ಪಕ್ಷಕ್ಕೆ ಸಹಾಯ ಮಾಡಬೇಕಾಗಿದ್ದರೆ ವಿರೋಧ ಪಕ್ಷ ಎಷ್ಟು ಉತ್ತಮ ಮಟ್ಟದಲ್ಲಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ನಾನು ಹೇಳಿದ ವಿಷಯವನ್ನು ಮಾನ್ಯ ಸದಸ್ಯರು ಒಪ್ಪಿಕೊಂಡ ಹಾಗೆ ಆಯ್ತು.

[MR. SPEAKER in the Chair]

ಶ್ರೀ ಬಿ. ಪಿ. ಗಂಗಾಧರ್.—ಇಂಥ ಕೆಟ್ಟ ಭಾವನೆ ಬರಬಾರದು. ಅಕಸ್ಮಾತ್ ಯಾರಾದರೂ ಹೇಳಿದರೂ ಕೂಡ ತಾವು ಅದನ್ನು ನಂಬಬಾರದು.

ಶ್ರೀ ಕೆ. ವಿ. ಶಂಕರ ಗೌಡ.—ಆದ್ದರಿಂದ ಉಪಾಧ್ಯಾಯರುಗಳನ್ನು ರಾಜಕೀಯಕ್ಕೆ ಉಪಯೋಗಿಸಿಕೊಳ್ಳತಕ್ಕದ್ದನ್ನು ನಿಲ್ಲಿಸಬೇಕು. ಯಾರಾದರೂ ಪ್ರವೇಶ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದರೆ, ಖಂಡಿತವಾಗಿಯೂ ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಅದಕ್ಕೆ ಸರಿಯಾದ ಮಾಹಿತಿಯನ್ನು ತಿಳಿಸಬೇಕಷ್ಟೆ.

ಇನ್ನು ಈ ವರ್ಗಾವಣೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ತೊಡಗಿರತಕ್ಕ ಉಪಾಧ್ಯಾಯರುಗಳ ಸಂಖ್ಯೆ ಹೆಚ್ಚಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಕೀಯಕ್ಕೆ ಪ್ರವೇಶ ಮಾಡಿದರೆ ಕ್ರಮ ತೆಗೆದುಕೊಳ್ಳುವುದು ಎಂದು ಹೇಳಿದಿರಿ. ಅಂದರೆ, ಕಾಂಗ್ರೆಸ್‌ಗೆ ವಿರೋಧವಾಗಿ ಪ್ರವೇಶ ಮಾಡಿದರೆ ಮಾತ್ರ ತೆಗೆದುಕೊಳ್ಳುತ್ತೀರಾ ? ಅಥವಾ ಕಾಂಗ್ರೆಸ್ ಪರವಾಗಿ ಮಾಡಿದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ಉಪಾಧ್ಯಾಯರುಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ಇವರನ್ನು ಬೇರೆ ಬೇರೆ ಕಡೆ ವರ್ಗಮಾಡತಕ್ಕದ್ದು ಬಹಳ ಕಷ್ಟ. ಎಲ್ಲಿಯವರೆಗೆ ದೂರುಗಳು ಬರುವುದಿಲ್ಲವೋ ಅಲ್ಲಿಯವರೆಗೆ ಅವರನ್ನು 5 ವರ್ಷವಾದರೂ, 8 ವರ್ಷವಾದರೂ, ಒಂದೇ ಸ್ಥಳದಲ್ಲಿ ಇಡಬಹುದೆಂದು ಸರ್ಕಾರದ ನಿಯಮವಿದೆ. ಎಲ್ಲಿ ದೂರುಗಳು ಇವೆಯೋ, ಅಲ್ಲಿ ಮಾತ್ರ ಅವರನ್ನು ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ವರ್ಗಾವಣೆ ಮಾಡುವುದು ಬಹಳ ಕಷ್ಟ. ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯ ಇಲ್ಲ. ಆದ್ದರಿಂದ ದೂರ ದೂರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ತಕ್ಷಣ ಏರ್ಪಾಡು ಮಾಡುವುದಕ್ಕೆ ಹಣವಿಲ್ಲ. ಆದ್ದರಿಂದ ಅವರಿಗೆ ಹೆಚ್ಚಿಗೆ ಕೆಲಸಕ್ಕೆ ತೊಂದರೆಯಾಗಬಾರದು ಮತ್ತು ಅವರು ಪಾಠಶಾಲೆಗಳನ್ನು ಮರೆಯಬಾರದು. ಈ ದೃಷ್ಟಿಯಿಂದ ಎಲ್ಲೆಲ್ಲಿ ಸೂಕ್ತವೆಂದು ಕಂಡು ಬಂದಿದೆಯೋ, ಅಲ್ಲಿಗೆ ವರ್ಗಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಕೊನೆಯದಾಗಿ ಮಾನ್ಯ ಸದಸ್ಯರು ಎತ್ತಿರತಕ್ಕಂತಹ ಕೆಲವು ಮುಖ್ಯವಾದಂತಹ ವಿಚಾರಗಳಿಗೆ ಉತ್ತರ ಕೊಟ್ಟಿದ್ದೇನೆ. ಯಾವುದಾದರೂ ಬಿಟ್ಟು ಹೋಗಿದ್ದರೆ, ಅದನ್ನೆಲ್ಲಾ ಪಟ್ಟಿಮಾಡಿದ್ದೇನೆ. ಅದನ್ನು ಖಂಡಿತವಾಗಿ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ತಾವು ಅಪ್ಪಣೆ ಕೊಡಿಸಿದರೆ ಒಂದೆರಡು ವಿಷಯಗಳ ಮೇಲೆ ಕ್ಲಾರಿಫಿಕೇಶನ್ಸ್ ಕೇಳಬೇಕೆಂದಿದ್ದೇನೆ.

Mr. SPEAKER.—I will allow it till two minutes to TWO.

ಶ್ರೀ ಎ. ಆರ್. ಬದರಿ ನಾರಾಯಣ್ (ಶಿವಮೊಗ್ಗ).—ನನ್ನ ಪ್ರಶ್ನೆ ಪೆಂಡಿಂಗ್‌ನಲ್ಲಿದೆ, ಅದಕ್ಕೆ ಉತ್ತರ ಕೊಡಲಿಲ್ಲ.

ಶ್ರೀ ಕೆ. ವಿ. ಶಂಕರ ಗೌಡ.—ಪ್ರತಿಯೊಂದು ಜಿಲ್ಲೆಗೂ ಆಗುವುದರಲ್ಲಿ ಅಭ್ಯಂತರವಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎ. ಆರ್. ಬದರಿನಾರಾಯಣ್.—ಮಂಗಳೂರು, ಹಾಸನ, ಚಿಕ್ಕಮಗಳೂರು, ಕೊಡಗು ಮಲೆನಾಡು ಎಲ್ಲಾ ಕಡೆಗೂ ಮಾಡಬೇಕೆಂದು ಕೇಳಿದ್ದೇವೆ.

ಶ್ರೀ ಕೆ. ವಿ. ಶಂಕರ ಗೌಡ.—ಈಗ ಹಣವಿಲ್ಲ. ಹಣ ಬಂದ ತಕ್ಷಣ ಎಲ್ಲಾಕಡೆಗೂ ಮಾಡುತ್ತೇವೆ. ಅದರಲ್ಲೂ ನಿಮ್ಮ ಮಲೆನಾಡಿಗೆ ಮೊದಲು ಮಾಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಮಂತ್ರಿಗಳು ಮಾಡಿದ ಭಾಷಣದಲ್ಲಿ ಒಂದು ಗಮನಾರ್ಹವಾದ ವಿಚಾರವನ್ನು ಇಲ್ಲಿ ಹೇಳಿದರು. ಅದು ಈ ಸಭೆಯಲ್ಲಿ ಎಲ್ಲರ ಹಾಗೂ ದೇಶದ ಗಮನವನ್ನು ಸೆಳೆಯತಕ್ಕ ವಿಷಯ. ಅದೇನೆಂದರೆ ಮ್ಯಾನ್‌ಪವರ್ ರಿಕ್ವೈರ್‌ಮೆಂಟ್ಸ್ ಬಗ್ಗೆ ಹೇಳಿದರು. ಇದು ಬಹಳ ಮುಖ್ಯವಾದುದು. ಇವೊತ್ತಿನ ದಿವಸ ದೇಶದಲ್ಲಿ ಯಾವರೀತಿಯಾಗಿ ಬದಲಾವಣೆಯಾಗುತ್ತಿದೆ ಎನ್ನುವುದನ್ನು ಎಲ್ಲರೂ ಗಮನಿಸಬೇಕು. ಈಗಾಗಲೇ ಬಿ. ಇ. ಪಾಸುಮಾಡಿಕೊಂಡು ಎಲ್ಲ ಮೇಧಾವಿಗಳೂ ಉದರಪೋಷಣೆಗಾಗಿ ಅಲೆಯುತಕ್ಕ ಕಾಲ ಈಗ ಬಂದಿದೆ. ಆದುದರಿಂದ ಇದು ಬಹಳ ದೊಡ್ಡ ಪ್ರಶ್ನೆ. ಮ್ಯಾನ್‌ಪವರ್ ಟೋಟಲಿಟೇರಿಯನ್ ಸ್ಟೇಟ್‌ನಲ್ಲಿ ಹೇಗಿರಬೇಕು ಎನ್ನುವುದನ್ನು ಸರಿಯಾಗಿ ಪರೀಕ್ಷೆ ಮಾಡಿ ಮೊದಲಿಂದಲೂ ಇರುವ ಹತ್ತನೇ ವರ್ಗ ಹಾಗೂ ಹನ್ನೊಂದನೇ ವರ್ಗದಲ್ಲಿ ಯಾವ ರೀತಿಯಾದ ಡೈವರ್ಸಿಫೈಡ್ ಕೋರ್ಸ್‌ಗಳು ಇರಬೇಕು ಎನ್ನುವುದನ್ನೆಲ್ಲಾ ವಿಚಾರಮಾಡಿ ಕೊಠಾರಿ ಕಮಿಷನ್ನಿನವರು ಸ್ವಲ್ಪ ಅವರ ವರದಿಯಲ್ಲಿ ಹೇಳಿದ್ದಾರೆ ಮತ್ತು ಇದು ಬಹಳ ಸ್ವಾರಸ್ಯವಾಗಿದೆ. ಇದೇ ರೀತಿ ನಮ್ಮ ಸಂಸ್ಥಾನದಲ್ಲೂ ಮಾಡಲು ಒಂದು ಹೈ ಪವರು ಕಮಿಟಿ ಮಾಡುತ್ತೀರಾ? ಹಾಗೆ ಮಾಡಿದರೆ ಇದನ್ನೆಲ್ಲಾ ವಿಚಾರಮಾಡಿ ಹೇಗೆ ಮಾಡಬಹುದು ಮತ್ತು ಇದರ ರಿಕ್ವೈರ್‌ಮೆಂಟ್ಸ್‌ಗಳು ಯಾವರೀತಿ ಇರಬೇಕು ಎನ್ನುವ ವಿಚಾರದಲ್ಲಿ ಶೀಘ್ರವಾಗಿ ಯೋಚನೆ ಮಾಡಿ ಕಾರ್ಯಕ್ರಮ ಕೈಗೊಳ್ಳಲು ಇಂತಹ ಒಂದು ಕಮಿಟಿ ನೇಮಿಸುತ್ತೀರಾ?

ಶ್ರೀ ಕೆ. ವಿ. ಶಂಕರ ಗೌಡ.—ಇದಕ್ಕೆ ಯಾವ ಕಮಿಟಿಯ ಅವಶ್ಯಕತೆಯೂ ಇದ್ದಹಾಗೆ ಕಾಣುವುದಿಲ್ಲ. ಈಗಾಗಲೇ ನಮ್ಮ ರಾಜ್ಯದಲ್ಲೇ ರೀಸರ್ಚ್ ಬ್ಯೂರೋ ಹಾಗೂ ಇವಾಲ್ಯುಯೇಷನ್ ಯೂನಿಟ್‌ಗಳು ಇವೆ ಮತ್ತು ಈ ದಿಸೆಯಲ್ಲಿ ಕೆಲಸ ಮಾಡುತ್ತಿವೆ ಮತ್ತು ಇವರು ಸಕಾಲದಲ್ಲಿ ಸರಕಾರಕ್ಕೆ ಸಾಕಾದಷ್ಟು ಶಿಫಾರಸುಗಳನ್ನು ಮಾಡುತ್ತಿದ್ದಾರೆ. ಅದನ್ನೇ ಸರಕಾರವೂ ಅನುಸರಿಸಿಕೊಂಡು ಅದನ್ನು ಜಾರಿಗೆ ಕೊಡಲು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ತ್ರಿಭಾಷಾ ಸೂತ್ರದ ಬಗ್ಗೆ ನಮಗೆ ಯಾವ ತೊಂದರೆಯೂ ಬಂದಿಲ್ಲ ಎನ್ನುವ ಅಭಿಪ್ರಾಯವನ್ನು ಮಂತ್ರಿಗಳು ಹೇಳಿದರು. ಇದರ ಬಗ್ಗೆ ನನ್ನ ಒಂದು ಅಭಿಪ್ರಾಯವನ್ನು ಇಲ್ಲಿ ಹೇಳಬೇಕಾಗಿದೆ. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ಹಿಂದಿಯನ್ನು ಕಡ್ಡಾಯವಾಗಿ ಹೊರಿಸಿದರೆ ಅದನ್ನು ಓದುವುದು ಕಷ್ಟವಾಗುತ್ತದೆ. ಅಲ್ಲದೆ ಎಷ್ಟೋ ಹುಡುಗರು ಫೇಲ್ ಆಗುತ್ತಿದ್ದಾರೆ. ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಇಂಗ್ಲಿಷನ್ನು ತೆಗೆದರೂ ಏನೂ ಹಾನಿಯಾಗುವುದಿಲ್ಲ. ಹಿಂದಿಯನ್ನು ತೆಗೆದು ಕನ್ನಡವನ್ನು ಮಾಧ್ಯಮವಾಗಿ ಇಟ್ಟುಕೊಳ್ಳಿ. ಹಿಂದಿ ಹಾಗೂ ಇಂಗ್ಲಿಷನ್ನು ಬಿಹಾರ್ ಸರಕಾರ ಮಾಡಿರುವ ಹಾಗೆ ಆಪ್‌ಷನಲ್ ಸಬ್‌ಜೆಕ್ಟ್‌ನಂತೆ ಮಾಡಿ. ಪ್ರೈಮರಿ ಹಾಗೂ ಸೆಕಂಡರಿ ಶಾಲೆಗಳಲ್ಲಿ ಹಿಂದಿಯನ್ನು ಒತ್ತಾಯವಾಗಿ ಹೇರಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರ ಗೌಡ.—ಇದು ಸತ್ಯಕ್ಕೆ ದೂರವಾದ ಮಾತು. ಪರೀಕ್ಷೆಗಳಲ್ಲಿ ಕಾಲೇಜು ಗಳಲ್ಲಿ ಹಾಗೂ ಸ್ಕೂಲುಗಳಲ್ಲಿ ಹಿಂದಿಗೆ ಕುಳಿತುಕೊಳ್ಳಬೇಕಾದುದು ಇಲ್ಲ ಮತ್ತು ಕಡ್ಡಾಯವಾಗಿ ಯಾರೂ ಓದಬೇಕಾಗಿಲ್ಲ, ಹಾಗಿದ್ದರೂ ಸುಮಾರು 90 ಸಾವಿರ ವಿದ್ಯಾರ್ಥಿಗಳು ಹಿಂದಿ ಪರೀಕ್ಷೆಗಳಿಗೆ ಕುಳಿತುಕೊಂಡು ಪಾಸು ಮಾಡುತ್ತಿದ್ದಾರೆ. ಹಿಂದಿ ಒಂದು ರಾಷ್ಟ್ರ ಭಾಷೆಯಾಗಿದೆ. ಮತ್ತು ನಮ್ಮ ದೇಶಕ್ಕೆ ಒಂದು ರಾಷ್ಟ್ರ ಭಾಷೆ ಇರಬೇಕು. ಈಗ ಇಂಗ್ಲಿಷ್‌ನಲ್ಲೂ ಕೂಡ ಅನೇಕ ವಿದ್ಯಾರ್ಥಿ ಗಳು ಓದಿದರೂ ಫೇಲ್ ಆಗುತ್ತಿದ್ದಾರೆ. ಅದರಲ್ಲೂ ಇಂಗ್ಲಿಷನ್ನೇ ಹೆಚ್ಚು ಓದಬೇಕೆಂದು ಬಯಸು ತ್ತಾರೆ. ಅದರಂತೆ ಹಿಂದಿಯಲ್ಲೂ ಫೇಲ್ ಆಗುತ್ತಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ರೂರಲ್).—ಮಾನ್ಯ ಸಚಿವರು ಮುಂಬಯಿ ಕರ್ಣಾಟಕದಲ್ಲಿದ್ದ ಬೋರ್ಡು ಸ್ಕೂಲುಗಳಲ್ಲಿದ್ದ ಪ್ರಾಥಮಿಕ ಶಿಕ್ಷಕರು 63ನೇ ಇಸವಿಯಲ್ಲಿ ರಿಟೈರು ಆಗಿದ್ದರೂ ಅವರಿಗೆ ಪೆನ್‌ಷನ್ ಕೊಡುವುದಾಗಿ ಸರಕಾರ ಆಗಲೇ ಆಶ್ವಾಸನೆ ಕೊಟ್ಟಿತ್ತು. ಆದರೆ ಇದುವರೆಗೂ ಅವರಿಗೆ ಪೆನ್‌ಷನ್ ಬರಲಿಲ್ಲ. ಈಗಲಾದರೂ ಅವರಿಗೆ ಪೆನ್‌ಷನ್ ಕೊಡಿಸಲು ಮತ್ತು ಅವರು ಜೀವಂತ ಇರುವಾಗ ಪೆನ್‌ಷನ್ ಕೊಡಿಸಲು ಸಾಧ್ಯವೇ ?

ಶ್ರೀ ಕೆ. ವಿ. ಶಂಕರ ಗೌಡ.—ಮಾನ್ಯ ಸದಸ್ಯರು ಅಷ್ಟು ನಿರಾಶರಾಗಬೇಕಾಗಿಲ್ಲ. ವಿಷಯವೇನು ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಚಿವರು ಮೈಸೂರು ವಿಶ್ವವಿದ್ಯಾನಿಲಯದವರು ಮಹಾರಾಜಾ ಹಾಗೂ ಯುವರಾಜಾ ಕಾಲೇಜುಗಳಲ್ಲಿರುವ ಉಪಾಧ್ಯಾಯರುಗಳಿಗೆ ಹಾಗೂ ಇನ್ನಿತರ ನೌಕರ ವರ್ಗದವರಿಗೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರು ಒಪ್ಪಿರುವಂತೆ ಮೈಸೂರು ಯೂನಿ ವರ್ಸಿಟಿಗೆ ಸೇಕಡಾ 80ರಷ್ಟು ಹಣ ಕೊಡುತ್ತಾರೆ. ಆದರೂ ಇದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಟ್ಟಾಗ ಇವರ ಸ್ಕೀಂಗಳನ್ನು ಇಲ್ಲಿ ಮಾಡಲು ಸಾಧ್ಯವಿಲ್ಲ ಎನ್ನುವಂತೆ ಹೇಳಿದರು. ಇದರಿಂದೇನಾಗುತ್ತದೆ ಎಂದರೆ, ಈಗಾಗಲೇ ನಿಮ್ಮ ಉದ್ದೇಶದಂತೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರು ಯೂನಿವರ್ಸಿಟಿ ಟೀಚರುಗಳಿಗೆ ಉತ್ತಮವಾದ ಸ್ಕೇಲ್ಸ್ ಕೊಡಬೇಕು ಎನ್ನುವ ನಿಯಮವನ್ನು ಮೈಸೂರು ವಿಶ್ವವಿದ್ಯಾನಿಲಯದವರು ಆಚರಣೆಗೆ ತರಲು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನಂತೆ ಒಪ್ಪಿಕೊಂಡಿದ್ದಾರೆ. ಆದರೆ ಈಗ ಇದನ್ನು ಕಾರ್ಯಗತ ಮಾಡುವ ಕಾಲ ಬಂದಿರುವಾಗ ಮೈಸೂರು ಸರಕಾರ ಆಗುವುದಿಲ್ಲ ಎಂದರೆ ಇಲ್ಲದ ತೊಂದರೆಗಳಾಗುತ್ತವೆ ಮತ್ತು ಇಲ್ಲದ ಗೊಂದಲಗಳಿಗೆ ಕಾರಣವಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದವರೇ ತಮ್ಮಲ್ಲಿರುವ ಹಣದಲ್ಲೇ ಇದನ್ನು ಮಾಡಬೇಕೆಂದೂ ಇದೆ. ಮಹಾರಾಜಾ ಕಾಲೇಜೂ ಹಾಗೂ ಯುವರಾಜಾ ಕಾಲೇಜೂ ಇವೆರಡೂ ಒಂದೇ ಕ್ಯಾಂಪಸ್‌ನಲ್ಲಿವೆ. ಇಲ್ಲಿ ಮಾನಸಗಂಗೋತ್ರಿ ಯುಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸುಗಳನ್ನು ಹೇಳಿಕೊಡುತ್ತಿದ್ದಾರೆ. ಇವೆರಡೂ ಇಂಟಿಗ್ರೇಟೆಡ್ ಇಲ್ಲಿರುವ ಅಧ್ಯಾಪಕರನ್ನು ಅಲ್ಲಿಗೆ ನೇಮಕ ಮಾಡಿಕೊಳ್ಳಬಹುದು, ಅಲ್ಲಿರುವ ಅಧ್ಯಾಪಕರುಗಳನ್ನು ಪೋಸ್ಟು ಗ್ರಾಜುಯೇಟು ಶಿಕ್ಷಣಕ್ಕಾಗಿ ಬೇರೆ ಕಡೆ ನೇಮಿಸಬಹುದು. ಇವೆರಡೂ ಇಂಟಿಗ್ರೇಟೆಡ್ ಸ್ಕೀಂನಂತೆ ಇರುವುದರಿಂದ ಒಂದೇ ರೀತಿಯ ನಿಯಮಗಳನ್ನು ಇಲ್ಲಿ ಆಚರಣೆಗೆ ತರಬೇಕು. ಇದನ್ನು ಸರಕಾರ ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಬೇಕೆಂದು ಹಾಗೂ ನ್ಯಾಯವಾಗಿ ಮಾಡಬೇಕೆಂದೂ ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರ ಗೌಡ.—ಈ ವಿಶ್ವವಿದ್ಯಾನಿಲಯದಲ್ಲಿ ಪಾಠ ಹೇಳತಕ್ಕವರು ಪೋಸ್ಟು ಗ್ರಾಜುಯೇಟ್ ಕೋರ್ಸುಗಳಿಗಾಗಿ ಶಿಕ್ಷಣ ಕೊಡುತ್ತಿದ್ದಾರೆ, ಆದರೆ ಮಹಾರಾಜಾಸ್ ಹಾಗೂ ಯುವರಾಜಾಸ್ ಕಾಲೇಜುಗಳಲ್ಲಿರುವ ಟೀಚರುಗಳು ಅಂಡರ್ ಗ್ರಾಜುಯೇಟುಗಳಿಗೆ ಪಾಠ ಹೇಳಿಕೊಡುತ್ತಿದ್ದಾರೆ. ಇವೆರಡೂ ಬೇರೆ ಬೇರೆಯಾಗಿವೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮೊದಲು ಹೇಳುವುದನ್ನು ಮರೆತೆ. ದಯವಿಟ್ಟು ಕ್ಷಮಿಸಬೇಕೆಂದು ಕೋರುತ್ತೇನೆ. ಸಂತೋಷ ದಿಂದ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರು ಏನು ಶಿಫಾರಸುಗಳನ್ನು ಮಾಡಿದ್ದಾರೆ ಅವನ್ನೆಲ್ಲಾ ಜಾರಿಗೆ ತರಲು ನಾಲ್ಕನೇ ಯೋಜನೆಯಲ್ಲಿ ಸಂಬಳಸಾರಿಗೆಗಳು ಎಲ್ಲ ಕಾಲೇಜುಗಳಲ್ಲಿಯೂ ಇರುವ ಅಧ್ಯಾಪಕರುಗಳಿಗೆ ಕೊಡುವುದಕ್ಕೆ ನಮ್ಮ ಸರಕಾರ ತೀರ್ಮಾನ ತೆಗೆದುಕೊಂಡಿದೆ. ಇದಕ್ಕೆ ಫೈನಾನ್ಸ್ ಇಲಾಖೆಯೂ ಕೂಡ ಒಪ್ಪಿದೆ. ಇದನ್ನು ವಿಶ್ವವಿದ್ಯಾನಿಲಯಗಳಲ್ಲಿರುವ ಎಲ್ಲರಿಗೂ ಕೊಡಲು ಸರಕಾರ ಒಪ್ಪಿದೆ. ಮತ್ತು ನಿರ್ಧಾರ ಮಾಡಿದೆ. ನಾಲ್ಕನೇ ಯೋಜನೆಯಲ್ಲಿ ಸಂಬಳಸಾರಿಗೆಗಳನ್ನು ರಿವೈಸು ಮಾಡುವಾಗ ಏಡೆಡ್ ಶಾಲೆಗಳಿಗೂ ಸರಕಾರದ ಶಾಲೆಗಳಲ್ಲಿರುವ ಎಲ್ಲ ಅಧ್ಯಾಪಕರುಗಳಿಗೂ ಕೊಡಬೇಕೆಂದು ಏರ್ಪಾಡು ಮಾಡಲಾಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮ್ಯಾನ್ ಪವರನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳಿದರು. ಕೆ.ಜಿ.ಎಫ್.ನಲ್ಲಿರುವ ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಮೈನಿಂಗ್ ಇಂಜನೀಯರಿಂಗ್ ಎನ್ನುವ ಕೋರ್ಸು ಇದೆ. ಇದರಂತೆ ಡಿಗ್ರಿ ಕೊರ್ಸನ್ನೇಕೆ ತೆರೆಯಬಾರದು ? ಎರಡನೇಯದು ಸೆಕೆಂಡರಿ ಕೋರ್ಸುಗಳಲ್ಲಿ ಒಂದು ವರ್ಷ ಇದ್ದುದನ್ನು ಎರಡು ವರ್ಷಗಳೆಂದು ಮಾಡಲು ಕಾರಣಗಳೇನು ? ಮ್ಯಾನ್ ಪವರನ್ನು ಇನ್‌ಕ್ರೀಸ್ ಮಾಡಬೇಕೆಂದು ಹೇಳುವಾಗ ಎಲ್ಲ ಸ್ಕೂಲುಗಳಲ್ಲಿಯೂ ವ್ಯವಸಾಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎಂದಿರುವಾಗ ವ್ಯವಸಾಯದ ಕಾಲೇಜುಗಳನ್ನು ಇನ್ನೂ ಜಾಸ್ತಿ ಇರುವಂತೆ ಏಕೆ ಮಾಡಬಾರದು ? ಇದರ ಬಗ್ಗೆ ಸರಕಾರದ ಅಭಿಪ್ರಾಯಗಳೇನು ?

ಶ್ರೀ ಕೆ. ವಿ. ಶಂಕರ ಗೌಡ.—ಮೈನಿಂಗ್‌ಗಾಗಿಯೇ ಪ್ರತ್ಯೇಕವಾದ ಒಂದು ಕಾಲೇಜು ಇರಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ, ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿರುವ ಇಂಜಿನೀಯರಿಂಗು ಕಾಲೇಜುಗಳಲ್ಲೇ ಈ ಭಾಗಗಳನ್ನೂ ತೆಗೆಯಬಹುದು. ಎಲೆಕ್ಟ್ರಾನಿಕ್ಸ್ ಹಾಗೂ ಮೈನಿಂಗ್ ಇವುಗಳ ಕೋರ್ಸುಗಳನ್ನೂ ಅನುಕೂಲಕ್ಕೆ ತಕ್ಕಂತೆ ತೆರೆಯಬಹುದು. ಈಗಾಗಲೆ ನಮ್ಮ ರಾಜ್ಯದಲ್ಲಿ 15 ಇಂಜನೀಯರಿಂಗು ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ ವಿವಿಧ ಭಾಗಗಳನ್ನು ಇನ್ನೂ ತೆರೆಯಲು ಅವಕಾಶಗಳಿವೆ ಮತ್ತು ಇದರಿಂದ ಇನ್ನೂ ಹೆಚ್ಚು ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ನಾಲ್ಕೈದು ಜನ ಹೆಣ್ಣು ಮಕ್ಕಳು ಈ ಸಭೆಯಲ್ಲಿ ಸದಸ್ಯರಾಗಿ ಬಂದಿದ್ದೇವೆ ಮತ್ತು ಮಹಿಳೆಯರ ಸ್ಕೂಲುಗಳ ಬಗ್ಗೆ ಅವರ ಎಜುಕೇಷನ್ ಬಗ್ಗೆ ಸರಕಾರಕ್ಕೆ ಹೇಳಿದೆವು. ಆದರೆ ಮಾನ್ಯ ಮಂತ್ರಿಗಳು ಏಕೋ ಮಹಿಳಾ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಇಲ್ಲಿ ಏನನ್ನೂ ಹೇಳಲಿಲ್ಲ. ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಹಾಸ್ಟಲ್‌ಗಳಿರಬೇಕು ಎಂದು ಹೇಳಿದ್ದೆ. ಇದರ ಬಗ್ಗೆ ಉತ್ತರ ಬರಲಿಲ್ಲ ಮತ್ತು ಹೆಣ್ಣು ಮಕ್ಕಳ ಶಾಲೆಗಳಲ್ಲಿ ಟೀಚರುಗಳು ರಿಟೈರು ಆಗುವಾಗ ಅವರ ಸ್ಥಳದಲ್ಲೇ ಇರುವಂತೆ ಪೋಸ್ಟು ಮಾಡಬೇಕೆಂದು ಹೇಳಿದ್ದೆ. ಮಾನ್ಯ ಸಚಿವರು ಹೆಣ್ಣು ಮಕ್ಕಳ ಬಗ್ಗೆ ಇಲ್ಲಿ ಏನೇನೂ ಹೇಳಲಿಲ್ಲ. ಇವರ ಮೇಲೆ ಏಕೆ ಅವರ ಲಕ್ಷವಿಲ್ಲವೋ ಕಾಣೆ !

ಶ್ರೀ ಕೆ. ವಿ. ಶಂಕರ ಗೌಡ.—ನಾನಾಗಲೇ ಹೇಳಿದೆ, ಮಾನ್ಯ ಸದಸ್ಯರು ಸರಿಯಾಗಿ ಕೇಳಲಿಲ್ಲ ಎಂದು ತೋರುತ್ತೆ. ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಹಾಸ್ಟಲ್ ಮಾಡುವುದಕ್ಕೆ ಸಾಧ್ಯವಿಲ್ಲ. ತಮ್ಮಂತಹ ಉದಾರಿಗಳು ಯಾರಾದರೂ ಸಹಾಯ ಮಾಡಿದರೆ ಆಗ ಸಾಧ್ಯವಾದ ಕಡೆಗಳಲ್ಲಿ ಹಾಸ್ಟಲುಗಳನ್ನು ಕಟ್ಟಿಸಿಕೊಡಬಹುದು. ಎಲ್ಲ ಕಡೆಯಲ್ಲಿಯೂ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಹಾಸ್ಟಲುಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

Mr. SPEAKER.—The question is :

"That the respective sums not exceeding the amounts specified in Demand Nos. 17 and 37, be granted to the Government to defray the charges which will come in course of payment during the financial year for the period ending 31st day of March 1968, in respect of Education, Stationery and Printing."

The motion was adopted.

As directed by the Chair the motion for Demands for Grants adopted by the House are reproduced below :—

DEMAND NO. 17.—EDUCATION

28. Education

"That a sum not exceeding Rs. 33,57,28,700 be granted to the Government to defray the charges which will come in course of payment during the financial year for the period ending 31st day of March 1968, in respect of 'Education'."

(MR. SPEAKER)

DEMAND NO. 37.—STATIONERY AND PRINTING

68. Stationery and Printing

"That a sum not exceeding Rs. 1,04,93,000 be granted to the Government to defray the charges which will come in course of payment during the financial year for the period ending 31st day of March 1968, in respect of 'Stationery and Printing'."

MR. SPEAKER.—Now, next Demand.

DEMAND NO. 22.— ANIMAL HUSBANDRY

33. Animal Husbandry

SRI D. DEVARAJ URS (Minister for Animal Husbandry, Fisheries and Publicity).—Sir, on the recommendation of the Governor, I beg to move :

"That a sum not exceeding Rs. 3,44,49,000 be granted to the Government to defray the charges which will come in course of payment during the financial year for the period ending 31st day of March 1968 in respect of 'Animal Husbandry'."

MR. SPEAKER.—Motion moved on the recommendation of the Governor :

"That a sum not exceeding Rs. 3,44,49,000 be granted to the Government to defray the charges which will come in course of payment during the financial year for the period ending 31st day of March 1968 in respect of 'Animal Husbandry'. "

SRI V. N. PATIL (Humnabad).—In a backward country like India Animal Husbandry is one of the most important branches of the functioning of the Government. If sufficient attention is given to this and if whatever the amounts are allotted are honestly and properly made use of and no wastage is permitted, it will not take much time for agricultural development of the country. By providing better and proper froms of breeds it is possible in our country to have best sort of bullocks and buffaloes and cows which in turn will yield more milk and help more in food production. That will help the Nation and account for the prosperity of the nation. But, now what is actually happeuing ? We hear so much about the Bangalore Dairy Farm and much publicity is given about it. A beautiful building has come up but has it met the needs of the common man, the public ? It is a pitiful and pathetic state of affairs to visit any one of those Milk Booths. When one goes there, what is it they are supplying ? It is not whole milk but toned

milk, prepared with powder. If scientifically it is analysed, I am sure that the nutrition that a child requires is not there but only something to feed with quantity and not quality. We expect the Government to give quality milk and not only quantity. A good quality milk should be supplied which will make the children of the country to become the best defenders of the country. What you are doing at present is a little bit farce. Not even one bottle whole milk is supplied; the people are issued cards but they are not supplied with good milk. Probably it may be possible for the Minister to get whole milk for a mere asking or even without asking. As an M. L. A., I may get but it is a little blackmailing with one's own position. For the last three years I applied for a card but I was not given. But within a week after becoming an M.L.A. one gets. The needs of the common men are not met and this state of affairs should not continue. It is disgraceful and slave system. In the old days Britishers and rulers were there and people were treated as slaves. We have risen to the occasion and have kicked them out. We have done that. This system of somebody getting and others not getting, should be condemned and put down. The affairs of this Bangalore Dairy is pitiful. A large amount is spent on construction of building and not for bringing in best quality of breeds. For supply of milk the Dairy depends on different people. Has it any programme for permanent flow of milk? No. I do not think it has even a hundred cattle Cows or Buffaloes. The Bangalore Dairy provides money and loans to various co-operative societies and there is no guarantee of regular inflow of milk. The result is instead of whole milk, toned milk is given. Sometimes the wastage also is great. Once I had an opportunity to unfortunately witness the several processes of bottling of milk in the Dairy. The bottle filling is in a very unhygienic condition. Thousands of filled and unfilled bottles are by negelect being broken and ultimately it is the common people that suffer. This state of affairs should not continue and I hope the hon'ble Minister will kindly give his attention to this. We have one of the big schemes in this Dairy and we have modern equipments but the only defect is, there is no proper supervision and it is not functioning properly.

The Department of Animal Husbandry must not be made to propagate or advertise these schemes only in cities. They must go into the villages and it is the people in the villages that feed us, give revenues and who toil very hard. Nearly 80 per cent of people are in villages and work hard to feed to cater to the needs and bring up the nation. But these schemes have not reached them. A villager is having the same bullocks which are not healthy and strong. Actually they are not fed enough due to the poverty of the peasant there. We are spending three crores and odd and a major portion of this amount must be spent in villages. We must be able to bring up best sorts of breeds and there must be centres to bring up healthy and model breeds, which can help modernise and revitalise our stagnant agricultural economy by helping in more food production.

(SRI V. N. PATIL)

Wherever there is a cattle breeding centre, it must service there not only as long as the Minister or the dignitary is there to inaugurate it but it must be eternal. It must not be like the inauguration of the Vana Mahotsva Day when the congress leaders move about and thousands of trees are planted. Next year they are not to be found. This should not happen in the case of the good breeds. Best cows, bullocks and buflaloes are not supplied in the Hyderabad Karnatak Area and how can you expect that area to come up ? In Gulbarga, Bidar and Raichur Districts we have got the pride Rivers of Karnataka, *viz*., the Bhima River, the Krishna River Tungbhadra and Manjra River and on the banks of these best and self sufficient dairies can come up which can feed the entire Mysore State. This area can be developed by introducing Modern Dairy technique in this part and by developing scientific pastures on the river beds mentioned. Even people say the famous Bidri ghee is vanishing.

SRI D. DEVARAJ URS.—In one breath you say that your breed is not able to feed your own area and in the next breath you say that they can feed the whole of the State.

SRI V. N. PATIL.—The fault lies with you and not with me. You must help the people to bring up the cattle properly and by subsiding best breed cattle distribution. Now they are not in a position to do so by themselves. There are natural resources but they are not properly exploited. You must be kind enough to give your attention for the development of backward areas. The famous river banks are there ; black cotton soil is there in Gulbarga, Bidar and Raichur Districts and these can be developed as best pasture lands. All the facilities are there but they remain unexploited due to lack of funds, and poverty of the agriculturists in these parts. The hon'ble Minister may say that the agriculturists have not taken interest. In future at least there is a horizon before the Hon'ble Minister and he can do a lot if he means business and intends to do so. If he kindly visits Russia he will see how they are proud of these things and how scientifically they have turned their most backward economy into prosperity. Coming to grass, the people who are getting grass out of two or three acres are selling it for thousand or two thousand rupees. The Manjra River bank grass is the best grass and the people from Maharashtra are purchasing it. In Bangalore the fodder position is acute. It is in the hands of a monopolist, *viz*., the Krishna Flour Mills. He is the monopolist who supplies the entire fodder and animal feed for the Banglore people and the poor people who own cattle and milk Vendors are at his mercy. People, cows and buffaloes are more worried about grass and animal feed than about their ration. They are sold at double the rate.

SRI D. DEVARAJ URS.—It is not correct to associate these things with the Krishna Flour Mills. They are connected with wheat and

wheat products and nothing beyond that. The Mysore Feeds are manufacturing cattle feed. So, the Krishna Flour Mills have nothing to do with fodder.

SRI V. N. PATIL.—Some arrangement must be made for proper supply of fodder to those who are having cows and buffaloes. Their suffering has become eternal and they should not be made to suffer hearafter at least. They are made to move from post to pillar but with no results. I request the Hon'ble Minister to give some attention to this aspect of the matter.

Coming to the question of sheep, quality sheep are necessary in the Hyderabad Karnatak Area. There in each village a shepherd is having 2,000 or 5,000 sheeps. They are not used for wool purpose but they make use of them for manure purpose. Special attention must kindly be given to the Raichur and Bidar Districts where the shephers are hard working. The best quality of sheep can come up provided the Animal Husbandry Department gives quality sheep breeds to these people at subsidised rates or free and also give financial assistance.

Finally, there must he some co-ordination between the Food, Agriculture and Animal Husbandry Departments. Any scheme that is sponsored by the Animal Husbandry unless it is supported by the Agriculture Department, will not be successful. The plans prepared by the Animal Husbandry Department without proper co-ordination with the other connected Departments will be mere dreams and will only be utopian. So, as I said, there must be proper co-ordination among these departments. The villagers in the rural areas are not having proper bullocks. They have got fertile lands but not good bullocks. For buying one bullock he has to take a loan from a bania, village money lenders at a usurious rate of interest and for the sin of taking loan for buying one bullock he will have to sell away his land within 10 years to repay the loan. What I am saying is not a propaganda stunt coming from an Oppsition Member. This is the actual state of affairs and misery and the torture suffered by Villagers have became intolerable beyond the patience of the agriculturists. The Hon'ble Minister must pay attention to this aspect of co-ordination between the various departments and see to it that the needy agriculturists are supplied with one or two good bullocks not in cash but in kind, so that they may be properly utilised by those poor people. There must be a proper check to see that there is no misuse in this respect. The distribution must not be done on a party basis (politics) but on the basis of needs. The Hon'ble Minister coming as he does from the rural area, I hope he will kindly give attention to the uplift of the rural areas. I thank you, Sir, for the time alloted to me.

DR. R. NAGAN GOUD (Hospet).—Mr. Speaker, Sir, I wish to support this demand for Animal Husbandry. In doing so, I wish to state at the beginning that in this State of Mysore Animal Husbandry has been developed to a much greater extent than probably anywhere else

(DR. R. NAGAN GOUD)

in India. The old principle of mixed farming has been adopted here by the cultivators for a very long time. Production of grain fodder alone does not support the cultivator, but there should be proper utilisation of the same for production of high class, good breed of cattle which will convert the grain and fodder into valuable money. We have been in Mysore exporting large number of very good breed of cattle for a long time. The Hallikar cattle of Mysore are known all over, at least in South India. You can see them in Madras, in Kerala, in Hubli-Dharwar. The ryots here are capable of judging for themselves which animal is of good type. They have inherited that ability by tradition. In the same line we are continuing our development work.

For development of good dairy cattle this department has imported a number of high milk yielding cattle, cows from other countries so that the milk bread here could be improved. I am glad that the Government has a large number of key village stations in the country where the semen of these high breed cattle is being used to improve the quality of the local animals. That is the way in which we could meet the demand for milk in our State. I know that our cattle are not at present giving as much milk as better varieties of cows do. I know the working of Deparment in this line. I have had some occasion to know more intimately about this work and now I notice that the same work is being carried on in a more intensive form. In the second five year plan a large number of key village stations were established. In the third plan more number of them were established and in the fourth plan also we are having a few more. That is the one line in which we ought to be able to improve the milking quality of our cows. Of course, it is not a matter that could be achieved overnight. It takes a large number of years. The more pressure we put on it and the more we work on it, I think the achievement will be quicker.

In this connection, I am glad that one or two stations have been established for improving the buffaloes of this State. Our local buffaloes are good as far as they go, but the improved breeds like Murrah and the Delhi breeds that are now being introduced here are much better and their semen is being used for improvement of our buffaloes. I think the policy of the Government is that so far as work animals are concerned, bullocks of the breed of Hallikar are to be developed, and for milking purposes we should attempt to popularise breeds like Murrah and Delhi buffaloes. In foreign countries they envy the presence of our high yielding buffaloes in this country. The buffaloes there are not as successful as the high milk yielding buffaloes developed in this country. It is only here that we have such high yielding quality buffaloes and that breed should be developed more and more.

Now I come to the very good work that has been done in the way of improving the breed of sheep. Our local sheep, the Deccani sheep and the Bellary sheep, are good as far as they go, but their wool is

short and coarse. The work done at Suttathi and Guthal has given very satisfactory results. The second and third generation of sheep breed developed with imported Marino ram have given very fine quality of wool. It is something the Department can be really proud of. It is long and it is soft and it can be used for the purpose of making good shawls or woollen clothing like surge suits. I am glad that the Department are going ahead with the spread and improvement of this new breed of sheep all over the State and this will enable us to get over some new problems that are arising.

One such important problem is about grazing area. Hitherto we had large areas of grazing lands but today grazing areas are diminishing more and more rapidly as population grows more and more and as the area under cultivation increases. What was till now grazing area for sheep and cattle is now taken over for cultivation to satisfy the demands of cultivators for more and more land for cultivation. Instead of having 300 sheep of poor quality, it is better that we have only 100 sheep of improved quality as that would save us a lot of grazing area and that would give us better wool also. I am glad that in this line the Department is doing a lot of work.

Another line in which I notice that a lot of work has been done in Hessarghatta and other places is the development of poultry. I know that here more than anywhere else the Department has achieved very good results. It has been able to spread all over the State a large number of improved breeds of poultry. Poultry has now achieved great importance on account of its nutritive food value. Deep litter poultry farms are now being established all over the State. There has been good progress in that direction and more and more work is being done. I think the Department should be congratulated on this fine work. If I can say anything at all in this line it is, "carry on the work much more rapidly, because the demand for improved poultry and bigger and larger number of eggs is increasing almost every day", and it is a step in the right direction. The Hesarghatta Farm has the capacity to supply improved eggs and improved hatched birds in much larger numbers than it was able to do before, and I think they must be able to spread improved birds all over the country. If we compare ourselves to any other country where they have been able to supply to the people better milk or larger quantities of milk or eggs and things like this, it is simply by these means, and that is whatever improved varieties have been found they are being spread rapidly all over the country. Rapid expansion and distribution is the key for achieving the desired result.

Having said all this, I would like to say one more thing, and it is this: in the line of prevention and cure of diseases this State has done very well; it has almost completely exterminated rinderpest. I know there is a little bit of this disease here and there. But, the action they are taking in eradicating rinderpest is very welcome and praiseworthy.

(DR. R. NAGAN GOUD)

Similar steps are being taken for the eradication of foot and mouth disease. It is very difficult to cure this disease, but the Department has now found better remedies for this and it is being used. I suggest that it should be used more rapidly so that the cattle will be able to serve the farmers better. Similarly, in the field of poultry, they are taking steps for the eradication of Raniket as a regular scheme all over the State. The birds are innoculated with Raniket vaccine and the death epidemic among the birds is now being completely overcome which we used to see previously annually or bi-annualy. This is an achievement for the Department and I congratulate them.

With these few words, I support the Demand made by the Hon'ble Minister for Animal Husbandry.

† ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಸನ್ಮಾನ್ಯ ಅಧ್ಯಕ್ಷರೇ, 1967-68 ನೇ ಸಾಲಿನ ಪಶುಪಾಲನಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯಬಗ್ಗೆ ಚರ್ಚೆ ಮಾಡುತ್ತಾ ಒಂದೆರಡು ಸಲಹೆ ಗಳನ್ನು ನಾನು ಕೊಡಬಯಸುತ್ತೇನೆ. ಈಗಾಗಲೇ ತಳಿಗಳನ್ನು ಹೆಚ್ಚು ಅಭಿವೃದ್ಧಿ ಮಾಡುವುದಕ್ಕಾಗಿ ಅಮೃತಮಹಲ್ ಕಾವಲುಗಳನ್ನು ಸಾವಿರಾರು ಎಕರೆ ಪ್ರದೇಶವನ್ನು ಷೇರ್ವೇಗಾರರಿಗೆ ಸರ್ಕಾರ ದವರು ಕೊಟ್ಟಿದ್ದಾರೆ. ತಳಿ ಅಭಿವೃದ್ಧಿ ಮಾಡುವುದಕ್ಕೆ ಬೇಕಾದಷ್ಟು ಜಮೀನನ್ನು ಸರ್ಕಾರ ದವರೇನೋ ಕೊಟ್ಟಿದ್ದಾರೆ. ಆದರೆ ನಿಜವಾಗಿಯೂ ದನಗಳ ಅಭಿವೃದ್ಧಿ ಆಗಿಲ್ಲ. ಷೇರ್ವೆದಾರರಿಗೆ ಸರ್ಕಾರದವರು ಒಳ್ಳೆಯ ತಳಿಗಳನ್ನು ಕೊಟ್ಟು ಅಮೃತಮಹಲ್ ಕಾವಲನಲ್ಲಿ ಜಮೀನು ಕೊಟ್ಟು ತಳಿ ಅಭಿವೃದ್ಧಿಮಾಡಿ ದೇಶಕ್ಕೆ ಜನತೆಗೆ ಅನುಕೂಲಮಾಡಿ ಎಂದು ಹೇಳಿದರೆ, ಈ ಷೇರ್ವೆದಾರರು ಅಮೃತ ಮಹಲ್ ಕಾವಲಿನಲ್ಲಿ ಸುತ್ತಮುತ್ತ ಪ್ರದೇಶದ ಜನಗಳಿಗೆ ದನಗಳನ್ನು ಮೇಯಿಸಿಲು ಒಂದು ದನಕ್ಕೆ 10 ರೂಪಾಯಿಗಳಂತೆ ಗುತ್ತಿಗೆಗೆ ಕೊಟ್ಟಿದ್ದಾರೆ. ಇದೇರೀತಿ ಸಾವಿರಾರು ದನಗಳನ್ನು ಆ ಅಮೃತ ಮಹಲ್ ಕಾವಲಿನಲ್ಲಿ ಮೇಯಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಅವರು ಜನತೆಗೆ ಯಾವ ಅನುಕೂಲವನ್ನು ಮಾಡಿಲ್ಲ. ಈ ರೀತಿ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತಳಿ ಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸಾವಿರಾರು ಎಕರೆ ಅಮೃತಮಹಲ್ ಜಮೀನನ್ನು ಷೇರ್ವೇದಾರರಿಗೆ ಕೊಟ್ಟಿದ್ದರೂ ಸಹ ಅವರು ಆ ಕಾವಲನ್ನು ಬೇರೆ ದನಗಳನ್ನು ಮೇಯಿಸುವುದಕ್ಕೆ ಆ ಕಾವಲಿನ ಸುತ್ತಮುತ್ತ ಇರತಕ್ಕ ಜನಗಳಿಗೆ ಒಂದು ಎಕರೆಗೆ 50 ರೂಪಾಯಿಗಳಿಂದ 100 ರೂಪಾಯಿಗಳ ವರೆಗೆ ಗುತ್ತಿಗೆಗೆ ಕೊಟ್ಟು ಹಣಸಂಪಾದನೆ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬೇಕಾದರೆ ಬರಲಿ ಅವರು ಗುತ್ತಿಗೆಗೆ ಕೊಟ್ಟಿರುವುದನ್ನು ತೋರಿಸಿಕೊಡುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಒಬ್ಬೊಬ್ಬ ಷೇರ್ವೇದಾರ 25 ಸಾವಿರ ರೂಪಾಯಿಗಳಿಂದ 50 ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡಿದ್ದಾರೆ. ಸುದುದ್ದೇಶದಿಂದ ಸರ್ಕಾರದವರು ದೇಶದ ಜನತೆಯ ಅನುಕೂಲಕ್ಕೋಸ್ಕರ ಈ ಯೋಜನೆಯನ್ನು ತಯಾರು ಮಾಡಿದ್ದರೂ ಕೂಡ ಅದು ಕೇವಲ ಕೆಲವು ಜನಗಳಿಗೆ ಮಾತ್ರ ಉಪಯೋಗವಾಗತಕ್ಕದ್ದು ಯಾವ ನ್ಯಾಯ, ಯಾವ ಧರ್ಮ! ಈ ಅಮೃತ ಮಹಲ್ ಕಾವಲಿನ ಇಲಾಖೆಗೆ ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಎಲ್ಲೆಲ್ಲಿ ಅಮೃತಮಹಲ್ ಕಾವಲುಗಳು ಇವೆಯೋ ಆ ಸ್ಥಳಗಳಿಗೆ ಬೇಟಿಕೊಟ್ಟು, ಅಲ್ಲಿ ಜನಗಳಿಗೆ ನಿಜವಾಗಿ ಏನು ತೊಂದರೆ ಗಳಿವೆ ಎಂಬುದನ್ನು ಪರಿಶೀಲಿಸಬೇಕು. ಮತ್ತು ಈಗ ಷೇರ್ವೆದಾರರಿಗೆ ಕೊಟ್ಟಿರತಕ್ಕ ಅಮೃತ ಮಹಲ್ ಕಾವಲುಗಳನ್ನು ಅವರ ಕೈಯಿಂದ ತಪ್ಪಿಸಿ ಆ ಜಮೀನುಗಳನ್ನು ಸರ್ಕಾರದವರೇ ವಶಪಡಿಸಿ ಕೊಂಡು ಅವುಗಳನ್ನು ಬೇರೆ ರೀತಿಯಲ್ಲಿ ಉಪಯೋಗ ಮಾಡಬೇಕು. ಈರೀತಿ ಸರ್ಕಾರದವರು ದನಕರುಗಳ ಅಭಿವೃದ್ಧಿಗಾಗಿ ಯಾವುದೇ ಒಂದು ಯೋಜನೆಯನ್ನು ತಂದರೂ ಕೂಡ ಅವು ಸರಿಯಾದ ರೀತಿಯಲ್ಲಿ ನಡೆದಿಲ್ಲ. ಸರ್ಕಾರದವರು ಯಾವುದೇ ಒಂದು ಕಾನೂನನ್ನು ತರಬೇಕಾದರೂ ಕೂಡ ಒಂದು ನಿರ್ದಿಷ್ಟವಾದ ನೀತಿಯನ್ನು ಇಟ್ಟುಕೊಂಡು ಅದರಿಂದ ಜನತೆಗೆ ಅನುಕೂಲವನ್ನು ಮಾಡ ಬೇಕೆಂಬ ದೃಷ್ಟಿಯಿಂದ ಅದನ್ನು ಜಾರಿಗೆ ತರಬೇಕು. ದನಕರುಗಳ ಸಾಕಾಣಿಕೆಯ ವಿಚಾರದಲ್ಲಿ ಸಾಮೂಹಿಕವಾಗಿ ಯಾವ ಗ್ರಾಮದಲ್ಲೂ ಕೂಡ ಗೋಮಾಳಗಳು ಉಳಿದಿಲ್ಲ. ದನಕರುಗಳಿಗೆ, ಗೋವುಗಳಿಗೆ ಮೇವು ಇಲ್ಲದೇ ಇರುವಾಗ ದನಗಳನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಇವುತ್ತು ತಳಿಗಳ ಅಭಿವೃದ್ಧಿ ಮಾಡವೇ ಹೋದರೆ ನಮ್ಮ ಜನತೆಗೆ ಸುಖವಾಗಿ ಇರುವುದಕ್ಕೆ ಸಾಧ್ಯವಿಲ್ಲ. ತಮಗೆ

ಸ್ವಾತಂತ್ರ್ಯಬಂದಮೇಲೆ ಈ 20 ವರ್ಷಗಳ ಅವಧಿಯಲ್ಲಿ ಯಾವ ಗೋಮಾಳಗಳೂ ಉಳಿದಿಲ್ಲ. ಅರ್ಜಿಯನ್ನು ಹಾಕಿದವರಿಗೆಲ್ಲಾ ಗೋಮಾಳದ ಜಮೀನನ್ನು ಹಂಚಿಕೊಟ್ಟಿದ್ದಾರೆ. 10—20 ಲಕ್ಷ ಎಕರೆ ಗೋಮಾಳದಲ್ಲಿ ಈಗ ಒಂದು ಎಕರೆ ಗೋಮಾಳ ಕೂಡ ಉಳಿದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಗೋಮಾಳಗಳನ್ನು ಸಾಗಿಗೆ ಕೊಡುವುದು ಸೂಕ್ತ. ಹುಲ್ಲಿನ ಅಗತ್ಯವಿದ್ದರೆ ಅವರವರ ಜಮೀನಿನಲ್ಲಿ ಅವರವರು ಬೆಳೆದುಕೊಳ್ಳುವುದು ಒಳ್ಳೆಯದು.

ಶ್ರೀ ಬಿ. ಪರಮೇಶ್ವರಪ್ಪ.—ಇದು ಊರು ಸೂರೆಯಾದ ಮೇಲೆ ಹೆಬ್ಬಾಗಿಲು ಹಾಕಿದಂತಾಗಿದೆ. ಈಗ ಇದಕ್ಕಾಗಿ ಸರಕಾರದ ಆರ್ಡರ್ ಆಗಿದೆ ಎಂದು ಕೇಳಿದ್ದೇನೆ. ಅದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುವುದಕ್ಕೆ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ದನಗಳ ಆಸ್ಪತ್ರೆ ವಿಚಾರ ಹೇಳುವುದಾದರೆ ನಾಲ್ಕಾರು ಹಳ್ಳಿಗಳಿಗೆ ಒಂದು ದನಗಳ ಆಸ್ಪತ್ರೆಯಾಗಬೇಕು ಎಂದು ಇದೆ ಎಂಬುದನ್ನು ಕೇಳುತ್ತೇನೆ. ಒಂದು ತಾಲ್ಲೂಕಿನಲ್ಲಿ ಒಂದೇ ಒಂದು ಆಸ್ಪತ್ರೆ ಇರುವ ನಿದರ್ಶನಗಳಿವೆ. ನಾನು ಹೇಳುವುದು ಏನೆಂದರೆ ಒಂದು ಹೋಬಳಿಯಲ್ಲಿ ಒಂದು ದನಗಳ ಆಸ್ಪತ್ರೆ ಇರಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಕಟ್ಟಡ ಕಟ್ಟಿಸಿದ್ದಾರೆ, ಗ್ರಾಮ ಪಂಚಾಯಿತಿಯವರು ತಾಲ್ಲೂಕು ಬೋರ್ಡಿನವರು ಸಂಬಂಧಪಟ್ಟ ಖರ್ಚನ್ನು ಪೀಪಲ್ಸ್ ಕಾಂಟ್ರಿಬ್ಯೂಷನ್ ಸಹ ಕೊಟ್ಟಿದ್ದರೂ ಕೂಡ ಹತ್ತು ವರ್ಷಗಳಾದರೂ ಕೂಡ ಆಸ್ಪತ್ರೆ ಮಂಜೂರು ಆಗಿಲ್ಲ. ಈ ವರ್ಷ ಆಸ್ಪತ್ರೆ ಮಂಜೂರು ಮಾಡಿಸಿ ಕೊಡಬೇಕು ಎಂದು ಹೇಳುತ್ತೇನೆ. ಸಾಮಾನ್ಯವಾಗಿ ಒಂದು ಹೋಬಳಿಗೆ ಒಂದು ದನಗಳ ಆಸ್ಪತ್ರೆ ಇರಬೇಕು ಎಂದು ಈ ಮೂಲಕ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ಆಸ್ಪತ್ರೆಗಳಲ್ಲಿ ಸರಿಯಾದ ರೀತಿಯಲ್ಲಿ ಔಷಧಿಗಳು ಇರುವುದಿಲ್ಲ ಆದಷ್ಟು ಶೀಘ್ರದಲ್ಲಿ ಆಸ್ಪತ್ರೆಗಳಿಗೆ ಔಷಧಿ ಒದಗಿಸಿಕೊಟ್ಟು ಟ್ರೀಟ್‌ಮೆಂಟ್ ಮಾಡಿ ಉತ್ತಮ ರೀತಿಯಲ್ಲಿ ದನಗಳ ಆರೋಗ್ಯ ಕಾಪಾಡಿಕೊಂಡು ಬರತಕ್ಕಂಥ ಸಂದರ್ಭ ಒದಗಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಮಾತನಾಡುತ್ತಾ ಹೇಳಿದ ಹಾಗೆ ರೈತರು ಉತ್ತಮ ತಳಿ ಬೆಳೆಸುವುದಕ್ಕೆ ಗೋಮಾಳವಿಲ್ಲ. ದನಕರುಗಳಿಗೆ ಸಾಕಷ್ಟು ಹುಲ್ಲಿನ ಸೌಕರ್ಯ ಒದಗಿಸಿಕೊಟ್ಟು ತಳಿ ಅಭಿವೃದ್ಧಿ ಮಾಡಬೇಕು ಎಂಬುದು ಉತ್ತಮ ಸಲಹೆ ಆಗಿದೆ. ಉತ್ತಮ ತಳಿ ಅಭಿವೃದ್ಧಿಗೋಸ್ಕರ ಸಬ್‌ಸಿಡಿ ಕೊಡುವದರ ಬದಲು ರೈತರಿಗೆ ಸಾಲ ಕೊಟ್ಟರೆ ಸಾಕು. ರೈತನಿಗೆ ಒಂದೆರಡು ಎಕರೆ ಜಮೀನು ಇದ್ದರೆ ದನಗಳನ್ನು ಸಾಕಿ ಉತ್ತಮ ತಳಿ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿರುತ್ತದೆ. ರೈತರಿಗೆ ಸಾಲ ಕೊಟ್ಟು ಸಾಲದ ಹಣ ಮತ್ತು ಬಡ್ಡಿ ಕಂತುಗಳಲ್ಲಿ ಮರುಪಾವತಿ ಮಾಡತಕ್ಕಂಥ ಯೋಜನೆ ಮಾಡುವುದು ಶ್ರೇಷ್ಠವಾದುದು. ಇದರಿಂದ ಹಳ್ಳಿಗಳಲ್ಲಿ ಉತ್ತಮ ತಳಿ ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ. ಇಂದು ದೇಶದಲ್ಲಿ ಡೈರಿ ಫಾರ್ಮ್ ಹೆಸರಿಗೆ ಮಾಡಿರುವುದರಿಂದ ನೀರು ಹಾಲನ್ನು ಜನತೆ ಉಪಯೋಗ ಮಾಡುತ್ತಿದ್ದಾರೆ. ನೀರು ಬೆರೆಸಿದ ಹಾಲು ಜನ ಕುಡಿಯಬೇಕಾಗಿದೆ. ಪ್ರತಿಯೊಬ್ಬ ರೈತನೂ ಉತ್ತಮ ತಳಿ ಸಾಕುವಂತಾದರೆ ಒಳ್ಳೇ ಹಾಲಿನ ಸೌಕರ್ಯ ಪಡೆಯಬಹುದು. ಅವರವರ ಮನೆಯಲ್ಲಿ ಉತ್ತಮ ಹಾಲು ಉಪಯೋಗ ಮಾಡುವುದಾದರೆ ಉತ್ತಮ ತಳಿ ಅಭಿವೃದ್ಧಿಯಾಗುತ್ತದೆ. ಪಶು ಸಂಗೋಪನೆಯಿಂದ ರೈತನ ಆರ್ಥಿಕ ಸ್ಥಿತಿ ಕೂಡ ಉತ್ತಮಗೊಳ್ಳುತ್ತದೆ. ದನಕರುಗಳನ್ನು ಸಾಕುವುದು ಒಂದು ಉಪಕಸುಬನ್ನು ಮಾಡಿಕೊಂಡು ರೈತ ತನ್ನ ಆರ್ಥಿಕ ಅಭಿವೃದ್ಧಿ ಮಾಡಿಕೊಳ್ಳಲು ಒಂದು ಸದವಕಾಶವಿದೆ ಎಂದು ಈ ಮೂಲಕ ಸಲಹೆ ಕೊಡುತ್ತೇನೆ.

ಇನ್ನು ಕೋಳಿ ಸಾಗಾಣಿಕೆ ವಿಚಾರ. ಕೋಳಿ ಸಾಕುವಿಕೆ ಕೂಡ ಒಂದು ಒಳ್ಳೇ ಉಪಕಸುಬು ಆಗಿದೆ. ಇದನ್ನು ಎಲ್ಲ ರೈತರೂ ಮಾಡಬೇಕೆಂದು ಸರಕಾರ ಸಲಹೆ ಕೊಡುತ್ತದೆ. ನಮ್ಮ ತಾಲ್ಲೂಕಿನಲ್ಲಿ ಒಂದೆರಡು ಕಡೆ ಇದರ ಪ್ರಯೋಗ ಮಾಡಿ ನೋಡಿದ್ದೇವೆ. ಕೋಳಿಗಳಿಗೆ ರೋಗ ತಗಲುತ್ತದೆ ಮತ್ತು ಒಂದು ವರ್ಷದಲ್ಲಿ ಎಲ್ಲ ಕೋಳಿಗಳೂ ನಾಶವಾಗಿ ಹೋಗುತ್ತವೆ. ಉತ್ತಮ ರೀತಿಯಲ್ಲಿ ಕೋಳಿ ಸಾಕಿ ಅದರಿಂದ ಲಾಭ ಬರುವ ಹಾಗೆ ಮಾಡುವುದಕ್ಕೆ ಎಲ್ಲೆಲ್ಲಿ ತಾಲ್ಲೂಕಿನಲ್ಲಿ ವೆಟರಿನರಿ ಆಸ್ಪತ್ರೆ ಇದೆಯೋ ಅಲ್ಲಿ ಕೋಳಿ ಸಾಕಾಣಿಕೆ ಫಾರ್ಮ್ ಮಾಡುವುದು ಕ್ಷೇಮ ಎಂದು ಹೇಳುತ್ತೇನೆ. ಆದುದರಿಂದ ತಾಲ್ಲೂಕು ಕೇಂದ್ರದಲ್ಲಿ ವೆಟರಿನರಿ ಆಸ್ಪತ್ರೆ ಇರುವ ಕಡೆ ಕೋಳಿ ಸಾಕಾಣಿಕೆಯ ಫಾರ್ಮ್ ಮಾಡುವುದು ಉತ್ತಮ. ಇದನ್ನು ಎಲ್ಲರೂ ಮಾಡಬೇಕು ಎಂದು ಹೇಳುವುದು ಯಾವ ರೀತಿಯಾಗಿದೆ ಅಂದರೆ, ಒಬ್ಬನು ಕಲ್ಲು ಬಸವಣ್ಣನ ಮೂಗಿನಲ್ಲಿ ಕೈ ಇಟ್ಟನಂತೆ; ಅವನ

(ಶ್ರೀ ಬಿ. ಪರಮೇಶ್ವರಪ್ಪ)

ಕೈಗೆ ಚೇಳು ಕಡಿಯಿತಂತೆ. ಇದನ್ನು ನೋಡಿ ಎಲ್ಲರೂ ಕೈ ಇಡುವುದಕ್ಕೆ ಪ್ರಾರಂಭ ಮಾಡಿದಂತೆ ಇದು ಆಗಿದೆ. ಇಂಥ ಸನ್ನಿವೇಶ ಇಂದು ಇದೆ. ಆದುದರಿಂದ ಪೌಲ್ಟ್ರೀ ಫಾರ್ಮನಿಂದ ರೈತರು ಶ್ರೀಮಂತರಾಗುತ್ತಾರೆಂದು ಹೇಳುವುದು ಸರಕಾರದ ಸಾಮಾನ್ಯ ನೀತಿಯಾಗಿದೆ, ಆದರೆ ರೈತರಲ್ಲಿ ಕೆಟ್ಟ ಮನೋವೃತ್ತಿ ಬೆಳೆಸುವುದು ಬೇಡ. ನಿಜ ಸ್ಥಿತಿಯನ್ನು ತಿಳಿದುಕೊಂಡು ಜನತೆಗೆ ನೀವು ಹೇಳಬೇಕು. ಜನತೆಗೆ ಸರಿಯಾಗಿ ಮಾರ್ಗದರ್ಶನ ಮಾಡುವುದಕ್ಕೆ ಮೊದಲು ನಿಮ್ಮ ಇಲಾಖೆಯ ಮೂಲಕ ಕೋಳಿ ಸಾಕಾಣಿಕೆಯನ್ನು ಮಾಡಿ ತೋರಿಸಬೇಕು ಎಂದು ಈ ಮೂಲಕ ತಮಗೆ ಹೇಳುತ್ತೇನೆ.

ಅಮೃತಮಹಲ್ ಕಾವಲು ಜಮಿನು ವಿಚಾರ ಹೇಳಿದೆ. ಇದಕ್ಕೆ ಕೊಡತಕ್ಕ ಸಬ್‌ಸಿಡಿ ಪರಿಹಾರ ಶೀಘ್ರದಲ್ಲಿ ಕೊಟ್ಟು, ಸರಕಾರ ಆರ್ಡರ್ ಮಾಡಿರುವ ಪ್ರಕಾರ ಕ್ರಮ ಕೈಕೊಂಡು ಅತಿ ಶೀಘ್ರದಲ್ಲಿ ಇದನ್ನು ಮಾಡಬೇಕು. ಯಾಕೆಂದರೆ, ಇನು ಇಲ್ಲದೆ ಎರಡು ವರ್ಷವಾಯಿತು. ಇದರಲ್ಲಿ ಹೆಚ್ಚು ದುರ್ವ್ಯಾಪಾರ ನಡೆಯುತ್ತಿದೆ. ನೀವು ಇದರ ಬಗ್ಗೆ ಏನಾದರೂ ಸಂಶಯ ಪಡುತ್ತಿದ್ದರೆ ಅಸೆಂಬ್ಲಿ ಅಧಿವೇಶನ ಮುಗಿದತಕ್ಷಣ ನೀವು ನಮ್ಮ ತಾಲ್ಲೂಕಿಗೆ ಬರುವ ಪ್ರೋಗ್ರಾಂ ಹಾಕಿದರೆ ನಾನು ನಿಮಗೆ ಎಷ್ಟೆಷ್ಟು ಅಕ್ರಮ ಸಂಪಾದನೆ ಮಾಡುತ್ತಿದ್ದಾರೆ ಎಂಬುದಕ್ಕೆ ನಿದರ್ಶನ ತೋರಿಸುತ್ತೇನೆ. ಇಷ್ಟೊಂದು ಲಾಭದ ಹಣ ಒಬ್ಬನೇ ತೆಗೆದುಕೊಳ್ಳುತ್ತಿರುವುದು ಬಹಳ ಅನ್ಯಾಯದ ಸಮಾಚಾರ. ತಾವು ದೊಡ್ಡ ಮನಸ್ಸು ಮಾಡಿ ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತೀರಿ ಎಂದು ತಿಳಿದುಕೊಂಡು ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ನಂಜಪ್ಪ (ಗಂಡಸಿ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ಪಶುಪಾಲನೆ ಇಲಾಖೆಗೆ ಸಂಬಂಧಪಟ್ಟ 1967-68ನೇ ಸಾಲಿನ ಬೇಡಿಕೆಯನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಸೂಚನೆ ಮಾಡುತ್ತೇನೆ.

ನಮ್ಮ ರೈತಾಪಿ ಜನರು ದಿನಚರಿ ಕರ್ತವ್ಯದಲ್ಲಿ ವ್ಯವಸಾಯ ಮತ್ತು ಪಶುಪಾಲನೆ ಒಂದಕ್ಕೊಂದು ಸೇರಿಸಿಕೊಂಡು ಕೆಲಸ ಮಾಡುತ್ತಾರೆ. ಪಶುಪಾಲನೆ ಸಾಮಾನ್ಯವಾಗಿ ಆದಿ ಕಾಲದಿಂದ ರೈತಾಪಿ ಜನರಿಗೆ ಬಂದಿದೆ. ಯಾವ ಇಲಾಖೆಯಿಂದಾಗಲಿ ಯಾರಿಂದಲೇ ಆಗಲಿ ಸಹಾಯವಿಲ್ಲದೆ ಬಹು ಕಾಲದಿಂದ ರೈತಾಪಿ ಜನರು ಪಶುಪಾಲನೆ ಮಾಡಿಕೊಂಡು ಹಾಲು ಉತ್ಪಾದನೆ ಮಾಡಿಕೊಳ್ಳುವುದು ವ್ಯವಸಾಯಕ್ಕೆ ಬೇಕಾದ ಎತ್ತುಗಳನ್ನು ಇಟ್ಟುಕೊಳ್ಳುವುದು ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಉತ್ಪತ್ತಿ ಮಾಡಿಕೊಂಡು ದೇಶ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ದೇಶದಲ್ಲಿ ಎರಡು ತಳಿ ಪ್ರಸಿದ್ಧವಾದುದು ಅಂದರೆ ಹಳ್ಳಿಕಾರ ಹಸು ಮತ್ತು ಅಮೃತಮಹಲ್ ಹಸು. ಹಳ್ಳಿಕಾರ ಹಸು ಎತ್ತುಗಳು ಕೆಲಸ ಮಾಡತಕ್ಕಂಥ ಎತ್ತುಗಳೆಂದು ನಮ್ಮ ಮೈಸೂರಿನಲ್ಲಿ ಸುಪ್ರಸಿದ್ಧವಾಗಿವೆ. ಸಾಮಾನ್ಯವಾಗಿ ದಕ್ಷಿಣ ಮೈಸೂರು ಪ್ರದೇಶದಿಂದ ಉತ್ತರದ ಕಡೆಗೆ ಸಾವಿರಾರು ಸಂಖ್ಯೆಯಲ್ಲಿ ಈ ದನಗಳು ವ್ಯವಸಾಯಕ್ಕಾಗಿ ಹೋಗುತ್ತವೆ. ಇಷ್ಟು ಸುಪ್ರಸಿದ್ಧವಾಗಿದ್ದರೂ ಕೂಡ ಸರಕಾರ ಒಂದು ಹಳ್ಳಿಕಾರ ಪಶುಪಾಲನೆ ಕ್ಷೇತ್ರ ಎಂದು ಏರ್ಪಾಡು ಮಾಡಿಲ್ಲ. ಒಂದು ಫಾರ್ಮ್ ಮಾಡಿ ರೈತರಿಗೆ ಮಾರ್ಗದರ್ಶನ ಮಾಡಿಲ್ಲ. ಆದುದರಿಂದ ಸರಕಾರ ಫಾರ್ಮ್ ಪ್ರಾರಂಭ ಮಾಡಿ ರೈತರಿಗೆ ಮಾರ್ಗದರ್ಶನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಸೂಚನೆ ಕೊಡುತ್ತೇನೆ.

ಎರಡನೆಯದಾಗಿ, ಅಮೃತಮಹಲ್ ಕೂಡ ಬಹಳ ಅತ್ಯುತ್ತಮವಾದ ಜಾತಿ, ಇದು ಮೈಸೂರು ದೇಶದಲ್ಲಿ ಹೆಸರುವಾಸಿಯಾದ ತಳಿ. ಕೆಲಸಕ್ಕೆ ಬಹು ಚುರುಕು ಎಂದು ನೂರಾರು ವರ್ಷಗಳಿಂದ ಪ್ರಸಿದ್ಧವಾದ ಉತ್ತಮ ತಳಿ ಇದು ಆಗಿದೆ. ಆದುದರಿಂದ ಸರಕಾರದವರು ನೇರವಾಗಿ ಅನೇಕ ಫಾರ್ಮ್‌ಗಳನ್ನು ತೆರೆದು ಇದನ್ನು ಪಾಲನೆ ಮಾಡುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ಅಮೃತಮಹಲ್ ತಳಿಯನ್ನು ಅತ್ಯುತ್ತಮ ಮಟ್ಟದಲ್ಲಿ ಇಡಬೇಕು ಎಂಬ ಉದ್ದೇಶದಿಂದ ಅಜ್ಜಂಪುರದಲ್ಲಿ 1924ರಲ್ಲಿ ಒಂದು ಕೇಂದ್ರ ಪ್ರಾರಂಭ ಮಾಡಿದ್ದಾರೆ. ಆದರೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವಿಲ್ಲದೆ ಅಲ್ಲಿ ಸರಿಯಾಗಿ ಕೆಲಸ ಕಾರ್ಯ ನಡೆಯದೆ ಪ್ರಗತಿ ಕುಂಠಿತವಾಗಿದೆ. ಈ ವಿಚಾರ ಮಂತ್ರಿವರ್ಯರು ಗಮನಕ್ಕೆ ತೆಗೆದುಕೊಂಡು ಇದಕ್ಕೆ ನಿಗಾ ಕೊಟ್ಟು ಅಜ್ಜಂಪುರ ಪಶುಪಾಲನೆ ಕ್ಷೇತ್ರ ವಿಸ್ತರಣೆಮಾಡಿ ಉತ್ತಮ ತಳಿ ಎತ್ತುಗಳ ಉತ್ಪತ್ತಿ ಹೆಚ್ಚು ಮಾಡಬೇಕು. ಇದಕ್ಕೆ ಏನೇನು ಅವಶ್ಯಕತೆ ಇದೆಯೋ ಅದನ್ನು ಒದಗಿಸಿ ಕೊಡಬೇಕು. ಇಂಥ ಒಂದು ನೀತಿಯನ್ನು ಸರಕಾರ ಹಾಕಿಕೊಂಡು ಅದಕ್ಕೆ ಅನುಗುಣವಾಗಿ ಸೂಕ್ತ ಮಾರ್ಪಾಟು ಮಾಡಬೇಕು ಎಂದು ಈ ಸಂದರ್ಭದಲ್ಲಿ ಈ ಸೂಚನೆ ಮಾನ್ಯ ಮಂತ್ರಿವರ್ಯರಿಗೆ ಕೊಡುತ್ತೇನೆ.

ಇದೇ ಸಂದರ್ಭದಲ್ಲಿ ಅಮೃತ್‌ಮಹಲ್ ಕಾವಲುಗಳು ಅನೇಕ ವಿಧದಲ್ಲಿ ದುರ್ವಿನಿಯೋಗ ಆಗುತ್ತಿವೆ. ಅದನ್ನು ಹಳ್ಳಿಗಾರರು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಾ ಇಲ್ಲ ಎಂದು ಹೇಳಿದರು. ನಾನು ಹೇಳುವುದು ಇಷ್ಟೆ. ಅಮೃತ್‌ಮಹಲ್ ಇಲಾಖೆಯಲ್ಲಿ ಅಮೃತ್‌ಮಹಲ್ ದನಗಳನ್ನು ಪಾಲನೆ ಮಾಡುವುದಕ್ಕೋಸ್ಕರ ಕೊಟ್ಟಿದ್ದಂಥ ಜಮೀನುಗಳನ್ನು ಯಾರೂ ದುರುಪಯೋಗ ಮಾಡುತ್ತಾ ಇಲ್ಲ. ಇಲ್ಲಿ ಕೊಟ್ಟಿರತಕ್ಕಂಥ ಜಮೀನೆಲ್ಲಾ ಉತ್ತಮರೀತಿಯಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಯಾವ ರೀತಿಯಲ್ಲಿ ಪೋಷಣೆ ಮಾಡುತ್ತಾ ಇದ್ದಾರೋ ಅದಕ್ಕಿಂತಲೂ ಕೂಡ ಉತ್ತಮ ರೀತಿಯಲ್ಲಿ ಪಶುಪಾಲನೆ ಮಾಡುತ್ತಾ ಇದ್ದಾರೆ. ಕಾವಲುಗಳ ಅವಶ್ಯಕತೆ ಇದೆ. ಅಮೃತ್‌ಮಹಲ್ ಪಶುಪಾಲನೆ ಬೇಡ, ತಮ್ಮದೇ ಆದ ಸ್ವಂತ ರೀತಿಯಲ್ಲಿ ಪಶುಪಾಲನೆ ಮಾಡಲಿ, ಪಶುಪಾಲಕರನ್ನು ವಜಾಮಾಡಿ ಅವರಿಗೆ ಪರಿಹಾರ ಕೊಡಲಿ, ಇದರಿಂದ ಅನ್ಯಾಯವಾಗುತ್ತದೆ. ಹತ್ತಾರುಸಾವಿರ ರೂಪಾಯಿಗಳನ್ನು ದುಡಿಮೆ ಮಾಡುತ್ತಾ ಇದ್ದಾರೆ, ದೇಶದ ಹಿತದೃಷ್ಟಿಯಿಂದ ಇದು ಒಳ್ಳೆಯದಲ್ಲ ಎಂದು ಕೆಲವರು ಹೇಳಿದರು. ನಾನು ಅದನ್ನು ಅಲ್ಲಗೆಳೆಯುತ್ತೇನೆ. ಯಾರೂ ಕೂಡ ದುರ್ವಿನಿಯೋಗ ಮಾಡುತ್ತಾ ಇಲ್ಲ. ಇವೊತ್ತಿನ ದಿವಸ ಪಶುಪಾಲನೆಯಲ್ಲಿ ಮಾರ್ಪಾಡುಗಳು ಆಗಬೇಕು. ದೇಶದಲ್ಲಿ ಹಾಲಿನ ಉತ್ಪತ್ತಿ ಮಾಡುವ ದನಗಳು ಬೇಕಾಗಿವೆ. ಹೆಚ್ಚು ಹಾಲು ಉತ್ಪತ್ತಿ ಆಗಬೇಕು. ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಾ ಇದೆ. ಅದಕ್ಕನುಗುಣವಾಗಿ ಪ್ರತಿಯೊಂದು ಕಡೆಯೂ ಸರಿಯಾಗಿ ಉತ್ಪತ್ತಿ ಮಾಡಬೇಕು ಎಂದು ಸರ್ಕಾರದವರು ತಮ್ಮ ಒಂದು ಪಾಲಿಸಿಯನ್ನು ಹಾಕಿಕೊಂಡು ಯಾವರೀತಿ ಬದಲಾವಣೆ ಮಾಡಲು ಹೊರಟಿದ್ದಾರೋ ಅದೇರೀತಿ ಪಶುಪಾಲಕರೂ ಬದಲಾವಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಅವರೂ ಕೂಡ ಎಲ್ಲಾ ಒಪ್ಪಿದ್ದಾರೆ. ಸರ್ಕಾರದವರು ಪಶುಪಾಲನೆಯನ್ನು ಹಾಲಿನ ಉತ್ಪತ್ತಿ ದೃಷ್ಟಿಯಿಂದ ಬೇರೆ ವಿಧವಾಗಿ ಅಭಿವೃದ್ಧಿಗೊಳಿಸಲು ಸಹಾಯ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪಶುವೈದ್ಯ ಇಲಾಖೆಯ ವಿಚಾರವಾಗಿ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಪಶುವೈದ್ಯ ಇಲಾಖೆಯಲ್ಲಿ ಸಾಮಾನ್ಯವಾಗಿ ಹೋಬಳಿ ಮತ್ತು ಕೆಲವು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ವೆಟರ್ನರಿ ಇನ್‌ಸ್ಪೆಕ್ಟರ್‌ಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಅದರಲ್ಲೂ ಕೂಡ ಡಿಸ್ಪೆನ್ಸರಿಯಲ್ಲಿ ವೆಟರ್ನರಿ ಇನ್‌ಸ್ಪೆಕ್ಟರ್‌ಗಳನ್ನು ಅಲ್ಲಿ ಅಧಿಕಾರಿಗಳನ್ನಾಗಿ ನೇಮಿಸಿ ಆಸ್ಪತ್ರೆಗಳನ್ನು ನಡೆಸುತ್ತಾ ಇದ್ದಾರೆ. ಸಾಮಾನ್ಯವಾಗಿ ರೂರಲ್ ವೆಟರ್ನರಿ ಡಿಸ್ಪೆನ್ಸರಿಯ ಜವಾಬ್ದಾರಿಯನ್ನು ಮುಂದುವರಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಎನ್.ಎಫ್. ಡಿಸ್ಪೆನ್ಸರಿ ಕೆಲಸಕಾರ್ಯಗಳು ನಡೆಯುತ್ತವೆ. ಅಲ್ಲಿಯ ಸ್ಟಾಕ್‌ಮನ್ 9 ತಿಂಗಳು ಟ್ರೈನಿಂಗ್ ತೆಗೆದುಕೊಂಡು ಆದಮೇಲೆ ಅವರನ್ನೇ ಡಾಕ್ಟರ್ ಆಗಿ ಪರಿಗಣಿಸಿ ರೂರಲ್ ವೆಟರ್ನರಿ ಡಿಸ್ಪೆನ್ಸರಿಗೆ ಹಾಕುವುದು ಶೋಚನೀಯ. ಸರಿಯಾಗಿ ನುರಿತು ಪಶುಪಾಲನೆಯಲ್ಲಿ ತಜ್ಞರಾದ ಡಾಕ್ಟರನ್ನು ಪ್ರತಿಯೊಂದು ರೂರಲ್ ವೆಟರ್ನರಿ ಡಿಸ್ಪೆನ್ಸರಿಗೆ ಹಾಕಬೇಕು ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಇನ್ನು ಸಾಮಾನ್ಯವಾಗಿ ಮೈಸೂರು ದೇಶದಿಂದ ಅನೇಕ ಜನ ಪರದೇಶಕ್ಕೆ ಹೋಗಿ ವಿದ್ಯಾವಂತರಾಗಿ ಬಂದವೇಳೆ ಸಾಮಾನ್ಯವಾಗಿ ಒಂದೊಂದು ಸಬ್ಜೆಕ್ಟ್‌ನಲ್ಲಿ ಸ್ಪೆಷಲೈಸ್ ಮಾಡಿಕೊಂಡು ಬಂದಿರುತ್ತಾರೆ. ಆದರೆ ಅವರು ಯಾವುದರಲ್ಲಿ ಒದಿ ತಜ್ಞರಾಗಿ ಬಂದಿರುತ್ತಾರೆ ಅವರು ಅಂತಹ ಕೆಲಸವನ್ನು ನಿರ್ವಹಿಸುವುದಕ್ಕೆ ಬಿಡದೆ ಯಾವ ಯಾವುದಕ್ಕೋ ಕೆಲಸಕ್ಕೆ ಕಳಿಸಿದ್ದಾರೆ. ಸರ್ಕಾರದವರು ಆ ಜನರನ್ನು ಹೊರಗಡೆ ದೇಶಕ್ಕೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಿದಮೇಲೆ ಯಾವುದಾದರೂ ಒಂದರಲ್ಲಿ ನೈಪುಣ್ಯತೆಯನ್ನು ಪಡೆದು ಬಂದಿರುವುದರಿಂದ ಅಂತಹ ನೈಪುಣ್ಯತೆಯನ್ನು ನಮ್ಮ ದೇಶ ಅಭಿವೃದ್ಧಿ ಹೊಂದುವುದಕ್ಕೋಸ್ಕರ ಉಪಯೋಗಿಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿವರ್ಯರಿಗೆ ಅರಿಕೆ ಮಾಡುತ್ತೇನೆ. ಎಷ್ಟೋ ಜನ ವಿದ್ಯಾವಂತರಾಗಿ ಬಂದಿದ್ದರೂ ಕೂಡ ಸಾಮಾನ್ಯವಾಗಿ ತಲೆತಲಾಂತರದಿಂದ ಬಂದಂಥ ಖಾಯಿಲೆಗಳಿಗೆ ಏನು ಔಷಧಿಯನ್ನೂ ಪತ್ತೆ ಮಾಡಿಲ್ಲ. ಗೆರೆಸಲು ಖಾಯಿಲೆ ತಲೆತಲಾಂತರದಿಂದ ಬಂದಿದೆ. ಇವೊತ್ತಿನವರೆಗೂ ಕೂಡ ಔಷಧಿಯನ್ನು ಕಂಡುಹಿಡಿಯದೆ ಇರುವುದು ಶೋಚನೀಯವಾದ ವಿಚಾರ. ಆದಷ್ಟು ಜಾಗ್ರತೆ ಈ ಖಾಯಿಲೆಗೆ ಔಷಧಿ ಕಂಡುಹಿಡಿಯಬೇಕು. ಇದರಿಂದ ರೈತಾಪಿ ಜನಗಳಿಗೆ ಅನುಕೂಲವಾಗುತ್ತದೆ. ಈ ಖಾಯಿಲೆಯಿಂದ ದನಗಳು ಸಾಯದೇ ಹೋದರೂ ತಿಂಗಳಾನುಗಟ್ಟಲೆ ನರಳಿ ಸುಧಾರಿಸಿಕೊಳ್ಳಬೇಕಾಗಿದೆ. ತಿಂಗಳಾನುಗಟ್ಟಲೆ ಸುಧಾರಿಸಿಕೊಳ್ಳಬೇಕಾಗಿರುವುದರಿಂದ ರೈತಾಪಿ ಜನಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರದವರು ಈ ಖಾಯಿಲೆಗೆ ಔಷಧಿಯನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯ. ಅದೇ ಸಂದರ್ಭದಲ್ಲಿ ಮಲೆನಾಡಿನಲ್ಲಿ ಬವರೆಟ್ ಖಾಯಿಲೆ

(ಶ್ರೀ ಬಿ. ನಂಜಪ್ಪ)

ಎಂಬ ಇನ್ನೊಂದು ಖಾಯಿಲೆಯಿಂದ ದನಗಳು ತಿಂಗಳಾನುಗಟ್ಟಲೆ ನರಳಬೇಕಾಗುತ್ತದೆ. ಇದಕ್ಕಾಗಿ ದನಗಳಿಗೆ ಹೆಚ್ಚು ಇಂಜಕ್ಷನ್ ಕೊಡಬೇಕಾಗುತ್ತದೆ. ಒಂದೊಂದು ದನಕ್ಕೆ 50 ರೂಪಾಯಿನ ಔಷಧಿ ಕೊಂಡುಕೊಂಡು ಬಂದು ಕೊಡಬೇಕಾಗುತ್ತದೆ. ಇದರಿಂದ ಸಾಮಾನ್ಯವಾದ ರೈತಾಪಿ ಜನಕ್ಕೆ ಕೊಂಡುಕೊಂಡು ಬಂದು ಕೊಡುವುದಕ್ಕೆ ಚೈತನ್ಯ ಇರುವುದಿಲ್ಲ. ಆದುದರಿಂದ ಈ ಖಾಯಿಲೆಗೆ ಔಷಧಿ ವಿಚಾರಿಸಿದ್ದರಲ್ಲಿ ಇನ್ನೂ ಕೂಡ ಔಷಧಿ ಕಂಡುಹಿಡಿದಿಲ್ಲ ಎಂದು ಹೇಳಿದರು. ಆದಷ್ಟು ಜಾಗ್ರತೆ ಈ ಖಾಯಿಲೆಗಳಿಗೆ ಔಷಧಿಯನ್ನು ಕಂಡುಹಿಡಿಯಬೇಕು ಎಂದು ಮಾನ್ಯ ಮಂತ್ರಿವರ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ. ಇವೊತ್ತಿನ ದಿವಸ ಅನಿಮಿಲ್ ಹಸ್ಬೆಂಡರಿ ಮಂತ್ರಿಗಳು ರೈತಾಪಿ ಜನಗಳಲ್ಲಿ ಇದ್ದು ವ್ಯವಸಾಯ ಪಶುಪಾಲನೆ ಸ್ವತಃ ಮಾಡಿ ಬಂದಿರುವವರು ಅಂತಹವರು ಇವೊತ್ತಿನ ದಿವಸ ನಮ್ಮ ಇಲಾಖೆಯಲ್ಲಿ ಇದ್ದಾರೆ. ರೈತಾಪಿ ಕಷ್ಟಸುಖಗಳು ಗೊತ್ತಿದೆ. ದನಗಳನ್ನು ಸಾಕುವುದು ಪಶುಪಾಲನೆ ಪಶುವೈದ್ಯ ಎಲ್ಲಾ ವಿಚಾರದಲ್ಲೂ ತಿಳಿದಿದ್ದಾರೆ. ಅಂತಹವರ ಕೈಯ್ಯಲ್ಲಿ ಈ ಇಲಾಖೆ ಸಿಕ್ಕಿದೆ. ತಾವು ಇದರ ವಿಚಾರದಲ್ಲಿ ಆಸಕ್ತಿ ವಹಿಸಿ ರೈತಾಪಿ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಆಸಕ್ತಿ ವಹಿಸಬೇಕು ಎಂದು ಹೇಳುತ್ತೇನೆ. 1965-66ನೇ ಇಸವಿಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಉತ್ತಮ ರೀತಿಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ಗೆ ಸುಮಾರು ಒಂದು ಕೋಟಿ ರೂಪಾಯಿ ಲಾಭ ಬರುವ ಹಾಗೆ ಕೆಲಸ ಮಾಡಿದ್ದಾರೆ. ಅದೇರೀತಿ ಇವೊತ್ತಿನ ದಿವಸ ಬೆಂಗಳೂರು ಡೈರಿ ಲಾಸ್ ಆಗುತ್ತಾ ಇದೆ ಎಂದು ಎಲ್ಲರೂ ಕೂಡ ಹೇಳುತ್ತಾ ಇದ್ದಾರೆ. ಅದೂ ತಮ್ಮ ಹತೋಟಿಯಲ್ಲಿ ಇದೆ. ಉತ್ತಮವಾದ ಹಾಲನ್ನು ಸರಬರಾಜು ಮಾಡುವುದಲ್ಲದೆ ಉತ್ತಮ ರೀತಿಯಲ್ಲಿ ಆದಾಯವನ್ನು ಹೆಚ್ಚು ಮಾಡುವುದರಲ್ಲಿ ಶಕ್ತರಾಗಿದ್ದೀರಿ ಎಂದು ಹೇಳುತ್ತೇನೆ. ಇವನ್ನು ಸರಿಪಡಿಸಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದನೆಯನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Sri DIGAMBAR RAO BALWANT RAO (Aland).—Mr. Speaker Sir, today's demand regarding Animal Husbandry is a very important demand in the sense that our agriculture is mostly dependent upon the well-being of the animal stock. From the statistics that the Government have provided, it shows that only 655 rural veterinary dispensaries were there till 1964 and now the clinical laboratories that are stated to be in district headquarters are only four in number, whereas the live-stock is about 20,666 thousands, poultry are said to be 8,861 thousands. It seems that even the livestock is almost like our population swelling in number and so, the number of veterinary dispensaries that are working in the rural areas in our State are not commensurate with the size of the population of the animals and they require to be added to speedily.

Secondly, they speak about the mass-vaccination programme and say that it has been successful in eradicating the disease of rinder pest. But what I feel is that it still requires to be intensified. In Gulbarga District, I have to submit that rural veterinary dispensaries are not in large number. In Aland there is one hospital and one or two rural veterinary dispensaries. The other day when Director of Animal Husbandry visited Aland I have also made a suggestion that rural veterinary dispensaries at four or five places may be established so that they may cater to the needs of the rural population.

Regarding Dairy, I have to submit Sir, that in our Aland Taluka, there are some societies functioning. In one society only 50 litres of milk per day is being provided but the loan that was advanced to that

society is about Rs. 30,000 or more. Whereas, there is another dairy society in village Kazur, taluka Aland, which is providing 300 litres daily but the amount of loan that was given is very meagre sum of Rs. 10,000. I would request the Hon'ble Minister that such dairy societies which are doing good work and are prosperous, may be given more loans so that their activities may be accelerated.

Regarding poultry, I have a submission to make. There was a poultry farm at Aland and as the Hon'ble Member Parameswarappa said just now, that poultry farm has disappeared with the result that it has been difficult job for people to take to poultry. Of course, Government also has started some training scheme and training is given to them. The scheme is also there for encouraging poultry farm and I would request that scientific knowledge about poultry farming may be given to the general public. If that is done with necessary interest, I think poultry farming will prosper and that would go to a large extent in solving our food problem.

With these words, I thank you, Sir.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಪಶು ಸಂಗೋಪನೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಸೂಚನೆಗಳನ್ನು ಕೊಡ ಬಯಸುತ್ತೇನೆ.

ಈ ವರ್ಷದ ಪ್ರಾರಂಭದಲ್ಲಿ ಸುಮಾರು 40 ರೂರಲ್ ವೆಟರಿನರಿ ಡಿಸ್ಪೆನ್ಸರಿಗಳು ಮತ್ತು ಮೂರು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ ಪ್ರಾರಂಭ ಮಾಡುತ್ತಾರೆಂದು ನಮಗೆ ಗೊತ್ತಾಗಿದೆ. ರಾಜ್ಯದಲ್ಲಿರುವ 19 ಜಿಲ್ಲೆಗಳಿಗೆ ಇವರು ಕೊಡತಕ್ಕ 40 ಆಸ್ಪತ್ರೆಗಳು ಎಲ್ಲಿಗೆ ಸಾಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಇವತ್ತಿನ ದಿವಸ ಮನುಷ್ಯರಿಗೆ ಎಷ್ಟು ಬೇನೆ ಬರುತ್ತದೆಯೋ ಅದೇ ಪ್ರಕಾರ ದನಗಳಿಗೂ ಕೂಡ ನಾನಾ ತರಹ ಬೇನೆಗಳು ಬರುತ್ತಿವೆ. ಒಂದು ಜೋಡಿ ಎತ್ತುಗಳ ಬೆಲೆ ಒಂದು ಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲ ಒಂದು ಎತ್ತಿಗೆ ಏನಾದರೂ ರೋಗ ಬಂದು ಅದು ಸತ್ತು ಹೋದರೆ ಒಕ್ಕಲುತನ ಮಾಡುವವನ ಜೀವನವೇ ನಿರ್ಜೀವವಾಗುತ್ತದೆ. ಇಂಥ ಪ್ರಾಮುಖ್ಯವಾದ ವಿಚಾರಗಳಿಗೆ ನಾವು ಎಷ್ಟರಮಟ್ಟಿಗೆ ಲಕ್ಷ್ಯ ಕೊಟ್ಟಿದ್ದೇವೆಂದರೆ ಕೇವಲ ಆರು ಕೋಟಿ ರೂಪಾಯಿ ಮಾತ್ರ ಇದಕ್ಕೆ ಒದಗಿಸಿದ್ದೇವೆ ಎಂದು ನೋಡಿದರೆ ನನಗೆ ತುಂಬ ಅಸಮಾಧಾನವಾಗುತ್ತದೆ. ಇವತ್ತಿನ ದಿವಸ ವ್ಯವಸಾಯದ ಅಭಿವೃದ್ಧಿ ಮಾಡಬೇಕು, ಹೆಚ್ಚು ಬೆಳೆಯಬೇಕು ಎಂದು ಹೇಳುತ್ತೇವೆ. ಯಾವಾಗ ಹೆಚ್ಚು ಬೆಳೆಯುವುದಕ್ಕೆ ಆಗುತ್ತದೆ ಎಂದರೆ ಉತ್ತಮ ತಳಿಯ ದನಗಳನ್ನು ಕಟ್ಟಿಕೊಳ್ಳಬೇಕು, ಅವುಗಳಿಂದ ಗೊಬ್ಬರವನ್ನು ಪಡೆಯಬೇಕು, ಗೊಬ್ಬರವನ್ನು ಹೊಲಕ್ಕೆ ಹಾಕಬೇಕು, ಆಗ ಉತ್ತಮ ಬೆಳೆ ಬರುವುದಕ್ಕೆ ಪ್ರಾರಂಭವಾಗುತ್ತದೆ. ದನಗಳನ್ನು ಕಟ್ಟುವುದಿಲ್ಲ, ಗೊಬ್ಬರ ಬೇಕಾಗಿಲ್ಲ ಏನೂ ಬೇಕಾಗಿಲ್ಲ, ಆಹಾರ ಹೆಚ್ಚು ಬೆಳೆಯಿರಿ ಎಂದು ಹೇಳಿದರೆ ಹೆಚ್ಚು ಬೆಳೆಯಾಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಪ್ರಿಲಿಮಿನರೀಸ್ ಅದನ್ನೆಲ್ಲಾ ಮೊದಲೇ ಕಾಪಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಮೊದಲು ಬೇಕಾದ್ದು ಎಂದರೆ ಎತ್ತುಗಳು ಮತ್ತು ದನಗಳು. ಎತ್ತುಗಳು ಚೆನ್ನಾಗಿ ವ್ಯವಸಾಯ ಮಾಡುವುದಕ್ಕೆ ಬೇಕಾಗುತ್ತವೆ ಮತ್ತು ದನಗಳನ್ನು ಜೋಪಾನ ಮಾಡುವುದರಿಂದ ನಮಗೆ ಹಾಲೂ ಸಿಕ್ಕುತ್ತದೆ ಗೊಬ್ಬರವೂ ಸಿಕ್ಕುತ್ತದೆ. ಇವೆರಡೂ ಇಲ್ಲದೆ ಒಕ್ಕಲುತನ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ, ಹೆಚ್ಚು ಬೆಳೆಯುವುದಕ್ಕೂ ಸಾಧ್ಯವಿಲ್ಲ. ನಾನು ಹೇಳುವುದೇನೆಂದರೆ, ಈ ವಿಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಮತ್ತು ರಾಜ್ಯಕ್ಕೆ ಕೊಡಬೇಕೆಂದಿರುವ 40 ಆಸ್ಪತ್ರೆಗಳು ಸಾಲದು ಎಂದು ಹೇಳುತ್ತಿದ್ದೇನೆ.

ಈಗಾಗಲೇ ಬೇಕಾದಷ್ಟು ರೂರಲ್ ವೆಟರಿನರಿ ಡಿಸ್ಪೆನ್ಸರಿಗಳನ್ನು ಪ್ರಾರಂಭ ಮಾಡಿದ್ದಾರೆ. ಡಿಸ್ಪೆನ್ಸರಿಗಳು ಇದ್ದ ಕಡೆ ಸ್ಟಾಕ್‌ಪೇಜ್ ಇಲ್ಲ. ಡಾಕ್ಟರುಗಳಿಲ್ಲ, ಔಷಧಿಗಳಿಲ್ಲ. ಇದರಿಂದಾಗಿ ಏನಾದರೂ ಸಾಂಕ್ರಾಮಿಕ ರೋಗಗಳು ಬಂದಾಗ ಅದನ್ನು ವಾಸಿ ಮಾಡುವುದಕ್ಕೆ ತುಂಬ ತೊಂದರೆಯಾಗಿದೆ. ಇಂಥ ಸಂದರ್ಭಗಳಲ್ಲಿ ಬಹಳ ಒಳ್ಳೆಯ ಬೆಲೆಯುಳ್ಳ ಔಷಧಿಗಳು ಬೇಕಾಗುತ್ತವೆ.

(ಶ್ರೀಮತಿ ಬಸವರಾಜೇಶ್ವರಿ)

ಕನಿಷ್ಟ ಪಕ್ಷ ಒಂದೊಂದು ಡಿಸ್ಪೆನ್ಸರಿಗೂ ಎಮರ್ಜೆನ್ಸಿ ಎಂದು ತಿಳಿದು ಹ್ಯೆಯರ್ ಆಂಟಿ ಬಯೋಟಿಕ್ಸ್ ಒದಗಿಸಿಕೊಡಬೇಕೆಂದು ಸರ್ಕಾರದವರಿಗೆ ಸೂಚನೆಯನ್ನು ಕೊಡುತ್ತಿದ್ದೇನೆ. ಕೇವಲ ಪೌಡರ್, ಅಯೋಡಿನ್ ಇಷ್ಟನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರ ಜೊತೆಗೆ ಹ್ಯೆಯರ್ ಆಂಟಿಬಯೋಟಿಕ್ಸ್ ಕೂಡ ರೂರಲ್ ವೆಟೆರಿನರಿ ಡಿಸ್ಪೆನ್ಸರಿಗಳಿಗೆ ಒದಗಿಸುವುದು ಬಹಳ ಉತ್ತಮ ಎಂದು ಸರ್ಕಾರದವರಿಗೆ ನಾನು ಸೂಚನೆ ಮಾಡುತ್ತಿದ್ದೇನೆ.

ಈಗಾಗಲೇ ಎಕ್ಸ್‌ಟೆನ್‌ಷನ್ ಆಫೀಸರುಗಳ ಹುದ್ದೆಯನ್ನು ರದ್ದು ಮಾಡುತ್ತಾರೆನ್ನುವ ವರದಿ ಇದೆ. ಏಕೆ ರದ್ದು ಮಾಡುತ್ತಾರೆಂದು ನನಗೆ ಗೊತ್ತಾಗುವುದಿಲ್ಲ. ಈಗ ವ್ಯವಸಾಯಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತಿದ್ದೇವೆಯೋ ಇದಕ್ಕೂ ಅಷ್ಟೇ ಪ್ರಾಮುಖ್ಯತೆಯನ್ನು ಕೊಡಬೇಕೆಂದು ನಾನು ಮೊದಲೇ ತಿಳಿಸಿದೆ. ಎಕ್ಸ್‌ಟೆನ್‌ಷನ್ ಆಫೀಸರ ಹುದ್ದೆಗಳನ್ನು ರದ್ದು ಮಾಡುವುದರಿಂದ ಎಷ್ಟು ಉಳಿತಾಯ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಈ ಹುದ್ದೆಗಳನ್ನು ರದ್ದುಮಾಡುವುದು ಅಷ್ಟು ಸೂಕ್ತವಲ್ಲ. ಒಕ್ಕಲುತನ ಮತ್ತು ಪಶು ಸಂಗೋಪನ ಎರಡೂ ಒಟ್ಟಿಗೆ ನಡೆಯಬೇಕು ಎನ್ನುವ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಫಾಡರ್ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದಲ್ಲಿರುವ ಫಾರೆಸ್ಟ್ ಲ್ಯಾಂಡ್ಸ್ ಮತ್ತು ಗ್ಮೈರಾನ್ ಲ್ಯಾಂಡ್ಸ್ ಕೆಲವು ಜನರಿಗೆ ಕೊಟ್ಟಿದ್ದಾರೆ. ಇನ್ನೂ ಹೆಚ್ಚು ಜಮೀನು ಇದೆ. ದನಗಳಿಗೆ ಮೇವು ಇಲ್ಲದೆ ಹೋದರೆ ಅದನ್ನು ಒದಗಿಸುವುದು ಪ್ರಥಮ ಕರ್ತವ್ಯವಾಗಿದೆ. ಹೋದ ವರ್ಷ ನಾವು ನೋಡಿದ್ದೇವೆ, ನಮ್ಮ ಭಾಗದಲ್ಲಿ ದನಗಳಿಗೆ ಮೇವು ಸಿಕ್ಕದೆ ಒಂದು ಬಂಡಿ ಮೇವಿಗೆ ನೂರು ರೂಪಾಯಿ ಕೊಟ್ಟು ಕೊಂಡುಕೊಳ್ಳಬೇಕಾದ ಪ್ರಸಂಗ ಬಂತು. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಫಾಡರ್ ಡೆವಲಪ್‌ಮೆಂಟ್ ಕೆಲಸವನ್ನು ಕ್ರಾಷ್ ಪ್ರೋಗ್ರಾಂನಲ್ಲಿ ತೆಗೆದುಕೊಳ್ಳಲು ಹೆಚ್ಚು ಗಮನ ಕೊಡಬೇಕು. ಹೈಬ್ರಿಡ್ ಗ್ರಾಸ್ ಬೆಳೆಯುತಕ್ಕ ರೈತರಿಗೆ ಬೀಜಗಳನ್ನು ಒದಗಿಸಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಕೂಡ ಬೀಜ ತಯಾರು ಮಾಡುವ ಫಾಡರ್ ಸ್ಟೇಷನ್ಸ್ ಮಾಡಿ, ಬೀಜ ಕೊಡತಕ್ಕ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಸೂಚನೆ ಮಾಡುತ್ತಿದ್ದೇನೆ.

ಫ್ರೀ ಬ್ರೀಡಿಂಗ್ ಬುಲ್ಸ್ ಅನ್ನು ತಾಲ್ಲೂಕು ಬೋರ್ಡುಗಳ ಮುಖಾಂತರ ಇಲಾಖೆಯವರು ಕೊಟ್ಟಿದ್ದಾರೆ. ಇದನ್ನು ಕೆಲವು ವ್ಯಕ್ತಿಗಳಿಗೆ ಮಾತ್ರ ಕೊಟ್ಟಿದ್ದಾರೆ. ಅವುಗಳ ಸರ್ವಿಸ್ ಸಾಮಾನ್ಯ ಜನಗಳಿಗೆ ಸಿಕ್ಕಲಾರದು ಎಂದು ನನಗೆ ಅನುಮಾನವಾಗಿದೆ. ಬ್ರೀಡಿಂಗ್ ಬುಲ್ಸ್ ತೆಗೆದುಕೊಂಡು ಅದನ್ನು ಕೇವಲ ತಮ್ಮ ಮನೆಗಾಗಿ ಉಪಯೋಗಿಸಿ ಕೆಲವು ದಿನಗಳಾದ ಮೇಲೆ ಅದನ್ನು ಹೊಡೆಯುತ್ತಿದ್ದಾರೆ. ಯಾರಾದರೂ ಸರ್ವಿಸ್ ಕೇಳಿದರೆ ಅದಕ್ಕೆ ದುಡ್ಡು ಕೂಡ ಕೇಳುತ್ತಿದ್ದಾರೆ. ಅದನ್ನು ತೆಗೆದುಬಿಟ್ಟು ಕ್ರಾಸ್ ಬ್ರೀಡಿಂಗ್ ಮಾಡಿ, ವ್ಯಕ್ತಿಗಳಿಗೆ ಕೊಡುವ ಬುಲ್ಸ್ ಏನಿದೆ ಅದನ್ನು ಗ್ರಾಮಪಂಚಾಯಿತಿಗಳಿಗೆ ಕೊಡಿರಿ. ಇದಕ್ಕಿಂತ ಉತ್ತಮವಾದ ಸಲಹೆ ಎಂದರೆ ಕ್ರಾಸ್ ಬ್ರೀಡಿಂಗ್ ಸ್ಟೇಷನ್ಸ್ ಪ್ರಾರಂಭ ಮಾಡುವುದು. ಈಗ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ ಅಲ್ಲಲ್ಲಿ ಮಾಡುತ್ತಿದ್ದಾರೆ. ಹೀಗೆ ಮಾಡಿದಾಗ ಅದರ ಉಪಯೋಗವನ್ನೂ ಹೆಚ್ಚಾಗಿ ಜನರು ಪಡೆಯುವಂತೆ ಮಾಡಬೇಕು. ರಾಯಚೂರು ತುಂಗಭದ್ರ ಪ್ರದೇಶದಲ್ಲಿ ಬೇಕಾದಷ್ಟು ಜಮೀನು ಅಭಿವೃದ್ಧಿಯಾಗಲಿಕ್ಕೆ ನೀರಾವರಿಗೆ ಬೇಕಾದಂಥ ಸವಲತ್ತುಗಳಿವೆ. ಅದಕ್ಕಾಗಿ ಈಗಾಗಲೇ ಮುನಿರಾಬಾದಿನಲ್ಲಿ ಕ್ಯಾಟಲ್ ಬ್ರೀಡಿಂಗ್ ಸ್ಟೇಷನ್, ಷೀಪ್ ಬ್ರೀಡಿಂಗ್ ಸ್ಟೇಷನ್, ಪೌಲ್ಟ್ರಿ, ಈ ಮೂರೂ ಸ್ಟೇಷನ್‌ಗಳನ್ನಿಟ್ಟಿದ್ದಾರೆ ಮತ್ತು ಅಲ್ಲಿ ಬೇಕಾದಂಥ ಹುಲ್ಲು ಕೂಡ ಬೆಳೆಯುತ್ತದೆ. ಬೆಂಗಳೂರಿಗೆ ಹೋದರೆ ಸಕಾಲದಲ್ಲಿ ಕೆಲಸವಾಗುವುದಿಲ್ಲ. ಈಗ ಮೂರು ಜಿಲ್ಲೆಗಳಿಗೆ ಒಂದು ಕೇಂದ್ರವನ್ನು ಮಾಡಿದ್ದಾರೆ, ಅದು ಸಾಲದು, ಆದುದರಿಂದ ಮುನಿರಾಬಾದಿನಲ್ಲೂ ಕೂಡ ಒಂದು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರನ್ನು ತೆರೆಯಬೇಕೆಂದು ಸಲಹೆ ಮಾಡುತ್ತೇನೆ. ಕೆಲವು ಕಡೆಗಳಿಗೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಕೇಂದ್ರವನ್ನು ಮಂಜೂರು ಮಾಡಿದ್ದರೂ ಕೂಡ ಟೆಕ್ನಿಕಲ್ ಸ್ಯಾಂಕ್ಷನ್ ಸಿಕ್ಕಿಲ್ಲ, ಲಿಂಗಸುಗೂರಿಗೆ ಒಂದು ಕೇಂದ್ರ ಮಂಜೂರಾಗಿದ್ದರೂ ಅದು ಕಾರ್ಯಗತವಾಗಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ನೋಡಿ ತಕ್ಷಣ ತಕ್ಕ ಕ್ರಮ ಕೈಕೊಳ್ಳಬೇಕು. ಎಲ್ಲಾ ಮೂರ್ತೆಗಳಲ್ಲೂ ಸೆಮೆನ್‌ಗೆ ಬೆಲೆಯಿದೆ. ಅದು ರೈತರಿಗೆ ಸಕಾಲದಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು.

ನಾಲ್ಕೈದು ವರ್ಷಗಳಿಂದ ಬಗವಟ್ ಗ್ರಾಮಕ್ಕೆ ರೂರಲ್ ವೆಟರ್ನರಿ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ಕೇಳುತ್ತಿದ್ದರೂ ಕೂಡ ಇನ್ನೂ ಕೊಟ್ಟಿರುವುದಿಲ್ಲ, ಆ ಸುತ್ತಮುತ್ತ

20 ಮೈಲುಗಳ ದೂರದವರೆಗೂ ಒಂದು ಆಸ್ಪತ್ರೆಯೂ ಇಲ್ಲದಿರುವುದರಿಂದ ರೈತರಿಗೆ ತೊಂದರೆಯಾಗಿದೆ, ಮಂಜೂರು ಮಾಡಬೇಕು ಎಂದು ತಾಲ್ಲೂಕು ಬೋರ್ಡಿನಿಂದ ನಿರ್ಣಯ ಸಹ ಮಾಡಿ ಕಳಿಸಿದೆ. ದಯೆಯಿಟ್ಟು ಕೂಡಲೆ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕು. ಈಗ ಕೊಟ್ಟಿರುವ ರೂರಲ್ ಆಸ್ಪತ್ರೆಗಳಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಕೇಂದ್ರವನ್ನು ತೆರೆಯಬೇಕು, ವೆಟರ್ನರಿ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿ ಮುಂತಾದುವನ್ನು ಸಕಾಲದಲ್ಲಿ ಸರಬರಾಯಿ ಮಾಡಬೇಕು, ಅವು ದಕ್ಷತೆಯಿಂದ ಕೆಲಸಮಾಡಲು ಅವಕಾಶ ಮಾಡಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಸಿದ್ದಯ್ಯ ಕಾಶಿಮಠ.—ಅಧ್ಯಕ್ಷರೇ, ಪಶು ಸಂಗೋಪನ ಇಲಾಖೆಯು ದೊಡ್ಡದಾಗಿ ಬೆಳೆದು ಚೆನ್ನಾಗಿ ಕೆಲಸ ಮಾಡುತ್ತಿದೆ. ವ್ಯವಸಾಯದ ಇಲಾಖೆಯ ಹಾಗೇ ಈ ಇಲಾಖೆಯೂ ಕೂಡ ಬಹಳ ಮಹತ್ವವುಳ್ಳದ್ದು ಎಂಬುದನ್ನು ಮರೆಯಬಾರದು. ಆದರೆ ಇದಕ್ಕೆ ಒದಗಿಸಿರುವ ಹಣ ನೋಡಿದರೆ ಬಹಳ ಕಡಮೆ, ಇನ್ನೂ ಹೆಚ್ಚು ಹಣ ಕೊಟ್ಟು ನಮ್ಮ ದೇಶಕ್ಕೆ ಬೇಕಾಗುವ ದನಗಳನ್ನು, ಉತ್ತಮ ತಳಿಯನ್ನು ಪಡೆದುಕೊಳ್ಳುವುದಕ್ಕೆ ಮತ್ತು ಬೆಳೆಸುವುದಕ್ಕೆ ಅವಕಾಶ ಮಾಡುವುದು ಒಳ್ಳೆಯದು. ಇಂದು ದೇಶದಲ್ಲಿ ಇಂಜನಿಯರಿಂಗ್, ಮೆಡಿಕಲ್ ಮತ್ತು ವೆಟರ್ನರಿ ಕಾಲೇಜುಗಳಲ್ಲಿ ಸೀಟುಗಳು ದೊರೆಯದಿರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ನಮ್ಮ ರಾಜ್ಯದಲ್ಲಿ ಪಶು ಸಂಗೋಪನಾ ಇಲಾಖೆಗೆ ಅನುಕೂಲವಾಗುವಂತೆ ಒಂದು ವೆಟರ್ನರಿ ಕಾಲೇಜನ್ನು ಧಾರವಾಡದಲ್ಲಿ ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮ ದೇಶದಲ್ಲಿ ವ್ಯವಸಾಯ ಜನರ ಮುಖ್ಯ ಉದ್ಯೋಗವಾಗಿರುತ್ತದೆ, ಅದಕ್ಕೆ ಬೇಕಾಗಿರುವ ಪಶು ಸಂಪತ್ತನ್ನೊದಗಿಸಲು ಇನ್ನೊಂದು ವೆಟರ್ನರಿ ಕಾಲೇಜು ಅತ್ಯಾವಶ್ಯಕವಾಗಿದೆ.

[Mr. Chairman (SRI S. D. KOTHAWALE) in the Chair]

ಈಗಾಗಲೆ ನಮ್ಮ ಮಿತ್ರರು ಹೇಳಿದಹಾಗೆ ನಮ್ಮಲ್ಲಿರುವ ವೆಟರ್ನರಿ ಆಸ್ಪತ್ರೆ ಮತ್ತು ಸ್ಟಾಕ್‌ಮನ್ ಸೆಂಟರುಗಳು ಸಾಲದು. ಸ್ಟಾಕ್‌ಮನ್ ಸೆಂಟರುಗಳನ್ನು ಎಷ್ಟು ದನಗಳಿಗೆ ಒಂದರಂತೆ ತೆಗೆಯುತ್ತಿರುವರೆಂಬುದನ್ನು ಹೇಳಬೇಕು. ನನ್ನ ಅಂದಾಜಿನ ಪ್ರಕಾರ 5 ಸಾವಿರ ದನಗಳಿಗೆ ಒಂದು ಅಂಥ ಸೆಂಟರು ತೆರೆಯಬೇಕಾದ್ದು ಅವಶ್ಯಕ. ಈ ರೀತಿ ತೆರೆಯಬೇಕು. ಹಿಂದೆ ಬಂಕಾಪುರ ಮತ್ತು ಹೆಸರಘಟ್ಟದಿಂದ ಎಮ್ಮೆ ಕರುಗಳನ್ನು ಒದಗಿಸುವ ಪದ್ಧತಿ ಇತ್ತು, ಈಗ ಅದನ್ನು ಬಂದು ಮಾಡಿದ್ದಾರೆ, ಕಾರಣ ಗೊತ್ತಿಲ್ಲ. ಹಿಂದೆ ಶಿರಹಟ್ಟಿ ತಾಲ್ಲೂಕಿಗೆ ಕಲ್ಕತ್ತಾ ಕಡೆಯಿಂದ ಎಮ್ಮೆ ಕರುಗಳನ್ನು ತರಿಸುತ್ತಿದ್ದರು, ಅದು ಈಗ ದೊರೆಯದೆ ಒಳ್ಳೆಯ ತಳಿ ದೊರೆಯದಂತಾಗಿದೆ. ಅದಕ್ಕಾಗಿ ಬೇರೆ ಕಡೆಗಳಿಂದಲಾದರೂ ಒಳ್ಳೆಯ ತಳಿ, ಕರುಗಳನ್ನು ತರಿಸಿ ಅದನ್ನು ಬೆಳೆಸುವ ಪರಿಪಾಠ ರೈತರಿಗೆ ಹಾಕಿದರೆ ಒಳ್ಳೆಯದು. ಹಾಗೆ ಮಾಡಿ ಒಳ್ಳೆಯ ತಳಿಯನ್ನು ಬೆಳೆಸಿ ದೇಶಕ್ಕೆ ಬೇಕಾದಷ್ಟನ್ನು ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ದನಗಳಿಗೆ ಮಹಾಮಾರಿ ಎಂಬ ರಿಂಡರ್‌ಪೆಸ್ಟ್ ರೋಗ ಬಂದು ಬಹಳ ತೊಂದರೆಯಾಗುತ್ತಿತ್ತು, ಹೆಚ್ಚು ದನಗಳು ಸಾಯುತ್ತಿದ್ದವು, ಹೋದ ವರ್ಷ ಈ ಕಾಯಿಲೆಯಿಂದ ಸಾಕಾದಷ್ಟು ಉತ್ತಮ ತಳಿಯ ದನಗಳು ಬೆಂಗಳೂರು ನಗರದಲ್ಲಿ ಸತ್ತಿರುವುದು ಬೆಳಕಿಗೆ ಬಂದಿದೆ. ಈಗ ನಾನು ನೋಡುವ ಹಾಗೆ ಆ ರೋಗವನ್ನು ಹತೋಟಿಗೆ ತಂದಿದ್ದಾರೆ, ಅದು ಅಷ್ಟಾಗಿ ಕಂಡುಬರುತ್ತಿಲ್ಲ. ಇದಕ್ಕೆ ಮುಂದೆಯೂ ಕೂಡ ಬಾರದಂತೆ ಮುಂಜಾಗ್ರತೆ ವಹಿಸಬೇಕು. ಸಿಂಧಿ, ಹರಿಯಾನ, ಜರ್ಸಿ ಮುಂತಾದ ತಳಿಗಳ ರಾಸುಗಳ ಬೆಲೆ 2 ಸಾವಿರ ರೂಪಾಯಿಗಳವರೆಗೂ ಇರುವುದರಿಂದ ಅವುಗಳು ರೋಗಕ್ಕೆ ತುತ್ತಾದರೆ ಬಹಳ ಕಿಮ್ಮತ್ತನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಆದುದರಿಂದ ಹಿಂದೆ ನಾನು ಸಲಹೆ ಮಾಡಿದಂತೆ ದನಗಳನ್ನು ವಿಮೆ ಮಾಡುವ ಪದ್ಧತಿಯನ್ನು ಜಾರಿಗೆ ತಂದು ಮಾಲೀಕರಿಗೆ ನಷ್ಟವಾಗದಂತೆ ಮಾಡಬೇಕು. ಒಂದೇ ಒಂದು ಬೆಲೆ ಬಾಳುವ ಪಶುವನ್ನು ಹೊಂದಿದವರು ಅದು ಸತ್ತುಹೋದರೆ ನಿರ್ಗತಿಕರಾಗುವುದರಿಂದ ಅದನ್ನು ವಿಮೆ ಮಾಡಿದರೆ ಅದರಿಂದ ಅವರಿಗೆ ಕಷ್ಟ ತಪ್ಪಬಹುದು. ಆದುದರಿಂದ ವಿಮೆ ಪದ್ಧತಿಯನ್ನು ದನಗಳಿಗೆ ಸಂಬಂಧಪಟ್ಟಂತೆ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾಲನ್ನೊದಗಿಸಲು ಡೈರಿಗಳಿವೆ. ಬೆಂಗಳೂರು ಬೃಹದಾಕಾರವಾಗಿ ಬೆಳೆದಿದೆ, ಆದುದರಿಂದ ಅಲ್ಲಿನ ಜನತೆಗೆ ಹಾಲನ್ನೊದಗಿಸಲು ಡೈರಿಯನ್ನು ಸ್ಥಾಪಿಸಿದ್ದಾರೆ. ಈ ಎರಡು

(ಶ್ರೀ ಸಿದ್ದಯ್ಯ ಕಾಶೀಮಠ)

ವರ್ಷಗಳಿಂದ ನೋಡಿದರೆ ಅದರಲ್ಲಿ ಸುಮಾರು 15 ಲಕ್ಷ ರೂಪಾಯಿ ನಷ್ಟವಾಗಿರುವಂತಿದೆ. ಅದು ಏಕೆ ಆಯಿತು ಯಾವರೀತಿ ಆಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಅಲ್ಲದೆ ಕೆಲವು ಭಾಗಗಳಲ್ಲಿ ಸರಿಯಾದ ರೀತಿಯಲ್ಲಿ ಹಾಲು ಸಿಕ್ಕದೆ ಬಡಜನರಿಗೆ ತೊಂದರೆಯಾಗಿದೆ. ಅವರಿಗೆ ಜಾಗ್ರತೆ ಒಳ್ಳೆಯ ಹಾಲನ್ನು ಮುಟ್ಟಿಸಲು ಏರ್ಪಾಡು ಮಾಡಬೇಕು. ಅಲ್ಲದೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಡೈರಿ ಫಾರಮನ್ನು ತೆರೆಯಬೇಕು. 5-6 ವರ್ಷಗಳಿಂದ ಹುಬ್ಬಳ್ಳಿ, ಧಾರವಾಡಗಳಲ್ಲಿ ಹಾಲು ಸರಬರಾಯಿ ಮಾಡುವ ಕೇಂದ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕಾರಣ ಅದಕ್ಕೆ ಸಂಬಂಧ ಪಟ್ಟ ಕಟ್ಟಡ ಯಾವ ಸ್ಥಿತಿಯಲ್ಲಿ ಹಿಂದಿತ್ತೋ ಅದೇ ಸ್ಥಿತಿಯಲ್ಲಿದೆ, ಈ ಸಂಬಂಧದಲ್ಲಿ ನಿಧಾನವಾಗುತ್ತಿರುವುದನ್ನು ತಡೆಗಟ್ಟಬೇಕು. ಪಟ್ಟಣ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಈ ದಿವಸ ಹಣ ಖರ್ಚುಮಾಡಿದರೂ ಕೂಡ ಜನರಿಗೆ ಅದರ ಫಾಯಿದೆ ದೊರೆಯದೆ ತೊಂದರೆಯಾಗಿದೆ. ಈಗಲಾದರೂ ಹೆಚ್ಚಿನ ಸಹಾಯವಾಗುವಂತೆ ಅದರ ಕೆಲಸವನ್ನು ಮುಂದುವರೆಸಬೇಕು. ತಾಲ್ಲೂಕುಗಳಲ್ಲಿ ಹಾಲು ಉತ್ಪಾದನೆ ಸಂಬಂಧದಲ್ಲಿ ತೆರೆದಿರುವ ಸಂಘಗಳಲ್ಲಿ ತಪ್ಪಿದೆ. ಬೇಕಾಗುವ ಹಸುಗಳು, ಹಣ ಮುಂತಾದ್ದು ಸಕಾಲದಲ್ಲಿ ನೇರವಾಗಿ ದೊರೆಯುವಂತಿರಬೇಕು. ಈಗ ಹಾಲು ಉತ್ಪತ್ತಿಗೆ ಸಂಬಂಧಪಟ್ಟ ಸಹಕಾರ ಸಂಘಗಳನ್ನು ಸಹಕಾರ ಖಾತೆ ರಿಜಿಸ್ಟ್ರರು ಮಾಡುತ್ತದೆ, ಕೊಡುವ ಸಹಾಯ ಧನ ಸರಿಯಾಗಿ ಸಿಕ್ಕುವುದಿಲ್ಲ, ಹೀಗೆ ತೊಂದರೆಯುರುವುದನ್ನು ತಪ್ಪಿಸಲು ಪಶುಪಾಲನೆ ಇಲಾಖೆಗೇ ಹಣ ಕೊಟ್ಟು ಅದೇ ಒದಗಿಸುವಂತೆ ಮಾಡಿದರೆ ಆ ಇಲಾಖೆಯೇ ಮೇಲ್ವಿಚಾರಣೆ ನಡೆಸುವಂತೆ ಏರ್ಪಾಡು ಮಾಡಿದರೆ, ಪಶುಪಾಲನೆ ಇಲಾಖೆ ಬೇಕಾದ ಪಶುಗಳು ಒಳ್ಳೆಯ ತಳಿಗಳು ಮುಂತಾದ್ದನ್ನು ಬೇಗ ಒದಗಿಸಿದರೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ತರಬೇತಿಗಾಗಿ ನಮ್ಮ ದೇಶದಿಂದ ಸಾಕಷ್ಟು ಜನರನ್ನು ಹೊರದೇಶಗಳಾದ ನೆದರ್‌ಲ್ಯಾಂಡ್, ಹಾಲೆಂಡ್‌ಗೆ ಕಳಿಸಿ, ಅವರು ತರಬೇತಿ ಪಡೆದು ಬಂದಿದ್ದಾರೆ. ಆದರೆ ಅವರಿಗೆ ಇಂಥ ಹಾಲಿನ ಕೇಂದ್ರಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸುವುದಕ್ಕೆ ಅವಕಾಶ ಮಾಡದೆ, ಅವರನ್ನು ಬೇರೆ ಕಡೆ ಇಡತಕ್ಕ ಪದ್ಧತಿ ಇರುವುದರಿಂದ, ಅದನ್ನು ಆದಷ್ಟು ತೀವ್ರದಲ್ಲಿ ಗಣನೆಗೆ ತೆಗೆದುಕೊಂಡು ತಮ್ಮ ಇಲಾಖೆಯವರೊಡನೆ ವಿಚಾರ ವಿನಿಮಯ ಮಾಡಿ, ತರಬೇತು ಆಗಿದ್ದ ಜನರನ್ನು ಸದುಪಯೋಗ ಮಾಡಿ, ಈ ಹೈನ ಅಭಿವೃದ್ಧಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಹೆಚ್ಚಿನದಾದ ರೀತಿಯಲ್ಲಿ ಹೇಳುವುದಾದರೆ, ಹೈನ ಅಭಿವೃದ್ಧಿಯ ಸಲುವಾಗಿ ಇನ್ನೂ ಕೆಲವು ಮಂದಿಯನ್ನು ಆಯ್ಕೆ ಮಾಡಿ, ಹಾಲೆಂಡ್, ಡೆನ್‌ಮಾರ್ಕಿಗೆ ಕಳಿಸಿ, ಅವರ ಅನುಭವ, ತರಬೇತಿಯನ್ನು ಇಲ್ಲಿ ಉಪಯೋಗಿಸಿ, ಹೈನ ಕೇಂದ್ರವನ್ನು ಅಭಿವೃದ್ಧಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಔಷಧಿಗಳ ಬಗ್ಗೆ ಹೇಳುವುದಾದರೆ ಸಾಕಷ್ಟು ಔಷಧಿಗಳನ್ನು ಸ್ಟಾಕ್ ಮಾಡುತ್ತಿಲ್ಲ. ಆದ್ದರಿಂದ ಆದಷ್ಟು ಬೇಗ ಸಾಕಷ್ಟು ಔಷಧಿಗಳನ್ನು ಆಸ್ಪತ್ರೆಯಿಂದ ಇಂಡೆಂಟ್ ಮಾಡಿ ತರಿಸಿಕೊಂಡು, ಪಶುಗಳಿಗೆ ಸಕಾಲದಲ್ಲಿ ಸಿಗುವ ಏರ್ಪಾಡು ಮಾಡಬೇಕೆಂದು ಸಲಹೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. Y. GHORPADE (Sandur).—Mr. Speaker, Sir, the time allotted for this Demand by no means reflects the importance of the subject. In what little time that has been given to me, I propose to make a few remarks mainly on cattle and milk production.

As we all know, this is a very important subject and if there anything which is as impressive as our population, it is the cattle population of our country. One would have normally expected this colossol cattle population to bring tremendous wealth to our country but to our great dissatisfaction, if I may say so, disgrace, the situation is quite the contrary. It would not be an exaggeration to say that our live-stock has become the laughing stock of the whole world. Sir, it is high time that we analyse impartially and boldly. What is the basic reason for such a state of affair ? The answer is very simple.

Our cows in this country, as we all know, yield just one litre or two litres of milk as compared to 20, 30, 40 and even 50 litres a day in foreign countries. This one or two litres is just enough for the calf. Therefore, it is not economic or worth feeding an animal which just gives one litre. The result is, that more than 95 per cent, may be 99 per cent of these animals are uneconomical. In fact, they are allowed to roam at large. Nobody bothers to feed them. They go into other people's fields; they will be moving uncared for. Sir, we are sensitive to cow slaughter but we are not sensitive about a large number of animals which are allowed to roam uncared for. We all know in ancient India there were relatively fewer animals just as there were relatively fewer human beings. Apparently, people then had some concept of selective breeding. For instance, male buffaloes were traditionally sacrificed in the name of God. Well, that was one way of, without realising the scientific reason for it, keeping the number of male buffaloes within certain limits. I am not pleading for it but I am saying that we are not giving thought to the scientific implications of allowing any number of male buffaloes or male animals in the country. As we all know, in the Vedic times, they were not sensitive to cow slaughter. There is sufficient evidence to show that in those days cows were sacrificed. They were apparently quite conscious of quality of milk. For instance, if one reads classical literature the Light of Asia, there is a beautiful episode about Buddha. Budha awoke from meditation; when he woke up from meditation, he was very thirsty and wanted something to drink. The person who saw him brought some best milk and it was from a cow which had been reared on the milk of a certain number of cows which in there limit had been reared on the milk of a larger number of cows. All this shows that in ancient India they had a concept of selective breeding and milk quality. Cattle maintenance was looked at in a spirit of science and spirituality. I have no hesitation in saying that today, like many other things, cattle management has been removed from the sphere of science and spirituality and dragged into the quagmire of religion and politics. Unless we decide, irrespective of politics, that this matter should be restored to the sphere of science and spirituality, as it was in ancient India, there is absolutely no chance of our making any headway in cattle breeding and management.

Sir, I would like to know whether anybody in this House denies the uncared for nature of our cattle. For instance, I can confidently declare, that if you raise the fee that one has to pay in order to get the cattle released from the cattle pound, not many will take the trouble of getting the animal released. I am sure, nobody will claim most of these cattle. That will give a clear indication as to how we are looking after these cattle.

Therefore, the substance of all that I have said so far is that selective breeding, and personal care is the crux of the whole matter. We also know that before we talk of good cattle, we must make satisfactory

(SRI M. Y. GHORPADE)

arrangements for fodder production. I am not one of those who subscribe to the view that only in areas where there is natural fodder, high milk yielding animals could be reared; because fodder is not available anywhere throughout the year. It is available for three or six months in a year in the country. Wherever it is available, it is possible to stock it and use it and make silage pits to preserve it. There is no effective programme for silage pits and I do not know why there should not be community sulage pits in every village in places where plenty of fodder is available in rainy season for use in summer months. I would very much like the hon. Minister to tell us what he intends to do to make the silage pit programme effective. We in Mysore should be proud about what has been done in respect of cross-breeding of animals. I think it was the Mysore Palace Dairy which at one stage imported some Holstein bulls and today cross breeding has been taken up by many people and by the Government also. Many do not know that Bangalore is perhaps the most important centre of crossbred cows in the whole country. People all the way from Punjab take away our cross bred cows. I understand that people from Madras came here and they selected crossbred animals and took them away. We should be proud of our cross bred cows; but I feel much more can be done to propagate cross bred animals. Cross-bred animals is a revolutionary idea. It is for some unknown reasons not accepted as a national policy so far. In this connection I would like to tell you what happened to the experiment of cross bred cows in Sandur. It was stated that highyielding cows will not thrive in these hilly tracks. I brought some cross bred animals from Bangalore and took them to Sweeden in the worst of summer and their yield is 10 to 20 litres per day and therefore I can say that they can extremely thrive very well in this dry areas perhaps better than in Bangalore. Therefore if this cross-bred animals have to be popularised, I have a few suggestions. Castration programme is not very successful I think if we have to make an impact we have to make more stringent law. By legal compulsion they must be castrated. No human being has a right to perpetuate useless animals. So, law should be made; not only that. Monetary incentives should be given for extension workers for the number of animals castrated. Monetary incentive to people who help in castrating *plus* legal compulsion, will have to be done. Otherwise this programme will not succeed. It is also necessary to see there is at least one good breeding bull in each village. Obviously this cannot be a thorough bred animal because there are not so many available at present. But, there is no reason why cross bred animal from the foregin bull and local cows cannot be supplied, and somebody must maintain it in villages. The local cattle have deteriorated so much that this will certainly upgrade the size and quality. This means, the Government programme to produce cross bred animals for this purpose must be increased several times. What is happening today is on a very small scale. I was very much interested to hear about some research done on

carrying semen in coconut milk. It is stated that in coconut milk at room temperature, semen can be sent and kept without loss of motality for ten days. If so, it is a step in the right direction. Could the Minister tell us how quickly it can be put in to full practical use. If you want to have a real break-through in artificial insemination, then, we must do what is done in foreign countries. There they have frozen semen in liquid nitrogen containers. These are refrigerators which maintain temperature at a very low level. This frozen semen can be kept indefinitely. Foreign countries are using it. High milk yielding frozen semen is being used today to inseminate cows and bring up the herd. Therefore, there is no reason why we should not do it. Liquid nitrogen is available in Madras. It only means that liquid nitrogen containers should be manufactured in the country. Today they are not manufactured and it is not available. Therefore Mysore should take a lead and set up a factory to manufacture liquid nitrogen containers, may be in the public sector. This thing will have to be done.

Sometimes I wonder whether all the research that is taking place is relevant to the conditions in the country. For instance, freezing semen is possible only with cows and it is not possible with buffaloes though India and Egypt are well known for buffaloes. Still our research workers have not solved the simple problem of how to freeze buffalo semen. It only indicates that those doing research are not always in touch with the problem on the field. I suggest that the Mysore Government takes the lead in impressing on the research institutes to find out how to freeze buffaloe semen and it should be solved within a year. Then, there will be really a break-through in propagation of high yielding buffaloes. I should like to know what is done to produce buffaloes which are not very big in size and whose dry period is not long and which yield about 3,000 litres per lactation. If such buffalo is bred, it will mean another revolution. These things will have to be done and it can only be done with a scientific approach. I am surprised that no work is done in progeny testing. If you want to know the real value of a bull, you must know what is its progeny is capable of. In foreign countries they look to the progeny testing of animals and keep meticulous record of milk yields of different animals bred. It is very unfortunate that no work is done here in progeny testing or keeping record of what is happening to the progeny of so called good bulls. Some steps should be taken in this direction.

Artificial insemination—I saw for myself in Anand, that ordinary boys in the villages are trained to do artificial insemination. They take semen in the thermos with ice on cycles to various village centres. They do not wait for some veterinary man to do it because it is a simple thing. After all any interested person can be trained to do this within a week. This again is progressive though non-traditional idea. I would request the Minister to do something of this nature to make the process dynamic and effective.

In each taluka I feel that there should be some such nucleus of cattle breeding and there should be a dynamic approach to extensio work.

(SRI M. Y. GHORPADE)

As far as fodder is concerned, the pusa hybrid is a very important grass. I know that a person can maintain 5 to 8 animals on one acre under pusa hybrid grass. The cost of maintaining an animal is Rs. 5 per day. The average production per day is 10 litres which is not much. My own cows are yielding 10 to 20 litres. You can make a profit of at least Rs. 5 per day per animal and about Rs. 150 to 200 per month. Therefore, we can make a profit of Rs. 1,000 to 2,000 per animal per annum. If we maintain 5 such animals it means a profit of Rs. 5,000 to 10,000 per annum. This must not only be impressed by the Government but demonstrated to the cultivator at least at the taluka level. Every attempt must be made to supply this special variety of grass to those who have got wells.

The seasonal lucern is a crucial fodder for animals. We should introduce it because it gives higher yields.

I should like to know what is being done to collect milk and what is Government's policy regarding giving fodder, medical attention and other impetus as a loan and collecting in milk which is the basic idea of developing milk industry. I would go to the extent of saying that for insemination Government should not hesitate to charge something. If you do it free, people do not realise the value of it and after all it does cost Government something. If you charge something you will be able to do artificial insemination on a much bigger scale. We could consider giving a small commission to persons who do a certain number of this and thus encouragement should be given to them. Let there be a dynamic push to the movement. To discuss all such matters and make research and Government thinking relevant and connected to the problems on the field, some sort of a consultative body should be set up at the State level with which the Minister should be intimately concerned. With such a consultative body, research experts, Government officials and some of the armers in the State who are actually doing work on cattle breeding and milk production should be associated so that Government's action can take into account the problems on the field.

People talk about Hallikar. My own experience is that the Khillar is a stronger and heavier breed. Even in Mysore they will welcome the Khillar if it is introduced in sufficient number.

Basis vaccines for basic diseases like Anthrax, Black Quarter H. S. rinderpest foot and mouth are not available. I can say that in spite of every effort I have made I myself do not find it possible to get them easily. We are told that it is available somewhere in U. P. It is a long distance from Mysore. The least that Government can do is to assure the people that this vaccines will be available at least at the district level or State level whenever they want them.

Now I want to make a point, regarding Government Farms. How many Government farms are working on a self-sufficient basis. I think it is necessary to demonstrate that Government farms are not charitable

institutions but are capable of being worked on an economic basis. Unless the cultivator is impressed that a particular idea is not only good but also economic and paying, he will not adopt it. Therefore, immediately a realistic survey must be made of all Government farms and we must see to what extent they are paying or not paying. I think that effective steps should be taken to see that they are paying. There is nothing worse psychologically than a farm which is run indifferently. So, we have to pay sufficient attention and see that Government farms do not run at a loss. Time has come to review the working of Government farms. If you tell the officer concerned that he can remain only if he makes it remunerative, he will do something about it.

I have taken more time than was allotted to me. I am grateful to the Speaker for the indulgence shown to me and to the Members for their patient hearing and I do hope that the Hon'ble Minister will in his reply indicate some policy on these matters.

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಧ್ಯಕ್ಷರೇ, ನಾನು ಈಗ ಡಿಮ್ಯಾಂಡ್ 22ರ ಬಗ್ಗೆ ಕೇಳಿರುವ 3,44,49,000 ರೂಪಾಯಿಗಳಿಗೆ ವಿರೋಧಿಸಲು ನಿಂತಿದ್ದೇನೆ. ಏತಕ್ಕೆಂದರೆ, ಈ ಡಿಮ್ಯಾಂಡ್ ಬಗ್ಗೆ ಇಟ್ಟಿರುವ ಹಣ ಕಮ್ಮಿಯಾಗಿದೆ ಎಂದು. ಈ ಪಶು ಸಂಗೋಪನಾ ಇಲಾಖೆಯನ್ನು ವ್ಯವಸಾಯದ ಇಲಾಖೆ ಮತ್ತು ಆಹಾರದ ಇಲಾಖೆಗಳೊಡನೆ ಸೇರಿಸಿ ಗ್ರಾಂಟನ್ನು ಇನ್ನೂ ಹೆಚ್ಚಿಸಬೇಕಾಗಿತ್ತು. ನಮ್ಮ ದೇಶ ಗೋಪಾಲಕೃಷ್ಣನ ನಾಡು, ಬಸವಣ್ಣನ ನಾಡು ಎಂದು ಹೇಳುತ್ತಿದ್ದರು. ಈ ಪಶು ಸಂಗೋಪನ ಇಲಾಖೆಯ ಮಂತ್ರಿಗಳು ಗೋವಿನ ಆರಾಧಕರಾಗಿದ್ದಾರೆ: ಇವತ್ತಿನ ದಿವಸ ಗೋವುಗಳ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ಒಂದು ಸಮಸ್ಯೆಯನ್ನು ಮೂರು ದೃಷ್ಟಿಯಿಂದ ನೋಡಬೇಕಾಗಿದೆ. ಹಸು ಎಮ್ಮೆ ಮತ್ತು ತಳಿಗಳನ್ನು ಬೆಳೆಸುವುದು, ಅದೇ ರೀತಿ ಹೋರಿಗಳನ್ನು ಬೆಳೆಸುವುದು. ಹಳ್ಳಿಕಾರ್ ಮತ್ತು ಅಮೃತಮಹಲ್ ತಳಿಗಳು ಇರುತ್ತವೆ. ಟಿಪ್ಪುಸುಲ್ತಾನ್ ಕಾಲದಿಂದಲೂ ಇವನ್ನು ಉತ್ತಮವಾಗಿ ಇಟ್ಟುಕೊಂಡು ಬಂದಿದ್ದರು. ಇಂತಹ ತಳಿಗಳನ್ನು ಇವತ್ತಿನ ದಿವಸ ಕೆಡಿಸಿಬಿಟ್ಟಿದ್ದಾರೆ. ಅನೇಕ ಕಡೆ ಅಮೃತಮಹಲ್ ಹುಲ್ಲುಗಾವಲನ್ನು ತೆಗೆದು ವ್ಯವಸಾಯಕ್ಕೆ ಕೊಡುತ್ತಿದ್ದಾರೆ. ಇದರಿಂದ ದನಗಳಿಗೆ ಸಾಕಷ್ಟು ಮೇವನ್ನು ಬೆಳೆಸುವುದಕ್ಕೆ ಸ್ಥಳವಿಲ್ಲ.

ಇದೇ ರೀತಿ ಮಲೆನಾಡು ಪ್ರದೇಶದಲ್ಲಿ ನೋಡುವುದಾದರೆ ಪ್ರತಿವರ್ಷ 67 ರಿಂದ 69 ಪರ್ಸೆಂಟ್ ದನಗಳು ಸಾಯುತ್ತಾ ಇವೆ, ಅಲ್ಲಿಯ ತಳಿಗಳನ್ನು ಇವತ್ತು ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅದರ ಜೊತೆಗೆ ಹಿಂದೆ ಕೇಂದ್ರದ ಮಂತ್ರಿಗಳಾಗಿದ್ದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಕೊಟ್ಟ ಉತ್ತೇಜನದಿಂದ ಸಾಕಷ್ಟು ದನಗಳನ್ನು ಮೈಸೂರು ದೇಶಕ್ಕೆ ತಂದು ಆ ದನಗಳಿಂದ ಈಗ ಉತ್ಪನ್ನವಾದ ತಳಿಗಳು ಬೀದಿ ಬೀದಿಗಳಲ್ಲಿ ಪೋಲಿ ದನಗಳಾಗಿ ಅಲೆಯುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಮುಖ್ಯವಾಗಿ ದನಗಳಿಗೆ ಅವುಗಳನ್ನು ಬೆಳೆಸುವುದಕ್ಕೆ ಬೇಕಾದಂತಹ ಆಹಾರದ ಬಗ್ಗೆ ಹೆಚ್ಚಾದಂತಹ ಗಮನವನ್ನು ಕೊಡಬೇಕಾಗಿದೆ. ಫಾಡರ್ ಎಂದರೆ ದನಗಳ ಮೇವು ಮನುಷ್ಯರಿಗೆ ಬೇಕಾದ ಆಹಾರ ಧಾನ್ಯಕ್ಕಿಂತಲೂ ಅತಿ ಕ್ಲಿಷ್ಟಕರವಾದ ಸಮಸ್ಯೆಯನ್ನು ಇದರ ಬಗ್ಗೆ ಕವಾಡಿಗರು ಎದುರಿಸುತ್ತಾ ಇದ್ದಾರೆ ಎಂದರೆ ತಪ್ಪಾಗುವುದಿಲ್ಲ. ವ್ಯವಸ್ಥಿತವಾದ ರೀತಿಯಲ್ಲಿ ದನಗಳ ಆಹಾರವನ್ನು ಶೇಖರಿಸುವುದು ಮತ್ತು ಹಂಚುವುದು ಈ ಕೆಲಸದಲ್ಲಿ ಇಲ್ಲಿಯವರೆಗೂ ನಾವು ಅಸಮರ್ಥರಾಗಿದ್ದೇವೆ ಎಂದರೆ ತಪ್ಪಾಗಲಾರದು.

[MR. DEPUTY SPEAKER in the Chair]

ಈ ದನಗಳ ಆಸ್ಪತ್ರೆಯ ಬಗ್ಗೆ ಹೇಳುವುದಾದರೆ, ಅವುಗಳ ಬಗ್ಗೆ ಸರ್ಕಾರ ಸಾಕಷ್ಟು ಗಮನವನ್ನು ತೆಗೆದುಕೊಳ್ಳುತ್ತಿಲ್ಲ ಎಂದರೆ ಹೆಚ್ಚೇನೂ ಅಲ್ಲ. ಅನೇಕ ದನಗಳು ಆಸ್ಪತ್ರೆಗೆ ಬಂದ ಸಂಧರ್ಭದಲ್ಲಿ ಆ ರೈತರ ಜಾನುವಾರಗಳಿಗೆ ಸಾಕಾದಷ್ಟು ಗಮನವನ್ನು ಆಸ್ಪತ್ರೆಯ ಸಿಬ್ಬಂದಿ ವರ್ಗ ಕೊಡುತ್ತಿಲ್ಲ, ಸಾಕಾದಷ್ಟು ಔಷಧಿ ಕೂಡ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಕೃತಕ ಗರ್ಭಧಾರಣೆಯ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಬಗ್ಗೆ ಶ್ರೀಮಾನ್ ಫೋರ್‌ಪಡೆಯವರು ಹೇಳಿದ್ದಾರೆ, ಮೈಸೂರು ದೇಶವನ್ನು ನೋಡುವುದಾದರೆ ಭೌಗೋಳಿಕವಾಗಿ ಒಂದು ವೈಶಿಷ್ಟ್ಯ ಇದೆ, ಇಲ್ಲಿ ಮಳೆ ಹೆಚ್ಚಾಗಿ ಬರತಕ್ಕ ಪ್ರದೇಶವೂ ಇದೆ, ಕಮ್ಮಿ ಮಳೆ ಬೀಳತಕ್ಕ ಪ್ರದೇಶವೂ ಕೂಡ ಇದೆ. ಅಯಾಯಾ ಭೌಗೋಳಿಕ ಸನ್ನಿವೇಶಕ್ಕೆ ತಕ್ಕಂತೆ ಹುಲ್ಲನ್ನು ಬೆಳೆಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಮತ್ತು ಆ ಸ್ಥಳದವರಿಗೆ ಅದು ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಜರ್ಸಿಟೈಪ್, ಮತ್ತು ಸಿಂಧಿ ತಳಿಗಳನ್ನು ಬೆಳೆಸಿ ಬಹಳ ನಷ್ಟವನ್ನು ಹೊಂದಿದ್ದಾರೆ. ಅದರಲ್ಲೂ ಮಲೆನಾಡು ಪ್ರದೇಶದಲ್ಲಿ 50 ಇಂಚಿನಿಂದ 250 ಇಂಚು ಮಳೆಯಾಗತಕ್ಕ ಪ್ರದೇಶದಲ್ಲಿ ಮಳೆಗಾಲದಲ್ಲಿ ಯಥೇಚ್ಛವಾಗಿ ಹುಲ್ಲು ಬೆಳೆದು ಮಳೆಗಾಲ ಆದಮೇಲೆ ಬೆಂಕಿ ಹತ್ತಿಕೊಂಡು ನಾಶವಾಗುತ್ತಾ ಇದೆ, ಸುಟ್ಟು ಹೋಗುತ್ತಾ ಇದೆ. ಆ ರೀತಿ ಆಗದಂತೆ ಅದನ್ನು ಶೇಖರಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುವುದಾದರೆ ನಿಜವಾಗಿಯೂ ಉತ್ತಮವಾದ ವ್ಯವಸ್ಥೆಯನ್ನು ಮಾಡಿದ ಹಾಗಾಗುತ್ತದೆ ಎಂದು ನನಗೆ ಅನ್ನಿಸುತ್ತದೆ.

ಇದೇ ರೀತಿ ಕಾಲೇಜು, ಅನಿಮಲ್ ಹಸ್ಬೆಂಡರಿ ಕಾಲೇಜಿನಲ್ಲಿ ಮಾಡತಕ್ಕ ಸಂಶೋಧನೆ ನೇರವಾಗಿ ದನಗಳಿಗೆ ಮುಟ್ಟುತ್ತಾ ಇಲ್ಲ. ಅದು ಬರೀ ಅಕೆಡಮಿಕ್ ಇಂಟರೆಸ್ಟಿನಿಂದ ನಡೆಯುತ್ತಿದೆಯೇ ವಿನಾ ಹೆಚ್ಚೇನೂ ಪ್ರಯೋಜನವಾಗುತ್ತಿಲ್ಲ, ಇದರ ಕಡೆಗೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ದನಗಳ ಪ್ರದರ್ಶನ. ಸಂಸ್ಥಾನದಲ್ಲಿ ಪಶು ಸಂಗೋಪನಾ ಇಲಾಖೆಯವರು ಪ್ರದರ್ಶನಗಳನ್ನು ಏರ್ಪಾಡು ಮಾಡುತ್ತಾರೆ, ಬಹುಮಾನಗಳನ್ನು ಕೊಡುತ್ತಾರೆ; ನಾವು ಹಾಸನದ ದನಗಳ ಜಾತ್ರೆಯನ್ನು ನೋಡಿದ್ದೇವೆ, ಬರೀ ಸರ್ಟಿಫಿಕೇಟುಗಳು, ಬಹುಮಾನಗಳನ್ನು ಕೊಡುವುದರಿಂದ ಯಾವ ರೀತಿಯಿಂದಲೂ ಪ್ರೋತ್ಸಾಹ ಸಿಕ್ಕಿದಂತಾಗುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನೇರವಾಗಿ ಯಾವ ಯಾವ ಸ್ಥಳದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಸಿದರೆ ದನಗಳಿಗೆ ಹುಲ್ಲನ್ನು ಪಡೆಯಬಹುದು ಎಂಬ ಬಗ್ಗೆ ತೀವ್ರ ಪ್ರಯತ್ನ ಮಾಡಿ, ಬೆಳೆದು ತೋರಿಸಬೇಕು. ಸಂಶೋಧನಾಲಯಗಳನ್ನು ನಗರದಲ್ಲಿವುದಕ್ಕಿಂತಲೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರುವುದರಿಂದ ಜನತೆಯ ಸಂಪರ್ಕ ಅಧಿಕಾರಿಗಳಿಗೆ, ಅಧಿಕಾರಿಗಳ ಸಂಪರ್ಕ ಜನತೆಗೆ ಬರುವುದಕ್ಕೆ ಅವಕಾಶವಾಗುತ್ತದೆ. ಎಷ್ಟೋ ಜನ ರೈತರು ಬಂದು ಮೇಲಿನ ಮಟ್ಟದ ಅಧಿಕಾರಿಗಳನ್ನು ನೋಡುವುದಕ್ಕೇ ಹೆದರಿಕೊಳ್ಳುತ್ತಾರೆ.

ಇದರ ಜೊತೆಗೆ ಪೌರ ಸಭೆಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್ ಇರತಕ್ಕ ಸ್ಥಳಗಳಲ್ಲಿ ಅಥವಾ ಅಲ್ಲಿಂದ ಬರತಕ್ಕ ಗಲೀಜು ನೀರನ್ನು ಸೂಯೇಜ್ ಫಾರಂನಲ್ಲಿ ಬಳಸುವುದಕ್ಕೆ ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಾರೆ. ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಬಿಟ್ಟು ಬೇರೆ ನಗರಗಳಲ್ಲಿ ಅದಕ್ಕೆ ಮೀಸಲಾಗಿ ಜಾಗ ಇಟ್ಟು ಇಲಾಖೆಯವರು ಹುಲ್ಲನ್ನು ಬೆಳೆಸುವಂತಹ ವ್ಯವಸ್ಥೆಯನ್ನು ಮಾಡುವುದರಿಂದ ದನಗಳಿಗೆ ಹುಲ್ಲಿನ ಅಭಾವ ಹೋಗಿ ಬೇಕಾದಷ್ಟು ಹುಲ್ಲು ದೊರೆಯುತ್ತದೆ.

ಇನ್ನು ಡೈರಿ. 11 ಡೈರಿಗಳಿಗೆ 1 ಕೋಟಿ 46 ಲಕ್ಷದ 36 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಹೇಳಿ ಈ ಡಿಮ್ಯಾಂಡನ್ನು ನಮ್ಮ ಮುಂದೆ ಇಟ್ಟಿದ್ದೀರಿ. ಇದು ಅಷ್ಟು ಸಮಾಧಾನಕರವಾಗಿ ಪ್ರಗತಿಯಾಗುತ್ತಿಲ್ಲ ಎಂದು ಹೇಳಬಹುದು. ಬೆಂಗಳೂರಿನ ಡೈರಿಗೆ ಸುಮಾರು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೇವಲ 10 ಸಾವಿರ ಲೀಟರ್ ಪಡೆಯುತ್ತಾ ಇದ್ದೇವೆ. ದಿನವಹಿ ಎಂದರೆ ಇದು ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಾ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಅದಕ್ಕೆ ಏನು ಕಾರಣ, ತೊಂದರೆಯೇನಿದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಮತ್ತೆ ಈಗ 95 ಲಕ್ಷದ 43 ಸಾವಿರದ 400 ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ—ಬೆಂಗಳೂರು ಡೈರಿಗೆ.—ಅದರಲ್ಲಿ 10 ಸಾವಿರ ಲೀಟರ್ ಪ್ರತಿನಿತ್ಯ ಉತ್ಪಾದನೆ ಮಾಡುತ್ತಾ ಇದ್ದೀರಿ.

Sri D. DEVARAJ URS.—I would like to correct the hon'ble member. This sum of Rs. 99 lakhs or nearly a crore that has been asked for to be used in the Bangalore Dairy is to purchase milk and same amount will be given back. It is not for anything else. Most of it is only for purchasing milk, for trading purposes.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇದೂ ಕೂಡ ಇಲ್ಲಿಯ ಅಧಿಕಾರಿಗಳು ಹೇಳುತ್ತಾರೆ, ಇಲ್ಲಿಗೆ ಹಾಲನ್ನು ಧಾರವಾಡದಿಂದ ತರಿಸುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎಂದು. ಅಲ್ಲಿಂದ

ತಂದು ಬೆಂಗಳೂರಿನ ಹಾಲಿನ ಪೂರೈಕೆಯನ್ನು ಮಾಡಬೇಕಾಗಿದೆ. ಬೆಂಗಳೂರಿನಲ್ಲಿ ಇಂತಹ ಉತ್ತಮವಾದಂತಹ ವಾತಾವರಣ ಇರುವಂತಹ ಜಾಗದಲ್ಲೇ ಅದರಲ್ಲೂ ಒಳ್ಳೆಯ ಸಂಶೋಧನಾಲಯವನ್ನು ಇಟ್ಟುಕೊಂಡೂ ಕೂಡ ಧಾರವಾಡದಿಂದ ಹಾಲನ್ನು ತರಿಸಬೇಕೇ? ಈ ಒಂದು ಪದ್ಧತಿಯನ್ನು ವಿಕೇಂದ್ರೀಕರಿಸಿ ಹಾಲನ್ನು ಪಡೆಯುವಂತಹ ಬೇರೆ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಬೆಂಗಳೂರೂ ಸೇರಿ 11 ಡೈರಿಗಳಿಗೆ 1 ಕೋಟಿ 46 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಇದಕ್ಕೆ ಹಾಲು ತರುವುದು, ಎಸ್ಟ್ಯಾಬ್ಲಿಷ್‌ಮೆಂಟ್ ವಗೈರೆಗಳಿಗೆ ಖರ್ಚು ಮಾಡುತ್ತಾ ಇದ್ದೀರಿ. ಇದೇ ರೀತಿ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕೂಡ ಒಂದೊಂದು ಡೈರಿಯನ್ನು ತೆರೆಯಬೇಕು. ಬೆಂಗಳೂರು ನಗರದಲ್ಲಿರುವವರಿಗೆ ಮಾತ್ರ ಹಾಲನ್ನು ಪೂರೈಸಿದರೆ ಆಗಲಿಲ್ಲ. ಬೆಂಗಳೂರಿನಲ್ಲಿ ವಿದ್ಯಾವಂತರು ಇದ್ದಾರೆ ಅವರು ಗಲಾಟೆ ಮಾಡುತ್ತಾರೆ ಎಂದು ಅವರ ಬಾಯನ್ನು ಕಟ್ಟುವುದಕ್ಕೆ ಒಂದು ಯೋಜನೆ ಮಾಡಿದ ಹಾಗಾಗುತ್ತದೆ, ಎಂದು ಜನ ಆಡಿಕೊಳ್ಳುತ್ತಾ ಇದ್ದಾರೆ. ಅದರ ಬದಲಾಗಿ ಜಿಲ್ಲಾ ಮಟ್ಟದಲ್ಲಿ ಎಲ್ಲಿ ಡೈರಿ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ವ್ಯವಸ್ಥಿತವಾದ ಒಂದು ಯೋಜನೆಯನ್ನು ಇಟ್ಟುಕೊಂಡು ಆ ಒಂದು ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ ಮತ್ತು ಮಾನ್ಯ ಮಂತ್ರಿಗಳು ಅದಕ್ಕೆ ಈ ಡಿಮ್ಯಾಂಡಿನಲ್ಲಿ ಹೆಚ್ಚು ಹಣ ಕೇಳಬೇಕಾಗಿತ್ತು ಎಂದು ಇದನ್ನು ವಿರೋಧಿಸುತ್ತಾ ಇದ್ದೇನೆ.

ಈ ಡ್ಯಾನಿಷ್ ಡೈರಿ ಪ್ರಾಜೆಕ್ಟ್ ಇವೆ—ಹೆಬ್ಬಾಳದಲ್ಲಿ ಮತ್ತು ಶಿವಾರಗುಡ್ಡದ ವಿದ್ಯಾಪೀಠದಲ್ಲಿ—ಅವುಗಳ ಪ್ರಯೋಗ ಸಾಧಾರಣ ಜನರ ಮಟ್ಟಕ್ಕೆ ತಲುಪುತ್ತಿಲ್ಲ. ಗೋಮಾಳದ ಪ್ರಶ್ನೆಯ ಬಗ್ಗೆ ತಾವು ತೀವ್ರವಾಗಿ ಯೋಚನೆ ಮಾಡಬೇಕು. ಹಾಸನ ತಾಲ್ಲೂಕಿನಲ್ಲಿ ಗೋಮಾಳವನ್ನು ವಿನಿಯೋಗಿಸುವುದಕ್ಕೆ ಯೋಚನೆ ಮಾಡಿದ್ದೀರಿ ಎಂದು ನಮಗೆ ತಿಳಿದುಬಂದಿದೆ. ದನಗಳ ಮೇವಿಗಾಗಿ ಇರುವಂತಹ, ಉತ್ತಮವಾದ ಹುಲ್ಲನ್ನು ಬೆಳೆಯುವಂತಹ ಗೋಮಾಳಗಳನ್ನು ಉಳಿಸಿಕೊಳ್ಳಬೇಕು ಮತ್ತು ಅಲ್ಲಿ ಹುಲ್ಲನ್ನು ಬೆಳೆಯುವ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನಪಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಂತೆಯೇ ಸೂಯೇಜ್ ಫಾರಂಗಳನ್ನು ಮಾಡಲು ಸರ್ಕಾರದವರು ಈಗಿನಿಂದಲೇ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಇಲ್ಲವಾದರೆ ಈ ಸೂಯೇಜ್ ವಾಟರ್ ಯಾವುದಾದರೂ ಒಂದು ಕೆರೆಗೋ ಅಥವಾ ಹಳ್ಳಕ್ಕೋ ಹೋಗಿ ಬೀಳುತ್ತದೆ; ಹಾಗೆ ಅದನ್ನು ಹಾಳಾಗುವುದಕ್ಕೆ ಅವಕಾಶ ಕೊಡದಂತೆ ಆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮ ರಾಜ್ಯದಲ್ಲಿ ಆಯಾಯ ಭಾಗಕ್ಕೆ ತಕ್ಕ ಹಾಗೆ, ಇಲ್ಲವೇ ಹೊಂದಾವಣಿಕೆಯಾಗತಕ್ಕ ದನಗಳ ತಳಿಯನ್ನೇ ತಾವು ಅಭಿವೃದ್ಧಿಗೆ ತರುವುದು ಒಳ್ಳೆಯದು. ಅದನ್ನು ಕೈಬಿಟ್ಟು ಸರ್ಕಾರದವರು ಎಲ್ಲಾ ಕಡೆಗಳಿಗೂ ಈ ಸಿಂಧೀ ಅಥವಾ ಜರ್ಸಿ ದನಗಳನ್ನು ಒದಗಿಸುತ್ತೇವೆಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವುಗಳಮೇಲೆ ಸರ್ಕಾರದವರು ಹಾಕತಕ್ಕ ಹಣವನ್ನು ಕಳೆದುಕೊಳ್ಳಬೇಕಾಗಿ ಬರುತ್ತದೆ. ಆ ರಾಸುಗಳು ಎಲ್ಲಾ ಹವಾಮಾನವಿರುವ ಕಡೆ ಒಂದೇ ಸಮನಾಗಿ ಬದುಕುವುದಿಲ್ಲ. ಅವುಗಳಿಗೆ ಒಂದು ನಿರ್ದಿಷ್ಟವಾದ ಹವಾಮಾನ ಇರಬೇಕು. ಇಲ್ಲವಿದ್ದರೆ ಅವು ಬದುಕುವುದಿಲ್ಲ.

Sri S. D. KOTHAVALE.—Sindhi Cows prosper everywhere.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಾವು ನನ್ನ ಜೊತೆಯಲ್ಲಿ ಮಲೆನಾಡಿಗೆ ಬನ್ನಿ. ನಾನು ತೋರಿಸುತ್ತೇನೆ—ಅಲ್ಲಿರತಕ್ಕ ಈ ಆಕಳುಗಳು ಅರ್ಧ ಮತ್ತು ಕಾಲು ಸೇರು ಹಾಲನ್ನೂ ಸಹಾ ಕರೆಯುತ್ತಿಲ್ಲ. ಆದುದರಿಂದ ಸರ್ಕಾರದವರು ಆಹಾರ ಮತ್ತು ವ್ಯವಸಾಯದ ಇಲಾಖೆಗಳ ವಿಚಾರದಲ್ಲಿ ಎಷ್ಟು ಮುತವರ್ಜಿಯನ್ನು ವಹಿಸುತ್ತಾರೋ ಅದಕ್ಕೂ ಹೆಚ್ಚಿನ ಮುತವರ್ಜಿಯನ್ನು ಈ ವಿಚಾರದಲ್ಲಿ ವಹಿಸಬೇಕೆಂದು ಒತ್ತಾಯಮಾಡುತ್ತೇನೆ. ನಮ್ಮಲ್ಲಿ ಬೆಳೆಯತಕ್ಕ ಅಮೃತ ಮಹಲ್ ಮತ್ತು ಹಳ್ಳಿಕಾರ್ ಜಾತಿಯ ಹೋರಿಗಳು ಜಗತ್ಪ್ರಸಿದ್ಧಿಯಾದವುಗಳು. ಸರ್ಕಾರದವರು ಸಾಕಷ್ಟು ನಿಗಾ ಕೊಡದೆ ಅವುಗಳ ಅಭಿವೃದ್ಧಿಯ ಬಗ್ಗೆ ತಾತ್ಸಾರಮಾಡಿದ್ದಾರೆ. ನಮ್ಮಲ್ಲಿ ವ್ಯವಸಾಯದ ಕಸಬು ಒಂದು ಮಾಡರ್ನ್ ಲೈನಿನಲ್ಲಿ ಡೆವಲಪ್ ಆಗುವತನಕ ಸರ್ಕಾರದವರು ಈ ತಳಿಗಳ ವಿಚಾರದಲ್ಲಿ ತಾತ್ಸಾರ ಮಾಡಬಾರದೆಂದು ಹೇಳುತ್ತೇನೆ; ಇವುಗಳ ಅಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri S. D. KOTHAVALE (Sankeswar).—Mr. Speaker, Sir, I am very happy to support the Demand made by the Hon'ble Minister for Animal Husbandry. In my view, the Demand is on the low side. I quite agree with my friend, Sri H. B. Jwalanaiah that there should have been a greater provision for this Department. It is unthinkable to consider the improvement of agriculture without well developed animal husbandry. May be, there is an idea of mechanised cultivation. But, that may take decades and decades and it is highly improbable whether complete mechanisation can be introduced in India in view of the small holdings that we are having in our country. It is interesting to note the total live-stock population of the Mysore State. The total live-stock population of Mysore State is 2,60,68,000.

Sri H. B. JWALANAIAH.—Is it 1961 figures ?

Sri S. D. KOTHAVALE.—It is the latest figure as per the statistical book published in 1966. So, it is more than two crores and a half. Probably, I think, the population of the live-stock excels the population of the human beings of the State. This does not include poultry. Poultry population is 88,48,000. If these two figures are added, it comes to 2,95,00,000. I am just placing these figures before the House to know whether the provision that the Government wants to have for this Department is enough or not. It is obvious that it is not enough. As already stated by me earlier, agriculture and animal husbandry go together. In the present conditions, animals give various types of services to agriculture and to the people. They are useful for milk purposes, they give manure for our agriculture organic manure has got an important utility *viz.*, it contributes to the soil structure. Therefore, the manure that we get from our cattle is very very important, not only for purposes of growing more food but also for strengthening our soil. Various steps have been taken by the Government to introduce and develop animals on scientific and modern lines. Researches are going on and they are having a sort of selective breeding. As a lay man on the subject, I find one particular problem which has not attracted the attention of the Government. There is a feeling amongst the agriculturists that we are either developing draught cattle or milching cattle. There is no attempt to breed cattle for both these purposes. If it is possible to develop such double purpose cattle, it shall be a boon to the cultivators, which will serve both the purposes ; it will supply the animal power for the purpose of agriculture and give the people very important food, milk. Milk is a food which is useful to man from his infant days to his last days, the old age also. It can be taken by a person in any state of health. For a sick person it is a very fine food, which he can easily digest. Here, I would like to give the figures about the consumption of milk in India and elsewhere. The per capita consumption of milk in India is 5 ounces, whereas it is only 2 ounces in Mysore. It is a very low consumption so far as milk is concerned. In America, it is 30 ounces per day per capita, in United Kingdom it is 27 ounces and in Newzeland it is 28 ounces. It is the view of experts that a man of

normal health should have at least 15 ounces of milk per day for his diet. In these circumstances, I think, it is difficult to over-emphasize the importance of Dairy projects. The Dairy programme undertaken by the Government is very very modest and this facility should be extended to all parts of the State, and the importance of extending this facility to every Taluk in the State cannot be over-emphasized. I suggest that efforts should be made to have Dairy farming and dairy activities in every Taluk. For this purpose, Government may require more funds, and if the Government comes forward with a proposal for more funds for creating dairy facilities, I think, this House will welcome such a proposal and extends its support. I make a reference about a famous Dairy in Anand in Gujarat which is run on co-operative lines. That Dairy has been brought into existence, if I am mistaken not, on co-operative lines and is doing wonderful work in that area. Probably, that Dairy may be the first in Asia. I do not know what difficulties would be there for the Government to recommend for a co-operative organisation for milk supply and for the purpose of carrying on dairying activities in the entire State.

The Government will have to advance loans to these Co-operative Societies and also to individuals who want to go in for Dairy Industry. I think, it is worthwhile to consider this point because it will help to a certain extent to improve the public health in India and also to it will solve the food problem to a very great extent. Our Hon'ble Colleague Sri Ghorpade has given very interesting suggestions in this matter. These suggestions are useful in the interest of developing this cattle wealth. There are researches to show that there are some varieties of fodder which are very useful for cattle. The difficulty is how to produce the improved fodder and how to popularise it amongst the agriculturists to grow it. We have so many schemes on hand. We must do some discoveries in this respect and take it to the doors of the cultivators. I think, we should have model farms even for growing fodder on scientific lines in every taluk where there is cattle population. It is very necessary that some subsidy is given for the purpose of growing fodder to develop it on scientific lines. Before closing, I would like to say a few words about cow protection. There is much agitation for the protection of cows all over India. Of-course efforts should be made in this direction. The matter, I think, should not be governed by religious sentiments. This matter should be viewed on scientific lines and it should be pursued on modern lines. Art. 48 says steps should be taken for preserving and improving the breeds and prohibiting the slaughter, of cows and calves and other milch and draught cattle on scientific and modern lines it does not mean that all cattle that we are having are necessry and they can be maintained and preserved. The people want to get advantage and highiest benefits at reasonable cost. Our Animal Husbandry should be developed on scientific lines, *i.e.*, on the lines which have been developed in highly developed countries of Europe and America. Therefore lending support

(SRI S. D. KOTHAVALE)

for preservstion of useless cattle does not solve our problem of improving the animal husbandry. Therefore, without dilating much on the subject, I can only say that our approach should be one on scientific lines and should be more beneficial and economical one for the welfare of the citizens of the State. while supporting the demand moved by the Hon'ble minister, I suggest it is possible to augment the demand by certain adjustments. Thank you, Sir.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದಿಟ್ಟಿರತಕ್ಕ 22ನೇ ನಂಬರಿನ ಬೇಡಿಕೆ ಏನಿದೆ ಇದರ ಬಗ್ಗೆ ಒಂದೆರಡು ಮಾತುಗಳನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ಶ್ರೀಮಾನ್ ಘೋರ್ಪಡೆಯವರು ಈ ಸಭೆಯಲ್ಲಿ ಬಹಳ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ನಮ್ಮ ಮಾನ್ಯ ಮಂತ್ರಿಗಳೂ ಕೂಡ ಪ್ರಾಯಶಃ ಒಪ್ಪಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನನಗೆ ತಿಳಿದಿರತಕ್ಕ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಇವೊತ್ತು ನಮ್ಮ ರಾಜ್ಯದಲ್ಲಿ ಸುಮಾರು 100ಕ್ಕೆ 70 ಜನ ವ್ಯವಸಾಯವನ್ನು ಅವಲಂಬನೆ ಮಾಡಿದ್ದಾರೆ. ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕ ಜನಗಳಿಗೆ ಈಗಿರತಕ್ಕ ಸಂಕಟಗಳು ಪರಿಹಾರವಾಗಬೇಕಾದರೆ, ಒಂದು ಉಪಕಸುಬಿನಿಂದ ಆರ್ಥಿಕ ಪ್ರಗತಿಯನ್ನು ಸಾಧನೆ ಮಾಡಬೇಕಾದರೆ ಈಗಿರತಕ್ಕ ವ್ಯವಸಾಯದ ಜೊತೆಗೆ ಪಶುಪಾಲನೆ, ಕುರಿ, ಆಡು, ಹಂದಿ, ಜಾನುವಾರುಗಳು ಇತ್ಯಾದಿಗಳನ್ನು ಸಾಕಿ ತಮ್ಮ ಬಡ ಜನಗಳು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿ ಮಾಡಿಕೊಳ್ಳತಕ್ಕದ್ದು ಬಹಳ ಅವಶ್ಯವಾಗಿದೆ. ಇದಕ್ಕೆ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಪ್ರೋತ್ಸಾಹವನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಎಲ್ಲರೂ ಹೇಳುತ್ತಾರೆ. ಫುಡ್ ಸಬ್ಸಿಟ್ಯೂಟ್ ಮಾಡಬೇಕು, ನಾವು ಉಪಯೋಗಿಸತಕ್ಕಂಥ ಆಹಾರದ ಪದ್ಧತಿಯನ್ನ ಬದಲಾವಣೆ ಮಾಡಬೇಕು ಎಂದು ಈಗ ನಮ್ಮ ರಾಜ್ಯದಲ್ಲಿ ಆಹಾರದ ಕೊರತೆ ಏನಿದೆ ಅದನ್ನೂ ನಿರ್ವಹಣೆ ಮಾಡಬೇಕಾದರೆ ಈಗಿನ ಆಹಾರ ಪದ್ಧತಿಯಿಂದ ಅದು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ನಮ್ಮ ಆಹಾರ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಕೇಂದ್ರದಿಂದ ಹಿಡಿದು ರಾಜ್ಯದ ಮಟ್ಟಕ್ಕೆ ಎಲ್ಲರೂ ಮುಖಂಡರೂ ತಜ್ಞರೂ ಭಾಷಣ ಮಾಡುತ್ತಾರೆ. ಆದರೆ ಈ ದಿಕ್ಕಿನಲ್ಲಿ ಸಾಕಷ್ಟು ಕೆಲಸವನ್ನು ಮಾಡಿಲ್ಲ. ಆದರೆ ಪ್ರಗತಿ ಬಹಳ ಕೆಳಮಟ್ಟದಲ್ಲಿ ಇದೆ ಎಂದು ಹೇಳಿದರೆ ಮಾನ್ಯ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳಿಗೆ ಸಾಕಷ್ಟು ಅನುಭವ ಮತ್ತು ಪರ್ಸನಾಲಿಟಿ ಇದ್ದರೂ ಕೂಡ ಈ ಸಂಕಷ್ಟದಲ್ಲಿ ಸಮಸ್ಯೆಗಳನ್ನು ಎಷ್ಟರಮಟ್ಟಿಗೆ ಬಗೆಹರಿಸುತ್ತಾರೋ ಎಂದು ನನಗೆ ಅನುಮಾನ ಬಂದಿದೆ. ನಾನು ಸಾಮಾನ್ಯವಾಗಿ ಮಂತ್ರಿಗಳು ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಪ್ರಯಾಣ ಮಾಡಿದಾಗ ಆಯಾ ಸ್ಥಳೀಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡತಕ್ಕ ಕಾಲದಲ್ಲ ಕೆಲವು ಸಂದರ್ಭದಲ್ಲಿ ನಾನು ನೋಡಿದ್ದೇನೆ. ಅವರಿಗೆ ಹೆಚ್ಚಿನ ಆಸಕ್ತಿ ಇದೆ. ಆದರೆ ಎಲ್ಲಾ ಸನ್ನಿವೇಶಗಳಲ್ಲಿಯೂ ಎಷ್ಟರಮಟ್ಟಿಗೆ ಸಹಕಾರ ಬರುತ್ತದೆಯೋ ಗೊತ್ತಿಲ್ಲ. ಆಡಳಿತವನ್ನು ನಡೆಸತಕ್ಕ ಕಾಲದಲ್ಲಿ ಇರತಕ್ಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ.

ಇನ್ನು ಮೀನುಗಾರಿಕೆಯ ಅಭಿವೃದ್ಧಿಗಾಗಿ ಸರ್ಕಾರದವರು 33 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ 170 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕ್ರಾಷ್ ಪ್ರೋಗ್ರಾಮಿನಲ್ಲಿ 68 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ 400 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಅಂದಾಜು ಹಾಕಿದ್ದಾರೆ. ಸಮುದ್ರ ತೀರದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಮೆಕನೈಜ್ಡ್ ಬೋಟುಗಳನ್ನು ಒದಗಿಸುವ ವಿಷಯದಲ್ಲಿ, ಮೈನರ್ ಕೆರೆಗಳಲ್ಲಿ ಆಶ್ರಯ ಹೊಂದಿರತಕ್ಕ ಜಾಗಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುವ ಬಗ್ಗೆ ಪ್ರತಿ ತಾಲ್ಲೂಕುಗಳಲ್ಲಿಯೂ ಅಸಿಸ್ಟೆಂಟ್ ಸೂಪರಿನ್‌ಟೆಂಡೆಂಟ್ ಕೇಡರಿನ ಅಧಿಕಾರಿಗಳನ್ನು ಹಾಕಿದ್ದಾರೆ. ನಾನು ಸುಮ್ಮನೆ ಕೆಲವು ಆಫೀಸುಗಳಲ್ಲಿ ವಿಚಾರ ಮಾಡಿದ್ದೇನೆ. ಅದರ ಸಿಬ್ಬಂದಿಗೋಸ್ಕರ ಹಣವೇನೋ ಖರ್ಚಾಗುತ್ತದೆ. ಆದರೆ ಮೀನುಗಾರಿಕೆಯಲ್ಲಿ ಏನಾದರೂ

ಸಂಪಾದನೆ ಮಾಡಿದ್ದಾರೆಯೋ ಎಂದರೆ ಏನೂ ಇಲ್ಲ. ಪ್ರಾರಂಭದಲ್ಲಿ ನಾವು ಏನೂ ಆದಾಯವನ್ನು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ಆ ಅಧಿಕಾರಿಗಳು ಅಲ್ಲಿ ಏನು ಸಾಧನೆ ಮಾಡುತ್ತಾರೆ ಎಂದರೆ ನಾನು ಕಂಡ ಹಾಗೆ ಯಾರಾದರೂ ಕೆಲವರು ಕೆರೆಯಲ್ಲಿ ಮೀನು ಹಿಡಿಯುವುದಕ್ಕೆ ಹೋದಾಗ ಅದರ ಮೇಲೆ ಕೇಸು ಹಾಕಿ ಐದು ರೂಪಾಯಿ ತೆಗೆದುಕೊಂಡು ಒಳವ್ಯವಹಾರವನ್ನು ಮಾಡುವುದು, ಮತ್ತು ಯಾರಾದರೂ ಬೇರೆಯವರಿಂದ ಮೀನು ಹಿಡಿಸುವ ವ್ಯವಹಾರದಲ್ಲಿ ತೊಡಗಿರುವುದು ನನಗೆ ಕಾಣುತ್ತದೆ. ಈಗ ನಾನು ಕೊಡತಕ್ಕ ವರ್ತಮಾನದ ಮೇಲೆ ಅವನ್ನು ವಿಚಾರ ಮಾಡಲಿ. ನನ್ನ ತಾಲ್ಲೂಕಿನಲ್ಲಿರತಕ್ಕ ವಿಷಯವನ್ನು ಹೇಳುವುದಾದರೆ, ಈ ಮೀನುಗಾರಿಕೆಯಿಂದ ಸರ್ಕಾರಕ್ಕೆ ಎಷ್ಟು ಉತ್ಪತ್ತಿ ಬರುತ್ತದೆಯೋ ಅದರ 5 ರಷ್ಟು 6 ರಷ್ಟು ಅದರ ಸಿಬ್ಬಂದಿಗಾಗಿ ಖರ್ಚಾಗುತ್ತದೆ. ಇದರಿಂದ ಏನಾದರೂ ಪ್ರತಿಫಲ ಇದೆಯೋ? ಆದ್ದರಿಂದ ಈ ಮೀನುಗಾರಿಕೆಯ ಅಭಿವೃದ್ಧಿಗಾಗಿ ಏನೇನು ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರದವರು ಉದ್ದೇಶಿಸಿದ್ದಾರೆಯೋ ಆಸಕ್ತಿಯನ್ನು ಹೊಂದಿದ್ದಾರೆಯೋ ಇದನ್ನು ಸ್ವಲ್ಪ ಕೂಲಂಕಷವಾಗಿ ಯೋಚನೆ ಮಾಡಬೇಕು. ಅನೇಕ ಕಡೆ ಮೈನರ್ ಕೆರೆಗಳು ಇರತಕ್ಕ ಜಾಗದಲ್ಲಿ ದೊಡ್ಡ ಸಿಬ್ಬಂದಿಯನ್ನು ಇಟ್ಟು ಹಣವನ್ನು ಇನ್ವೆಸ್ಟ್ ಮಾಡಿ, ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಸರ್ಕಾರದವರು ಇದನ್ನು ಯೋಚನೆ ಮಾಡುವುದು ಅವಶ್ಯಕ. ಪೆರಿನಿಯಲ್ ವಾಟರ್ ಸೋರ್ಸಸ್ ಇರುವ ಕಡೆ ಈ ಯೋಜನೆಗೆ ಹಣವನ್ನು ಹಾಕಿದರೆ ಪರವಾಯಿಲ್ಲ. ಪರೆ ಅಭಾವ ಪರಿಸ್ಥಿತಿ ಇರುವ ಕಡೆ ಸಣ್ಣ ಸಣ್ಣ ಕಟ್ಟೆಗಳಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಹೊಸದಾಗಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಮಾರ್ಕೋನಹಳ್ಳಿ ಜಲಾಶಯ ಮತ್ತು ಕೆ. ಆರ್. ಎಸ್. ಜಲಾಶಯಗಳಲ್ಲಿ ಇದನ್ನು ಮಾಡಲು ಸಾಧ್ಯ. ಆದರೆ ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ 3—4 ತಿಂಗಳು ನೀರು ಇರುವ ಕಡೆ ಒಂದು ಆಫೀಸು ಇಟ್ಟು ಫಿಷ್ ಡೆವಲಪ್ ಮಾಡುತ್ತೀವೆ ಎಂದರೆ ಇದು ಎಂತಹ ಸ್ಕೀಮು ! ಇದು ಹಾಸ್ಯಾಸ್ಪದವಾಗಿದೆ. ಇಂತಹ ಕಡೆ ಅಧಿಕಾರಿಗಳನ್ನು ಇಟ್ಟು ಅನಾವಶ್ಯಕವಾದ ಖರ್ಚು ಆಗುತ್ತದೆ. ಇದನ್ನು ಯೋಚನೆ ಮಾಡಿ. ಹಿರಿಯ ಅಧಿಕಾರಿಗಳು ಪರಿಶೀಲನೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಖರ್ಚು ಮಾಡತಕ್ಕ ಹಣಕ್ಕೆ ತಕ್ಕ ಪ್ರತಿಫಲ ಬರುವ ಯೋಚನೆ ಮಾಡುವುದಾದರೆ ಇದರ ಕಡೆ ಗಮನ ಹರಿಸುವುದು ತಮ್ಮ ಕರ್ತವ್ಯ ಎಂದು ಹೇಳಲಿಚ್ಛೆಪಡುತ್ತೇನೆ. ಇವೊತ್ತಿನ ದಿವಸ ಎಲ್ಲಿ ವ್ಯವಸಾಯವನ್ನು ಅವಲಂಬಿಸಿದ್ದಾರೋ ಎಲ್ಲಿ ಬರೀ ಮಳೆ ಆಧಾರದ ಮೇಲೆ ಮೇಜರ್ ಇರ್ರಿಗೇಷನ್ ಅಥವಾ ಸರಿಯಾದ ಮಳೆ ಇಲ್ಲದೇ ಇರುವ ಕಡೆ, 10—15 ಇಂಚು ಮಳೆ ಆಗುವ ಫ್ಯಾಮಿನ್ ಏರಿಯಾ ಅಂತಹ ಕಡೆ ಪರಿಹಾರ ಕೊಡುವುದಾದರೆ ಅದು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಿಂದ ಸಾಧ್ಯ. ಮೇಜರ್ ಇರ್ರಿಗೇಷನಿಂದ ಜನತೆಗೆ ಪರಿಹಾರ ದೊರಕಿಸುವುದಕ್ಕೆ ಸಾಧ್ಯ ಇಲ್ಲ. ಎಲ್ಲಿ 5—10 ಇಂಚು ಇರುವ ಕಡೆ ಮಳೆ ಪ್ರಮಾಣ ಹೆಚ್ಚು ಮಾಡುವುದಕ್ಕೆ ಸಾಧ್ಯ ಆಗುತ್ತದೆ ಅಂತಹ ಕಡೆ ಖಾಯಂ ಪರಿಹಾರ ಕೊಡಬೇಕು ಎಂದರೆ ಡೆವಲಪ್‌ಮೆಂಟ್ ಆಫ್ ಅನಿಮಲ್ ಹಸ್ಬೆಂಡರಿಯಿಂದ ಕೊಡುವುದಕ್ಕೆ ಸಾಧ್ಯ. ನಮ್ಮಲ್ಲಿ ಕೆಲವು ಸ್ಕೀಮುಗಳನ್ನು 2 ವರ್ಷದಿಂದ ಇಂಪ್ಲಿಮೆಂಟ್ ಮಾಡಿದ್ದಾರೆ. Applied Nutrition programme development of fisheries—development of piggery, development of poultries, development of sheep ಈ ಸ್ಕೀಮುಗಳು ಕಾಂಪ್ರಹೆನ್ಸಿವ್ ಆಗಿದೆ. ಬಹುಶಃ ಅದನ್ನು ಎಲ್ಲಾ ಕಡೆಗೂ ಅನ್ವಯ ಮಾಡುವುದಕ್ಕೆ ಬದಲಾಗಿ ಎಲ್ಲೆಲ್ಲಿ ಜನಗಳು ಸಂಕಷ್ಟಕ್ಕೆ ಈಡಾಗಿದ್ದಾರೆ, ಕ್ಷಾಮಕ್ಕೆ ತುತ್ತಾಗಿದ್ದಾರೆ, ಮತ್ತು 10—15 ಅಂಗುಲ ಪ್ರಮಾಣದಲ್ಲಿ ಮಳೆ ಆಗುವ ಏರಿಯಾ ಯಾವುದು ಇದೆಯೋ ಅಂತಹ ಕಡೆ ಆದ್ಯತೆ ಕೊಟ್ಟು ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡತಕ್ಕದ್ದು ಬಹಳ ಸೂಕ್ತ. ಇದರ ಕಡೆ ತಮ್ಮ ಗಮನ ಕೊಡಬೇಕು. ನಮ್ಮ ಸರ್ಕಾರದಲ್ಲಿ ಒಂದು ವೈಖರಿ ಇದೆ. ಅನಿಮಲ್ ಹಸ್ಬೆಂಡರಿ ಇಲಾಖೆಯ ಮಂತ್ರಿಗಳ ಹತ್ತಿರ ಹೋದರೆ ನನಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಒಂದು ಕೋಆರ್ಡಿನೇಷನ್ ಇರಬೇಕು. ಸಂಬಂಧಪಟ್ಟ ಮಂತ್ರಿಗಳನ್ನು ಬಿಟ್ಟು ಡೆವಲಪ್‌ಮೆಂಟ್ ಮಂತ್ರಿಗಳು ಏತಕ್ಕೆ ಸೆಲೆಕ್ಟ್ ಮಾಡಬೇಕು ? ಈ ಸ್ಕೀಮು ಎಲ್ಲಿ ಕೊಡಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಲು ಅವರಲ್ಲಿಗೆ ಹೋಗುವ ಅವಶ್ಯಕ ಇಲ್ಲ. ಅವಕ್ಕೆ ಒಬ್ಬ ಮಂತ್ರಿಗಳು ಇರುವ ಸನ್ನಿವೇಶದಲ್ಲಿ ಈ ಒಂದು ಸ್ಕೀಮಿನ ನಿರ್ಣಯ ಮಾಡುವುದಕ್ಕೆ ಒಂದು ಎನ್‌ಟೈರ್ ಪಿಕ್ಚರ್ ಅವರಿಗೆ ಗೊತ್ತಿರುತ್ತದೆ. ಎಲ್ಲೆಲ್ಲಿ ಏನು ಮಾಡಬೇಕು ಎಂದು ಅಧಿಕಾರಿಗಳ ಶಿಫಾರಸ್ಸು ಮತ್ತು ಮಾಹಿತಿ ಮೇಲೆ ಸರ್ಕಾರ ನಿರ್ಣಯ ತೆಗೆದುಕೊಳ್ಳತಕ್ಕದ್ದು ಸಾಧುವಾಗಿರುತ್ತದೆ. ಅನಿಮಲ್ ಹಸ್ಬೆಂಡರಿ ಮಂತ್ರಿಗಳು ತಮ್ಮ ತೀರ್ಮಾನ ತೆಗೆದುಕೊಳ್ಳುವ ವ್ಯವಸ್ಥೆ ಬಹಳ ಸೂಕ್ತವಾದುದು. ಕಳೆದ 2 ವರ್ಷದಿಂದ ನನ್ನ ತಾಲ್ಲೂಕಿನಲ್ಲಿ ಒಂದು ಸ್ಕೀಮನ್ನು ಇಂಟ್ರಡ್ಯೂಸ್ ಮಾಡಿ ಎಂದು ಸಂಬಂಧಪಟ್ಟ ಮಂತ್ರಿಗಳಿಗೆ ಕಾಗದ ಬರೆದಾಗ ಅನಿಮಲ್ ಹಸ್ಬೆಂಡರಿ ಇಲಾಖೆ ಹೊಂದಿದಂಥ ಮಂತ್ರಿಗಳು ನನ್ನ ಕೈಯಲ್ಲಿ ಅಧಿಕಾರ ಇಲ್ಲ ಎಂದು

(ಶ್ರೀ ಹೆಚ್. ಡಿ. ದೇವೇಗೌಡ)

ಹೇಳಿದರು. ಕೋಆರ್ಡಿನೇಷನ್ ಇಲ್ಲವೇ ಇದ್ದರೆ ಬಹಳ ಕಷ್ಟವಾಗುತ್ತದೆ. ಆದಕ್ಕೆ ಆದ್ಯ ಗಮನ ಕೊಡಬೇಕು. ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಮ್‌ಗೆ ಡೇನಿಷ್ ಸರ್ಕಾರದವರು ಸಹಾಯ ಕೊಡುತ್ತಿದ್ದಾರೆ. ಎಲ್ಲೆಲ್ಲಿ ಕ್ಷಾಮಕ್ಕೆ ತುತ್ತಾಗಿದ್ದಾರೋ ಅಲ್ಲಿ ಈ ಸ್ಕೀಮನ್ನು ಇಂಟ್ರಡ್ಯೂಸ್ ಮಾಡುವ ಬಗ್ಗೆ ಆದ್ಯತೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಸ್ವಾಮಿ, ಡೆವಲಪ್‌ಮೆಂಟ್ ಆಫ್ ಷೀಪ್ ಏನು ಇದೆ, ಇದರ ಸಂಬಂಧವಾಗಿ ಕುರಿಗಳಿಗೆ ನೀವು ಇವೊತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖಾಂತರ 4-5 ಕುರಿಗಳನ್ನು ರೈತರಿಗೆ ಹಂಚುವ ವಿಧಾನ ಫಲಕಾರಿಯಾಗುವುದಿಲ್ಲ. ಹಿಂದಿನ ಕಾಲದಲ್ಲಿ ಇದ್ದಂಥ ವ್ಯವಹಾರ ನೋಡಿದರೆ ಸ್ಥಳೀಯ ಕಂಟ್ರಾಕ್ಟರ್ ಬಂದು ಪರ್ಚೇಸ್ ಮಾಡುವ ಕುರಿಗೆ ಒಂದು ಕುರಿಗೆ 100 ರೂಪಾಯಿ ಕೊಟ್ಟು ಅವಕ್ಕೆ 50 ರೂಪಾಯಿ ಸಬ್ಸಿಡಿ ಡಿಪಾರ್ಟ್‌ಮೆಂಟ್ ಕೊಡುತ್ತಾರೆ. ಇನ್ನು 50 ರೂಪಾಯಿ ರೈತ ಕೊಡುವುದು ಮತ್ತು 3.5 ಕುರಿಗಳನ್ನು ಕೊಡುವುದರಿಂದ ಪ್ರಯೋಜನ ಆಗುವುದಿಲ್ಲ. ಆದುದರಿಂದ ಡೆವಲಪ್‌ಮೆಂಟ್ ಆಫ್ ಷೀಪ್ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಹಂದಿಗಳ ಬಗ್ಗೆ ಮಾರ್ಕೆಟಿಂಗ್ ವ್ಯವಸ್ಥೆ ಕಡೆಗೆ ಗಮನ ಕೊಡಬೇಕು. ಡೆವಲಪ್ ಮಾಡಿ ಹಂದಿ ಸಾಕಿದರೆ ಮಾರ್ಕೆಟಿಂಗ್ ಇಲ್ಲದೇ ಹೋದರೆ ಪ್ರಯೋಜನವಾಗುವುದಿಲ್ಲ. ಮಾರ್ಕೆಟಿಂಗ್ ಮತ್ತು ಡೆವಲಪ್‌ಮೆಂಟ್ ಅವಶ್ಯಕವಾಗಿ ಮಾಡಬೇಕು ಎಂದು ತಿಳಿಸಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಸಾನಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ನಾನು ಅನಿಮಲ್ ಹಸ್ಬೆಂಡರಿ ಖಾತೆಯ ಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು ಮಂಡಿಸಿದ ಡಿಮ್ಯಾಂಡುಗಳಿಗೆ ಅನುಮೋದನೆ ಕೊಡುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ನಮ್ಮ ದೇಶದಲ್ಲಿ ವಕ್ಕಲುತನ ಖಾತೆಗೆ ಹೇಗೆ ಮಹತ್ವ ಇದೆ ಅದರಂತೆ ಅನಿಮಲ್ ಹಸ್ಬೆಂಡರಿ ಖಾತೆಯೂ ಮಹತ್ವದ್ದು ಎಂದು ನನಗೆ ಅನಿಸುತ್ತದೆ. ವಕ್ಕಲುತನ ಸರಿಯಾಗಿ ನಡೆಯಬೇಕಾದರೆ ಎತ್ತು, ಕೋಣ, ಆಕಳು ಮೊದಲಾದವು ನಮಗೆ ಅವಶ್ಯಕವಾಗಿ ಬೇಕು. ಇವು ಸರಿಯಾಗಿ ಅಭಿವೃದ್ಧಿ ಸ್ಥಿತಿಯಲ್ಲಿ ಇದ್ದರೆ ವಕ್ಕಲುತನ ಸರಿಯಾಗಿ ನಡೆಯುತ್ತದೆ. ಈ ಅಭಿವೃದ್ಧಿ ಆಗಬೇಕಾದರೆ ಈ ಖಾತೆಯಲ್ಲಿ ಸಾಕಷ್ಟು ಸುಧಾರಣೆ ಮಾಡುವುದು ಅತ್ಯಾವಶ್ಯ ಇದೆ. ಪ್ರತಿಬ್ಲಾಕ್‌ನಲ್ಲೂ ಈಗ ದನಗಳಿಗೆ ಔಷಧಿ ಕೊಡುವ ಬಗ್ಗೆ ವೆಟರ್ನರಿ ಸೆಂಟರ್ಸ್ ಏನು ಇವೆ ಅದು ಈಗಿನ ಪ್ರಮಾಣದಲ್ಲಿ ಅಪ್‌ಗ್ರೇಡ್ ಆಗಬೇಕು. 5 ಸಾವಿರದ ಜನಸಂಖ್ಯೆ ಇರುವ ಕಡೆಯಲ್ಲಿ ಒಂದು ಆದರೂ ಅಪ್‌ಗ್ರೇಡ್ ಡಿಸ್ಪೆನ್ಸರಿ ಅವಶ್ಯ ಇದೆ. ಅಲ್ಲಿ ಒಬ್ಬ ಸ್ಟಾಕ್‌ಮನ್ ಒಬ್ಬ ಕಾಂಪೌಂಡರ್ ಇರಬೇಕು. ಅಲ್ಲಿ ಡಾಕ್ಟರ್ ದವಾಖಾನೆಯ ಸಲುವಾಗಿ ಒಂದು ಬಿಲ್ಡಿಂಗ್ ಇರುವುದು ಅವಶ್ಯ ಇದೆ. ಅಂತಹ ಬಿಲ್ಡಿಂಗ್ ಒಂದು ಬ್ಲಾಕ್‌ಗೆ ಕನಿಷ್ಠ ಪಕ್ಷ 4 ಆದರೂ ಬೇಕು. ಈಗ ನಮ್ಮ ಭಾಗದಲ್ಲಿ ಕಿತ್ತೂರಿನಲ್ಲಿ ವೆಟರ್ನರಿ ಆಸ್ಪತ್ರೆ ಒಂದು ಇದೆ, ಖಾನಾಪುರದಲ್ಲಿ ಇದೆ. ಇಟಗಿಯಲ್ಲಿ ಪ್ರತಿ ದಿವಸ 50 ರಿಂದ 70 ರವರೆಗೆ ದನಕ್ಕೆ ಚಿಕಿತ್ಸೆ ಕೊಡುತ್ತಾರೆ. 5-6 ವರ್ಷದಿಂದ ನಡೆಯುತ್ತಿದೆ. ಒಬ್ಬ ಸ್ಟಾಕ್‌ಮನ್ ಇದ್ದಾನೆ. ಕಾಂಪೌಂಡರ್ ಇಲ್ಲ. ಬೇರೆ ಔಷಧಿ ಇಲ್ಲ. ಇದಕ್ಕೆ ತೀವ್ರ ಗಮನ ಕೊಡಬೇಕು.

ಇನ್ನು ಡೈರಿ ಡೆವಲಪ್‌ಮೆಂಟ್ ಸ್ಕೀಮನ್ನು ಸುಧಾರಣೆ ಆಗಬೇಕು ಎಂದು ಮಾಡಿದ್ದೀರಿ. ದೊಡ್ಡ ಪಟ್ಟಣಗಳಲ್ಲಿ ಹಾಲು ಪೂರೈಸಬೇಕು ಎನ್ನುವ ಯೋಚನೆ ಇಟ್ಟುಕೊಂಡಿದೆ. ಇದು ಬೊಂಬಾಯಿನಲ್ಲಿ ಚೆನ್ನಾಗಿ ನಡೆದಿದೆ. ಬೆಂಗಳೂರಿನಲ್ಲಿರುವ ಡೈರಿಗೆ ಸಾಕಷ್ಟು ಪ್ರಮಾಣದಲ್ಲಿ ಹಂಚುವಂತೆ ಎಮ್ಮೆಗಳು ಆಗಲಿ ಆಕಳುಗಳು ಆಗಲಿ ಬೇಕಾಗುತ್ತದೆ. 15 ಲಕ್ಷ ಜನ ಇರುವ ಪಟ್ಟಣಕ್ಕೆ ಡೈರಿ ಸ್ಕೀಮು ಮಾಡಿದ್ದೀರಿ. ಸುತ್ತಮುತ್ತಲೂ ಡೈರಿಫಾರಂನಂತೆ ಡೈರಿ ಸೊಸೈಟಿ ಮಾಡಬೇಕು. ಹುಬ್ಬಳ್ಳಿಯಲ್ಲಿ ಮಾಡಿದ್ದೀರಿ, ಬೆಳಗಾಮಿನಲ್ಲಿ ಮಾಡಿದ್ದೀರಿ, ಅಲ್ಲಲ್ಲಿ ಡೈರಿ ಸ್ಕೀಮುಗಳನ್ನು ತೆಗೆದುಕೊಂಡಿದ್ದೀರಿ. ಅಲ್ಲಿ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಉತ್ತಮವಾದ ಹಾಲು ಸಿಗುವಂತೆ ಸೊಸೈಟಿಗಳನ್ನು ತೆಗೆಯಬೇಕು. ಇಂಥ ಡೈರಿ ಸೊಸೈಟಿಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಸಾಲ ಸಬ್‌ಸಿಡಿ ಮೂಲಕ ಉತ್ತೇಜನವಿಲ್ಲ. ಇದಕ್ಕೆ ಉತ್ತಮ ಸಹಾಯ ಸಹಕಾರ ದೊರೆತರೆ ಒಳ್ಳೆಯದಾಗುತ್ತದೆ. ಆನಂದದಲ್ಲಿ ಇಂಥ ಒಂದು ಡೈರಿ ಮಾಡಿ ಅಲ್ಲಿ ಸಂಘಟನೆ ಮಾಡಿದ್ದಾರೆ. ಅದೇ ರೀತಿ ಒಳ್ಳೇ ಜನರಿಗೆ ಉತ್ತಮ ಸಹಕಾರ ದೊರೆಯಬೇಕು. ನಾವು ಕೂಡ ಆಕಳು ಸಾಕುತ್ತೇವೆ. ಹುಲ್ಲು, ಧಾನ್ಯ, ಆಹಾರ ಸರಿಯಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಸಹಕಾರ ಸೊಸೈಟಿಯಾಗಬೇಕು. ಸೊಸೈಟಿ ಮೂಲಕ ಸಿಕ್ಕುವಂತೆ ಮಾಡುವುದು ನಿಜವಾಗಿಯೂ ಸರ್ಕಾರದ ಮತ್ತು

ಜನತೆಯ ಕರ್ತವ್ಯವಾಗಿದೆ. ಅಲ್ಲಲ್ಲಿ ಡೈರಿ ಸ್ಕೀಂ ತೆಗೆದುಕೊಂಡು ಪ್ರಾರಂಭ ಮಾಡಿದರೆ ಜನತೆ ಡೈರಿ ಸೊಸೈಟಿ ಮಾಡಲಿಕ್ಕೆ ಮುಂದೆ ಬರುತ್ತಾರೆ. ಇದಕ್ಕೆ ಬೇಕಾದ ಟ್ರೇನಿಂಗ್ ಕೊಡುವುದು ಕೂಡ ಅಗತ್ಯ. ಕೋ-ಆಪರೇಟಿವ್ ಮೂವ್‌ಮೆಂಟ್ ಮುಂಬಯಿ ಪ್ರಾಂತದಲ್ಲಿ ಸಾಕಷ್ಟು ಬೆಳೆದಿದೆ. ಸಾತಾರಾ, ಸಾಂಗ್ಲಿ, ಕೊಲ್ಹಾಪುರ ನಗರಗಳಲ್ಲಿ ಇಂಥ ಕೋ-ಆಪರೇಟಿವ್ ಸೊಸೈಟಿಗಳು ಇವೆ. ಆದುದರಿಂದ ನಮ್ಮ ರಾಜ್ಯದಲ್ಲಿ ಕೂಡ ಸಹಕಾರ ಮಂತ್ರಿಗಳು ಇವಕ್ಕೆ ಹೆಚ್ಚು ಲಕ್ಷ ಹಾಕಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿ ಸರಿಯಾದ ಕ್ರಮದಲ್ಲಿ ಪ್ರಾರಂಭ ಮಾಡಿದರೆ ಡೈರಿ ಫಾರ್ಮ್ ಆಗುತ್ತದೆ. ಡೈರಿ ಸೊಸೈಟಿ ಮಾಡುವುದಕ್ಕೆ ಸಾಲ, ಸಬ್‌ಸಿಡಿ, ತಗಾಯಿ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು, ಹಿಂಡುವ ಆಕಳು ಎಮ್ಮೆ ಬೆಳೆಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಎಲ್ಲ ಅನುಕೂಲತೆ ಆಗುವ ಹಾಗೆ ಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಎನ್.ಇ.ಎಸ್. ಬಂದಾಗಿನಿಂದ ಪೌಲ್ಟ್ರಿ ಫಾರ್ಮ್ ಮಾಡಬೇಕೆಂಬ ವಿಚಾರಕ್ಕೆ ಉತ್ತೇಜನ ಸಿಕ್ಕಿದೆ. ಆದರೆ ಇದು ಸರಿಯಾದ ರೀತಿಯಲ್ಲಿ ಪ್ರಗತಿಯಾಗಿಲ್ಲ. ಎಕ್ಸ್‌ಟೆನ್‌ಷನ್ ಆಫೀಸರರು ಜೀಪಿನಲ್ಲಿ ಕೂತುಕೊಂಡು ಬಂದು ನೀವು ಏನೇನು ಮಾಡುತ್ತೀರಿ, ಕೋಳಿ ಕೊಡುತ್ತೇವೆ, ಹಣ ಕೊಡುತ್ತೇವೆ ಎಂದು ಅಷ್ಟೇ ಹೇಳುತ್ತಾರೆ. ರೈತರು ಏನು ಮಾಡುತ್ತಾರೆ ಎಂಬುದನ್ನು ಕೇಳಿ ಕೊಳ್ಳುವುದಕ್ಕೆ ಕುಳಿತುಕೊಳ್ಳಲು ಅವರಿಗೆ ವೇಳೆ ಇರುವುದಿಲ್ಲ, ಕೂಡಲೇ ಎದ್ದು ಹೋಗುತ್ತಾರೆ. ಇದರಿಂದ ಹೇಗೆ ಪೌಲ್ಟ್ರಿ ಆಗುತ್ತದೆ? ಅದೇ ರೀತಿ ಮೀನುಗಾರಿಕೆಯ ವಿಚಾರದಲ್ಲಿ ಕೂಡ ಸರಕಾರ ಉತ್ತೇಜನ ಕೊಡುತ್ತದೆ. ಆದರೆ ಅದೂ ಕೂಡ ಸರಿಯಾಗಿ ನಡೆಯುತ್ತಿಲ್ಲ. ಈ ವಿಚಾರ ದಲ್ಲಿ ಎಕ್ಸ್‌ಟೆನ್‌ಷನ್ ಆಫೀಸರರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಜನರಿಗೆ ಸರಿಯಾದ ಟ್ರೇನಿಂಗ್ ಕೊಡಬೇಕು. ರೋಗ ಬಂದರೆ ಏನು ಮಾಡಬೇಕು ಎಂಬುದನ್ನು ಹೇಳುವವರು ಯಾರೂ ಇಲ್ಲ. ಒಂದು ತಾಲ್ಲೂಕಿನಲ್ಲಿರುವ ಸೆಂಟರಕ್ಕೆ ಹೋಗಿ ಸ್ಟಾಕ್‌ಮನ್ ಕಡೆಯಿಂದ ಇಂಜೆಕ್ಷನ್ ಮಾಡಿಸಿ ಕೊಳ್ಳಬೇಕಾಗುತ್ತದೆ. ಅಲ್ಲಲ್ಲಿ ಸೆಂಟರ್ಸ್ ಮಾಡಿ ಸರಿಯಾಗಿ ಶಿಕ್ಷಣ ಕೊಟ್ಟರೆ ಈ ಯೋಜನೆ ಯಶಸ್ವಿಯಾಗುತ್ತದೆ. ಇಂಜೆಕ್ಷನ್ ಮಾಡುವ ಟ್ರೇನಿಂಗ್ ಕೊಟ್ಟು ಜನರಿಗೆ ಕಲಿಸಿದರೆ ಅವರು ತಮ್ಮಷ್ಟಕ್ಕೆ ತಾವೇ ಅದನ್ನು ಮಾಡುತ್ತಾರೆ. ಇದಕ್ಕಾಗಿ ಒಂದೆರಡು ಕಡೆ ಒಂದು ತಾಲ್ಲೂಕಿನಲ್ಲಿ ಸೆಂಟರ್ಸ್ ಮಾಡಿ ಸರಕಾರದವರೆ ಇದನ್ನು ಮಾಡಿ ತೋರಿಸಬೇಕು. ಸಹಕಾರ ಸಂಘಗಳ ಮುಖಾಂತರ ಮಾಡಿ ತೋರಿಸಿದರೆ ಹೆಚ್ಚು ಉಪಯೋಗವಾಗುತ್ತದೆ.

ಉತ್ತಮ ತಳಿ ಹಿಂಡುವ ದನಗಳ ಆವಶ್ಯಕತೆ ಇದೆ. ಒಂದು ತಾಲ್ಲೂಕಿನಲ್ಲಿ ನಾಲ್ಕಾರು ಕಡೆ ಎಂಟು ಹತ್ತು ಬೀಜದ ಹೋರಿಗಳನ್ನು ಕೊಡುತ್ತಿದ್ದಾರೆ. ಸದ್ಯಕ್ಕೆ ಈ ಸ್ಕೀಂ ಇಲ್ಲ. ಇದರಿಂದ ಹಳ್ಳಿಯವರಿಗೆ ಉಪಯೋಗವಾಗುತ್ತಿಲ್ಲ. ಕೊಟ್ಟಿರತಕ್ಕಂಥ ಹೋರಿ ಬೇರೆ ಕೆಲಸಕ್ಕೆ ಉಪಯೋಗಿಸು ತ್ತಾರೆ. ಆದುದರಿಂದ ಡೈರಿ ಸೊಸೈಟಿಗಳಿಗೆ ಒಂದೆರಡು ಹೋರಿ ಕೋಣ ಒದಗಿಸುವ ವ್ಯವಸ್ಥೆ ಆಗಬೇಕು, ಇದರಿಂದ ಉಪಯೋಗವಾಗುತ್ತದೆಂದು ನನಗೆ ಅನಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಉತ್ತಮ ತಳಿಗಳು ಇಲ್ಲ. ಹಿಂಡುವ ದನಗಳ ತಳಿಸುಧಾರಣೆಗೆ ಏನಾದರೂ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದಲ್ಲದೆ ಕೃತಕ ಗರ್ಭಧಾರಣ ಸ್ಕೀಂ ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆ ಗಮನ ಕೊಡ ಬೇಕು. ಒಂದು ಡೈರಿ ಫಾರ್ಮ್ ಸೆಂಟರಕ್ಕೆ ಇನ್ನೂರು, ಐದುನೂರು ಎಕರೆ ಜಮೀನು ಹುಲ್ಲು ಬೆಳೆಯುವುದಕ್ಕೆ ಇಟ್ಟುಕೊಂಡಿರಬೇಕು. ಇದಕ್ಕೆ ಖಾನಾಪುರ ತಾಲ್ಲೂಕಿನಲ್ಲಿ ಅನುಕೂಲವಿದೆ. ಅಲ್ಲಿ ನೀರು ಹುಲ್ಲು ಸಾಕಷ್ಟು ಇದೆ. ಇಂಥ ಮಲೆನಾಡು ಪ್ರದೇಶದಲ್ಲಿ ಡೈರಿ ಫಾರ್ಮ್ ಸೊಸೈಟಿ ಮಾಡಿ ಸರಕಾರದವರೇ ತೋರಿಸಬೇಕು ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಜನರಿಗೆ ಉಪಯೋಗ ವಾಗುವ ರೀತಿಯಲ್ಲಿ ಕೈಕೊಳ್ಳಬೇಕೆಂದು ಹೇಳಿ, ನನಗೆ ಎರಡು ಮಾತು ಹೇಳುವುದಕ್ಕೆ ಅವಕಾಶ ಕೊಟ್ಟಿರುವ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಿಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೆ ಪಶು ಸಂಗೋ ಪನೆ ವಿಚಾರವಾಗಿ ಅನೇಕ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಶ್ರೀಮಾನ್ ಪ್ಯಾಲನಯ್ಯನವರು ಹೇಳಿದ ಹಾಗೆ ನಮ್ಮ ಸರಕಾರ ಅನಿಮಲ್ ಹಸ್‌ಬಂಡರಿ ಇಲಾಖೆ ಬಗ್ಗೆ ಅಷ್ಟು ಹೆಚ್ಚಾಗಿ ಆಸ್ಥೆ ವಹಿಸಿ ಪ್ರಚಾರ ಮಾಡುತ್ತಿಲ್ಲ ಹಣ ಖರ್ಚು ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಆಹಾರ ದೊಡ್ಡ ಸಮಸ್ಯೆಯಾಗಿದೆ. ಅದೇ ರೀತಿ ದನಗಳ ಆಕಳುಗಳ ಸಮಸ್ಯೆಯಾಗಿದೆ. ಆಕಳುಗಳನ್ನು ಯಾವ ರೀತಿ ಪಾಲಿಸಬೇಕು ಅವುಗಳ ಉತ್ಪಾದನೆ ಯಾವ ರೀತಿ ಮಾಡಿಕೊಳ್ಳಬೇಕು ಎಂಬುದು ನೂರಕ್ಕೆ ಎಂಭತ್ತರಷ್ಟು ರೈತರಿಗೆ ಗೊತ್ತಿಲ್ಲ. ಬೆಂಗಳೂರು ಬೆಳಗಾಂವಿ ಹುಬ್ಬಳ್ಳಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಮೇರಿಕಾದಿಂದ ತರಿಸಿದ ನೂರಾರು ಆಕಳುಗಳನ್ನು

(ಶ್ರೀ ಎಸ್. ಎಸ್. ಅರಕೇರಿ)

ಇಟ್ಟಿದ್ದಾರೆ. ಇದರಿಂದ ಉತ್ಪಾದನೆ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಇದರ ಅವಶ್ಯಕತೆ ಇದ್ದರೂ ಕೂಡ ಅಂಥಲ್ಲಿ ಪ್ರೋತ್ಸಾಹ ಕೊಟ್ಟು ಪ್ರಚಾರವಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನಾಲ್ಕು ಊರುಗಳಿಗೆ ಒಂದರಂತೆಯಾದರೂ ಸುಧಾರಿಸಿದ ತಳಿ ಆಕಳುಗಳನ್ನು ಕಳಿಸಿದರೆ ಸುತ್ತಮುತ್ತು ಇರತಕ್ಕ ಹಳ್ಳಿಯ ರೈತರು ಅದನ್ನು ನೋಡಿ ತಾವೂ ಆ ರೀತಿ ದನಗಳನ್ನು ಸಾಕಬೇಕು ಎಂದು ಉತ್ಸಾಹ ಭರಿತರಾಗಲು ಸಾಧ್ಯವಿದೆ. ನಮ್ಮ ದೇಶದಲ್ಲಿ ಆಕಳನ್ನು ಧಾರ್ಮಿಕ ಭಾವನೆಯಿಂದ ನೋಡುತ್ತೇವೆ. ಆಕಳು ಮೂವತ್ತು ಮೂರು ಕೋಟಿ ದೇವತೆಗಳ ವಾಸಸ್ಥಾನ ಎಂದು ಭಾವಿಸಿ ಇದು ಪವಿತ್ರವಾದ ಪ್ರಾಣಿ ಎಂದು ಪೂಜೆ ಮಾಡುತ್ತೇವೆ. ಆದರೆ ಆಕಳಿಗೆ ಯಾವ ರೀತಿ ಆಹಾರ ಕೊಡಬೇಕು ಮೇವು ನೀರು ಕೊಡಬೇಕು ಎಂಬ ಭಾವನೆ ಸರಿಯಾಗಿ ಇರುವುದಿಲ್ಲ. ಆಕಳು ನಮಗೆ ಪವಿತ್ರವಾದುದು ಆಗಿದ್ದರೂ ಕೂಡ ಅದು ನೀರು ಮೇವು ಇಲ್ಲದೆ ಸಾಯುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ರೈತರು ದನಗಳಿಗೆ ಸರಿಯಾಗಿ ಮೇವು ಹಾಕಿರಿ ಅಂದರೆ ನಮ್ಮ ಮಕ್ಕಳಿಗೆ ಸರಿಯಾಗಿ ಊಟ ಸಿಕ್ಕುವುದಿಲ್ಲ ಅಂದಮೇಲೆ ದನಗಳಿಗೆ ಏನು ಕೊಡುವುದಕ್ಕೆ ಸಾಧ್ಯವಿದೆ ! ಹಳ್ಳಿಗಳಲ್ಲಿ ಇಂದು ದನಗಳಿಗೆ ಮೇವು ಹಾಕುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆ ಬಹು ಉಗ್ರ ಮತ್ತು ಗಂಭೀರವಾಗಿದೆ.

ಹಾಲಿನ ಉತ್ಪತ್ತಿಯನ್ನು ಯಾವರೀತಿ ಹೆಚ್ಚು ಮಾಡಲಿಕ್ಕೆ ಶಕ್ಯವಿದೆ ಎನ್ನುವುದು ಸಮಸ್ಯೆಯಾಗಿದೆ. ಅದರ ಸಲುವಾಗಿ ಸರ್ಕಾರದವರು ಈ ದಸೆಯಲ್ಲಿ ಹೆಚ್ಚು ಗಮನ ಕೊಡಬೇಕು. ದನಗಳಿಗೆ ರೋಗರುಜಿನಗಳು ಬಂದರೆ ಅವುಗಳಿಗೆ ಚಿಕಿತ್ಸೆ ಮಾಡಿಸಲು ಹೆಚ್ಚು ದವಾಖಾನೆಗಳಿಲ್ಲ. ಜಿಲ್ಲೆಯಲ್ಲಿ ಎರಡು ಮೂರು ವೆಟೆರಿನರಿ ದವಾಖಾನೆಗಳಿರುತ್ತವೆ. ರೈತರು ಕಷ್ಟಜೀವಿಗಳಾದ್ದರಿಂದ ದನಗಳನ್ನು ದವಾಖಾನೆಗೆ ತೆಗೆದುಕೊಂಡು ಹೋಗುವಂಥ ಸ್ಥಿತಿಯಲ್ಲಿರುವುದಿಲ್ಲ. ಪ್ರತಿಯೊಂದು ಹಳ್ಳಿಯ ರೈತರ ತೋಟ, ಹೊಲಗಳಿಗೆ ಹೋಗಿ ದನಕರುಗಳು ಯಾವರೀತಿ ಇವೆ ಎಂದು ಎಂಟು ದಿನಗಳಿಗೊಮ್ಮೆ, 15 ದಿನಕ್ಕೊಮ್ಮೆ ಪರೀಕ್ಷೆ ಮಾಡುವಂಥ ವ್ಯವಸ್ಥೆ ಬೇಕು. ಇದರಿಂದ ದನಗಳು ಹೆಚ್ಚು ಆರೋಗ್ಯವಾಗಿರಲಿಕ್ಕೆ ಸಾಧ್ಯವಿದೆ. ಎಷ್ಟೋ ಕಡೆ ದನಗಳು ರೋಗದಿಂದ ನರಳುತ್ತಿರುವಾಗ ಅವುಗಳಿಗೆ ಔಷಧಿ ಕೂಡ ಮುಟ್ಟುವುದಿಲ್ಲ. ವಿಜ್ಞಾನದ ದೃಷ್ಟಿಯಿಂದ ನಮ್ಮ ದೇಶ ತನ್ನೂ ಎಷ್ಟು ಮುಂದುವರಿಯಬೇಕಾಗಿತ್ತೋ ಅಷ್ಟು ಮುಂದುವರಿದಿಲ್ಲ. ದನಗಳಿಗೆ ಯಾವುದಾದರೂ ಒಂದು ರೋಗ ಬಂದರೆ ಮರೆಗವ್ವನ ವ.ರೆಹೊಕ್ಕು ದೇವರ ಪ್ರಸಾದ ತಂದು ದನಗಳಿಗೆ ಹಚ್ಚುವಂಥ ಜನರು ಇದ್ದಾರೆ. ನಮ್ಮ ರೈತರು ಬಹಳ ಹಿಂದುಳಿದಿದ್ದಾರೆ. ಅವರಲ್ಲಿ ವಿಚಾರಕ್ರಾಂತಿಯಾಗಬೇಕಾಗಿದೆ. ಇದು ಸರ್ಕಾರದವರ ಹೊಣೆಯಾಗಿದೆ. ಸರ್ಕಾರದಲ್ಲಿ ವಿಚಾರಕ್ರಾಂತಿಯಾಗದೆ ರೈತರಲ್ಲಿ ವಿಚಾರ ಕ್ರಾಂತಿ ಆಗಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗಿದೆ.

ಹುಲ್ಲುಗಾವಲುಗಳನ್ನು ಕಡಮೆ ಮಾಡುತ್ತಿದ್ದಾರೆ. ಇದರಿಂದ ಆಕಳುಗಳಿಗೆ, ಎಮ್ಮೆಗಳಿಗೆ ಸರಿಯಾದ ಆಹಾರ ಒದಗುತ್ತಿಲ್ಲ. ಮೇವು, ಹಿಂಡಿ, ಕಡಿಕೆ ಇವುಗಳನ್ನು ಮನೆಗಳಲ್ಲಿ ಕೊಡಬಹುದು. ಆದರೆ ಮಾನಸಿಕವಾಗಿ ಪ್ರಬಲವಾದ ಶಕ್ತಿ ಇರುವುದರಿಂದ ಅವುಗಳು ಹೊರಗೆ ಹೋಗಿ ಹುಲ್ಲು ಮೇಯ್ದು ಬರಬೇಕಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಕುರಿಗಳ ಸಂಖ್ಯೆ ಬಹಳ ಇದೆ. ಅವುಗಳಿಗೆ ಮುಖ್ಯವಾಗಿ ಬೇರೆ ಯಾವುದೂ ಮೇವು ಇರುವುದಿಲ್ಲ. ಹುಲ್ಲುಗಾವಲಿನ ಮೇಲೆಯೇ ಅವು ಇರಬೇಕಾಗಿದೆ. ಅಂಥ ಭಾಗದಲ್ಲಿ ಸರ್ಕಾರದವರು, ಅರಣ್ಯ ಖಾತೆಯವರೂ, ರೆವೆನ್ಯೂ ಖಾತೆಯವರೂ ಏನು ಮಾಡಿದ್ದಾರೆಂದರೆ ಅನಿಮಲ್ ಹಸ್ಬೆಂಡ್ರಿ ಇಲಾಖೆಯವರನ್ನು ಕೇಳದೆ ಮತ್ತು ವಿಚಾರಿಸದೆ ಭೂತನಾಳು ಗ್ರಾಮದ ಕೆರೆಯ ಸುತ್ತುಮುತ್ತಲಿನ ಐದಾರು ನೂರು ಎಕರೆ ಜಮೀನನ್ನು ಫಾರೆಸ್ಟಿಗೆ ಕೊಟ್ಟಿದ್ದಾರೆ. ದುರ್ಗಾ, ಇಟ್ಟಂಗಿಹಾಳ, ಕರಡಿದೊಡ್ಡಿ, ಭೂತನಾಳ, ತಾಂಡ ಮತ್ತು ಅರಕೇರಿ ಹೀಗೆ ಮೂರು ನಾಲ್ಕು ಐದು ಊರುಗಳಲ್ಲಿ ಕುರುಬರ ಜನಾಂಗವಿದೆ. ಕುರಿಗಳಿಂದಲೇ ಉಪಜೀವನ ಮಾಡುವ 10-15 ಸಾವಿರ ಜನರಿದ್ದಾರೆ. ಅನಿಮಲ್ ಹಸ್ಬೆಂಡ್ರಿ ಇಲಾಖೆಯನ್ನು ಕೇಳಲಾರದೆ ಫಾರೆಸ್ಟ್ ಬೆಳಸಬೇಕೆಂದು ಜಮೀನು ಕೊಟ್ಟಿರುವುದನ್ನು ನೋಡಿ ನಿಜವಾಗಿಯೂ ಬಹಳ ಖೇದವೆನಿಸುತ್ತದೆ. ಸರಕಾರದವರು ಷೀಪ್ ರೇರಿಂಗ್, ಷೀಪ್ (sheep) ಡೆವಲಪ್‌ಮೆಂಟ್ ಸ್ಕೀಂ ಎಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಯಾರು ತಲೆ ತಲಾಂತರದಿಂದ ಕುರಿಸಾಕುವ ಕಸಬು ಇದ್ದು ಹೆಚ್ಚಿನ ಕುರಿಗಳನ್ನು ಸಾಕುತ್ತಿದ್ದಾರೆಯೋ ಅಂಥವರಿಗೆ ಸರಕಾರ ಸಹಾಯ ಮಾಡುತ್ತಿಲ್ಲ. ಅವರು ಸಾಕುತ್ತಿರುವ ಕುರಿಗಳಿಗೆ ಹುಲ್ಲು ಮೇಯಿಸುವುದಕ್ಕೆ ಜಾಗ ಕೊಟ್ಟಿಲ್ಲ. ಆ ಭಾಗದಲ್ಲಿ ಅರಣ್ಯ ಮಾಡುವುದರಿಂದ ಯಾವ ಹೆಚ್ಚು ಫಾಯದೆ ಇಲ್ಲ, ಆದರೂ ಅರಣ್ಯವನ್ನು ಬೆಳೆಸುತ್ತಾರಂತೆ ಅಲ್ಲಿ ಮಳೆಯಾಗುವುದಿಲ್ಲ, ಸಸಿಗಳು ಚೆನ್ನಾಗಿ ಬರುವುದಿಲ್ಲ. ಈಗಾಗಲೇ ಹಚ್ಚಿದ ಸಸಿಗಳೆಲ್ಲಾ

ಒಣಗಿ ಹೋಗಿವೆ. ಒಂದು ನೂರು ಎಕರೆಯಲ್ಲಿ ಹಚ್ಚಿದ ಸಸಿಗಳು ಒಣಗಿ ಹೋಗಿವೆ. ಒಂದು ಕುರಿಯ ಬೆಲೆ ಇವತ್ತು 100-150 ರೂಪಾಯಿ ಆಗುತ್ತದೆ. ಒಬ್ಬ ಕುರುಬನ ಹತ್ತಿರ ಎರಡು ಮೂರು ಸಾವಿರ ಕುರಿಗಳಿರುತ್ತವೆ. ದನಗಳು ಮೇಯುವುದಕ್ಕೆ ಒಂದೆರಡು ಮೈಲು ಸಾಕು ದನಗಳು ನಿಂತು ಮೇಯುತ್ತವೆ, ಆದರೆ ಕುರಿಗಳು ಒಂದೇಕಡೆ ನಿಂತು ಮೇಯುದೆ, ಅವು ಮೇಯಲು ನಾಲ್ಕೈದಾರು ಮೈಲಿ ಹೋಗಬೇಕು. ಒಬ್ಬ ಕುರುಬ ಮುಂಜಾನೆ ಮನೆ ಬಿಟ್ಟರೆ ಎಂಟು ಹತ್ತು ಮೈಲಿ ಅಡ್ಡಾಡಿ ರಾತ್ರಿ ಮನೆಗೆ ಬರುತ್ತಾನೆ. ಸೀಮಿತವಾದ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸುವುದಕ್ಕಾಗುವುದಿಲ್ಲ. ಹೀಗಿರುವಾಗ ಅರಣ್ಯವನ್ನು ಬೆಳೆಸುವುದಕ್ಕೆ ಜಮೀನು ಕೊಡುವಾಗ ಅನಿಮಲ್ ಹಸ್ಬೆಂಡ್ರಿ ಇಲಾಖೆಯವರ ಟೆಕ್ನಿಕಲ್ ಒಪಿನಿಯನ್ ತೆಗೆದುಕೊಂಡು ಕೊಟ್ಟಿಲ್ಲ. ಇದನ್ನು ವಿಚಾರ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಕುರಿಗಳಿಂದ ಎಷ್ಟು ಲಾಭ ವಿದೆ ಎಂದು ವಿಚಾರ ಮಾಡಬೇಕೆಂದು ಒತ್ತಾಯದಿಂದ ಹೇಳುತ್ತೇನೆ. ಕುರಿಗಳಿಂದ ಉಣ್ಣೆ ಸಿಕ್ಕು ತ್ತದೆ. ಬಿಜಾಪುರ ಜಿಲ್ಲೆಯ ಕಂಬಳಿಗಳು ಬಹಳ ಪ್ರಸಿದ್ಧ ಇವೆ. ಇವುಗಳಿಂದ ಆಹಾರ ಸವ ಸ್ಯೆಗೂ ಅನುಕೂಲವಾಗುತ್ತದೆ. ಅದರ ಮಾಂಸ ಆಹಾರಕ್ಕೆ ಉಪಯೋಗವಾಗುತ್ತದೆ. ಅದರ ಚರ್ಮವೂ ಉದ್ಯೋಗಗಳಿಗೆ ಉಪಯೋಗಕ್ಕೆ ಬರುತ್ತದೆ. ಹೀಗೆ ಮೂರು ರೀತಿಯಲ್ಲಿ ಉಪಯೋಗವಾಗುತ್ತದೆ. ಈ ಪ್ರದೇಶದಲ್ಲಿ ಕೆರೆ ಇರುವುದರಿಂದ ಹತ್ತಾರು ಊರುಗಳ ಕುರಿಗಳಿಗೆ ಅನುಕೂಲವಾಗಿದೆ. ಹುಲ್ಲು ಗಾವಲು ಪ್ರದೇಶವನ್ನು ಹುಲ್ಲು ಬೆಳೆಯುವುದಕ್ಕೇ ಬಿಟ್ಟರೆ ಅದರಿಂದ 15-20 ಸಾವಿರ ಕುರುಬರಿಗೆ ಉಪಕಾರ ಮಾಡಿದಂತಾಗುತ್ತದೆ; ಅವರ ಉಪಜೀವನಕ್ಕೆ ಉಪಕಾರ ಮಾಡಿದಂತಾಗುತ್ತದೆ. ಅದರ ಸಲುವಾಗಿ ಮಾನ್ಯ ಸರ್ಕಾರದವರು ಅನಿಮಲ್ ಹಸ್ಬೆಂಡ್ರಿ ಇಲಾಖೆಯ ಮಂತ್ರಿಗಳೂ ಈ ವಿಚಾರವನ್ನು ಮನಸ್ಸಿಗೆ ತೆಗೆದುಕೊಂಡು ಹುಲ್ಲುಗಾವಲು ಪ್ರದೇಶವನ್ನು ಹುಲ್ಲು ಬೆಳೆಯುವುದಕ್ಕೇ ಬಿಟ್ಟು ಕೊಡಬೇಕು ಎಂದು ಸೂಚನೆ ಮಾಡುತ್ತಿದ್ದೇನೆ.

ಮುಖ್ಯವಾಗಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಕೇಂದ್ರಗಳನ್ನು ನಾಲ್ಕು ನಾಲ್ಕು ಅಥವಾ ಹತ್ತು ಹತ್ತು ಊರುಗಳಿಗೆ ಒಂದೊಂದು ಇಟ್ಟರೆ ಆ ಕೇಂದ್ರಗಳಿಂದ ಸುಧಾರಿಸಿದ ಪದ್ಧತಿಯಿಂದ ಆಕಳುಗಳನ್ನು ತರಲಿಕ್ಕೆ ಸಾಧ್ಯವಿದೆ. ಅದರ ಸಲುವಾಗಿ ಸರ್ಕಾರದವರು ವಿಚಾರ ಮಾಡಬೇಕು.

ರೈತರಿಗೆ ಒಳ್ಳೆಯ ರೀತಿಯಿಂದ ನವೀನ ವಿಜ್ಞಾನದಲ್ಲಿ ತಿಳುವಳಿಕೆಯನ್ನು ಕೊಡುವುದು, ರೈತರು ಉತ್ತಮವಾದ ಹಾಲನ್ನು ಯಾವ ರೀತಿಯಿಂದ ಹೆಚ್ಚು ಉತ್ಪಾದನೆ ಮಾಡಬೇಕು, ಆಕಳು ಗಳನ್ನು ಯಾವರೀತಿ ಬೆಳೆಸಬೇಕು, ಕುರಿಗಳಿಗೆ ಯಾವ ರೀತಿಯಿಂದ ಅನುಕೂಲತೆ ಮಾಡಿಕೊಡಬೇಕು, ಹಾಗೆ ಮಾಡಿ ಕೊಡುವುದರಿಂದ ನಮ್ಮ ಸಮಾಜಕ್ಕೆ ಹೇಗೆ ಲಾಭವಿದೆ, ಆರ್ಥಿಕ ಸಮಸ್ಯೆ ಮತ್ತು ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೇಗೆ ಸಾಧ್ಯವಿದೆ ಎನ್ನುವುದನ್ನೂ ತಿಳಿಸಬೇಕು. ರೈತರಿಗೆ ಮತ್ತು ಕುರುಬ ಜನಾಂಗಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟರೆ ಅದರಿಂದ ಕನ್ನಡಿಗರಿಗೂ ಮತ್ತು ಕನ್ನಡ ರಾಜ್ಯಕ್ಕೂ ಲಾಭ ಆಗುತ್ತದೆ ಎಂದು ಹೇಳಿ, ಅಧ್ಯಕ್ಷರು ಇಲ್ಲಿಯವರೆಗೆ ಐದು ನಿಮಿಷ ಮಾತ ನಾಡಲು ವೇಳೆ ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು.

ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ಪಶುಪಾಲನೆ ಇಲಾಖೆಗೆ 3,44,49,000 ರೂಪಾಯಿಗಳು ಬೇಕಾಗಿದೆ ಎಂದು ಮಂಡಿಸಿರುವ ಬೇಡಿಕೆಯನ್ನು ನಾನು ಸಂಪೂ ರ್ಣವಾಗಿ ಸಮರ್ಥಿಸುತ್ತೇನೆ. ಅವರು ಇಲ್ಲಿ ಕೇಳಿರುವ ಹಣ ಇನ್ನೂ ಸಾಲದು. ಅವಕಾಶ ಬಂದ ಕಾಲದಲ್ಲಿ ಮುಂದೆ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಹೊಸ ಹೊಸದಾಗಿ ಡೈರಿ ಫಾರಂ ಹೆಚ್ಚಾಗಿ ಬರುತ್ತಿವೆ. ಇದಕ್ಕಾಗಿ ಅಲ್ಲಲ್ಲಿ ಚಿಲಿಂಗ್ ಸೆಂಟರ್‌ಗಳನ್ನು ಕಟ್ಟುತ್ತಿದ್ದಾರೆ. ಆನೇಕಲ್‌ನಲ್ಲಿ ಒಂದು ಚಿಲಿಂಗ್ ಸೆಂಟರ್ ಇದೆ. ಅಲ್ಲಿಗೆ ಸ್ವಲ್ಪ ಹಾಲು ಬರುತ್ತಿದೆ. ಎಲ್ಲ ಕಾಲದಲ್ಲಿಯೂ ಒಂದೇ ರೀತಿಯಾಗಿ ಎಷ್ಟು ಹಾಲು ಬರ ಬೇಕೋ ಅಷ್ಟು ಬರುತ್ತಿಲ್ಲ. ಬೇಸಿಗೆ ಕಾಲದಲ್ಲಿ ಬಹಳಮಟ್ಟಿಗೆ ಹಾಲು ಕೊಡತಕ್ಕ ದನಗಳು ಕರೆ ಯುವುದನ್ನು ನಿಲ್ಲಿಸಿಬಿಡುತ್ತವೆ. ಅದಕ್ಕೋಸ್ಕರ ಸರಿಯಾದ ಯೋಜನೆಯನ್ನು ಮಾಡಿಕೊಂಡು ಬೇಸಿಗೆ ಕಾಲದಲ್ಲಿ ಕೂಡ ಮಳೆಗಾಲದಲ್ಲಿ ಒದಗುವ ಹಾಗೆ ಹಾಲು ಒದಗುವಂತೆ ಮಾಡುವುದಕ್ಕೆ ಪರಿಣತರು ಯೋಚನೆ ಮಾಡಬೇಕು. ಇದಕ್ಕೆ ರೈತರ ಸಹಕಾರವನ್ನು ಪಡೆಯಬೇಕು. ಮತ್ತು ಅವರು ಹೆಚ್ಚು ಹೆಚ್ಚು ದನಗಳನ್ನು ಸಾಕುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ದನಗಳಿಗೆ ಅನೇಕ ವೇಳೆ ಕಾಯಿಲೆ ಬರುತ್ತದೆ. ಇವುಗಳನ್ನು ಸಾಕತಕ್ಕ ರೈತನು ಅನೇಕವೇಳೆ ಕಷ್ಟ ಸ್ಥಿತಿಯಲ್ಲಿರುತ್ತಾನೆ. ಇದನ್ನು ತಪ್ಪಿಸಲು ದನಗಳ ಇನ್‌ಷೂರೆನ್ಸ್ ಮಾಡಬೇಕು ಮತ್ತು ರೈತನು ಕಷ್ಟಕ್ಕೆ ಸಿಕ್ಕದ ಹಾಗೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ನನ್ನ ಕ್ಷೇತ್ರದಲ್ಲಿ ಪಶುವೈದ್ಯ ಶಾಲೆಗಳಿವೆ. ಅವುಗಳಲ್ಲಿ ಸಾಕಾದಷ್ಟು ಔಷಧಿಗಳಿಲ್ಲ, ಉಪಕರಣ ಗಳಿಲ್ಲ, ಇನ್‌ಜೆಕ್ಷನ್ ಕೊಡತಕ್ಕ ಉಪಕರಣಗಳಿಲ್ಲ. ಯಾವುದೋ ಕಾಲದಲ್ಲಿ ಕೊಟ್ಟಿರತಕ್ಕ ಉಪಕರಣ

(ಶ್ರೀ ಆರ್. ಮುನಿಸ್ವಾಮಯ್ಯ)

ಗಳಿಂದ ಏನೂ ಅನುಕೂಲವಾಗುವುದಿಲ್ಲ. ಇವುಗಳನ್ನೆಲ್ಲಾ ಸರಿಪಡಿಸಿ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರವಾದ ಅನೇಕಲ್‌ನಲ್ಲಿ ಮಾತ್ರವಲ್ಲ, ಮೈಸೂರು ದೇಶದಲ್ಲಿ ಎಲ್ಲ ಕಡೆಯೂ ಅದೇ ರೀತಿ ಇದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಸರ್ಕಾರದವರು ಹೆಚ್ಚು ಲಕ್ಷ್ಯ ಕೊಟ್ಟು ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಕೆಲವಾರು ವರ್ಷಗಳ ಹಿಂದೆ ಸ್ಟಾಕ್‌ಮೆನ್ ಟ್ರೈನಿಂಗ್ ಕೊಟ್ಟರು. ಈಗ ಅದು ನಿಂತು ಹೋಗಿದೆ. ಪುನಃ ಅದನ್ನು ಪ್ರಾರಂಭಮಾಡಿ ಯುವಕರಾದವರಿಗೆ ಸ್ಟಾಕ್‌ಮೆನ್ ಟ್ರೇನಿಂಗ್ ಕೊಟ್ಟು ದನಗಳ ಸಾಕಾಣಿಕೆಯಲ್ಲಿ, ದನಗಳ ರಕ್ಷಣೆಯಲ್ಲಿ ಆಸಕ್ತಿಯನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ.

ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಮಾನ್ಯ ಪಶುಪಾಲನಾ ಶಾಖೆಯ ಮಂತ್ರಿಗಳು 15 ಸ್ಥಳ ಗಳಲ್ಲಿರುವ ವೆಟರಿನರಿ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ ಎಂದು ಹೇಳಿದರು. ಆದಷ್ಟು ಜಾಗ್ರತೆ ಯಾಗಿ ಹೊಸದಾಗಿ ತಯಾರಾಗಿರತಕ್ಕ ಮತ್ತು ಕೆಲಸವನ್ನು ಹುಡುಕಿಕೊಂಡು ಕಾದಿರತಕ್ಕ ವೈದ್ಯ ಪದವೀಧರರಿಗೆ ಆಹ್ವಾನಕೊಟ್ಟು ಖಾಲಿ ಇರುವ ಸ್ಥಳಗಳನ್ನು ಭರ್ತಿಮಾಡಬೇಕೆಂದು ಹೇಳುತ್ತೇನೆ. ಹಿಂದೆ ಗೋಮಾಳ, ಹುಲ್ಲುಗಾವಲು ಬೇಕಾದಷ್ಟಿತ್ತು, ಅದು ಉಳುಮೆಯಾಗಿವೆ, ಕೆಲವರಿಗೆ ವ್ಯವ ಸಾಯಕ್ಕೆ ಕೊಡಲ್ಪಟ್ಟಿದೆ, ಈಗ ಅದರ ವಿಸ್ತೀರ್ಣ ಕಡಮೆಯಾಗಿದೆ. ಇದರಿಂದ ದನಗಳಿಗೆ ಮೇವಿಗೆ ತೊಂದರೆಯಾಗಿರುವುದನ್ನು ತಪ್ಪಿಸಲು ರೈತರಿಗೆ ಏನಾದರೂ ಉಪಾಯ ಸೂಚಿಸಬೇಕು, ಅವರು ತಮ್ಮ ಜಮೀನಿನಲ್ಲೇ ದನಗಳ ಮೇವಿಗೆ ಬೇಕಾದ ಹುಲ್ಲನ್ನು ಬೆಳೆಸುವಂತೆ ತಿಳಿಸಬೇಕು, ಈಗ ಡೇನಿಷ್ ದನ, ಸಿಂಧಿ ತಳಿಗಳು ಮುಂತಾದುವನ್ನು ಮನೆಗಳಲ್ಲೇ ಸಾಕಬೇಕಾಗಿದೆ. ಅದಕ್ಕಾಗಿ ಆ ದನಗಳಿಗೆ ಬೇಕಾದ ಬೂಸ ಮೊದಲಾದ ಆಹಾರವನ್ನು ಒದಗಿಸಬೇಕಾದ್ದು ಅವಶ್ಯಕವಾಗಿದೆ, ಅವು ಈಗ ಸರಿಯಾಗಿ ಸಿಕ್ಕುತ್ತಿಲ್ಲ ಎಂಬ ಕೂಗಿದೆ, ಬೆಂಗಳೂರಿನಲ್ಲಿರುವ ದನಗಳಿಗೇ ಸಾಕಾದಷ್ಟು ಬೂಸ ಸಿಕ್ಕುತ್ತಿಲ್ಲ. ಹಾಗೆಯೇ ಅನೇಕಲ್ಲು, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿಗಳಲ್ಲಿ ಸಿಂಧಿ ಮತ್ತು ಹೊರದೇಶದ ತಳಿ ದನಗಳನ್ನು ಸಾಕುವವರು ಅವುಗಳನ್ನು ಹೊರಗೆ ಬಿಡದೆ ಸಾಕಬೇಕಾಗಿದೆ, ಅವು ಗಳಿಗೆ ಸಹ ಸರಕಾರ ರಕ್ಷಣೆ ಕೊಟ್ಟು ಬೂಸ ಮೊದಲಾದ ಆಹಾರ ಪದಾರ್ಥಗಳನ್ನು ಅವುಗಳಿಗೆ ಆಯಾ ತಾಲ್ಲೂಕುಗಳಿಗೆ ಒದಗಿಸಿ ಸೊಸೈಟಿಗಳ ಮೂಲಕವಾದರೂ ಸರಬರಾಯಿ ಮಾಡಬೇಕು.

ಕೃತಕ ಗರ್ಭದಾನ ಕೇಂದ್ರಗಳ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಬೇಕು, ದನ ಗಳು ಬೆದೆಗೆ ಬಂದಾಗ ಕೃತಕ ವೀರ್ಯ ಸಿಕ್ಕದಿದ್ದರೆ ತೊಂದರೆಯಾಗುತ್ತದೆ. ಅದಕ್ಕಾಗಿ ಸಾಧ್ಯ ವಾದಷ್ಟು ಜಾಗ್ರತೆಯಾಗಿ ಕೃತಕ ವೀರ್ಯವನ್ನು ಒದಗಿಸಿ ದನಗಳು ಕೆಟ್ಟುಹೋಗದಂತೆ ನೋಡಿ ಕೊಳ್ಳಬೇಕು.

ಇದುವರೆಗೆ ಕುರಿಗಳನ್ನು ಸಾಕುವುದಕ್ಕೆ ಹೆಚ್ಚು ರಕ್ಷಣೆ ಕೊಟ್ಟಂತೆ ಕಾಣಲಿಲ್ಲ. ಹಲವಾರು ವರ್ಷಗಳಿಂದ ಬನ್ನೂರು ಕುರಿಗಳಾಗಲಿ ಹೊರದೇಶದ ಕುರಿಗಳಾಗಲಿ ಹಂಚುವುದನ್ನು ನಿಲ್ಲಿಸಿದ್ದಾರೆ. ಪುನಃ ಅವನ್ನು ಹಂಚುವುದಕ್ಕೆ ಏರ್ಪಾಡು ಮಾಡಿ ಒಳ್ಳೆಯ ಮಾಂಸ ಮತ್ತು ಉಣ್ಣೆಯನ್ನು ಉತ್ಪತ್ತಿ ಮಾಡಲು ಅವಕಾಶಮಾಡಿಕೊಡಬೇಕು. ಕೋಳಿ ಸಾಕಾಣಿಕೆ ಬಗ್ಗೆ ಆನೇಕಲ್ ತಾಲ್ಲೂಕು ರೈತರಿಗೆ ಅರಿವಿದೆ, ಅವರಿಗೆ ಬಿಳಿ ಕೋಳಿ, ಲೆಗ್ ಹಾರ್ನ್ ಕೋಳಿ ಮುಂತಾದ ಉತ್ತಮ ಜಾತಿಯ ಕೋಳಿ ಗಳನ್ನು ಹಂಚಿ ಸೊಸೈಟಿ ಮೂಲಕ ಅಥವಾ ಪಶುಪಾಲನಾ ಇಲಾಖೆಯ ಮೂಲಕ ಅವು ಸುಲಭ ಬೆಲೆ ಯಲ್ಲಿ ಸಾಕುವವರಿಗೆ ದೊರೆಯುವಂತೆ ಮಾಡಿ ಹೆಚ್ಚು ಮೊಟ್ಟೆಗಳನ್ನು ತಯಾರಿಸಲು ಅವಕಾಶಮಾಡ ಬೇಕು. ಜನರಲ್ಲಿರುವ ಆಸಕ್ತಿ ಹೋಗುವುದಕ್ಕೆ ಮೊದಲು ಅದಕ್ಕೆ ಬೇಕಾದ ಪ್ರೋತ್ಸಾಹ ಕೊಟ್ಟು ಕೋಳಿ ಸಾಕುವ ಉದ್ಯೋಗದಲ್ಲಿ ಪ್ರಗತಿಯಾಗುವಂತೆ ನೋಡಿಕೊಳ್ಳಬೇಕು. ಹೀಗೆ ಮಾಡಿ ರೈತರಿಗೆ ಎರಡು ಕಾಸು ಸಂಪಾದನೆಯಾಗುವಂತೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(MR. SPEAKER in the Chair)

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಪಶುಪಾಲನೆ ಹಾಗೂ ಕೋಳಿ ಸಾಕಾಣಿಕೆ ವಿಷಯದಲ್ಲಿ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಇದಕ್ಕೆ ಪೂರ್ವದಲ್ಲಿ ಕೈರಾನ್‌ರವರ ಒಂದು ಶ್ಲೋಗನ್ ಹೇಳುತ್ತೇನೆ. ಅವರು ಈ ರೀತಿಯಾಗಿ ಹೇಳಿದರು:

"I will be too glad to see a day, when every Punjabi will have two glasses of milk if he is a vegetarian, will have two eggs if he is a non-vegetarian."

ಈ ಚುಳುವಳಿಯನ್ನು ಅವರು ಕೈಕೊಂಡರು. ಕೈರಾನ್‌ರವರ ಬಗ್ಗೆ ಅನೇಕ ಅಪಾದನೆಗಳಿದ್ದರೂ ಕೂಡ ಜನರ ಹಿತದೃಷ್ಟಿಯಿಂದ ಅವರು ಕೈಕೊಂಡ ಕಾರ್ಯಗಳ ಬಗ್ಗೆ ಅವರ ವಿರೋಧಿಗಳು ಕೂಡ ಅಲ್ಲಗಳೆಯುವಂತಿಲ್ಲ. ಅದೇ ರೀತಿಯಲ್ಲಿ ಇದೊಂದು ವಿಷಯದಲ್ಲಾದರೂ ಶ್ರೀ ದೇವರಾಜ ಅರಸ್‌ರವರು ಸಮರ್ಥ ರೀತಿಯಿಂದ ಕೆಲಸಮಾಡಿ ಜನರಿಗೆ ಅನುಕೂಲವಾಗುವಂತೆ ಕಾರ್ಯಕ್ರಮ ಕೈಕೊಂಡು ಜನರು ಅವರನ್ನೂ, ಅವರ ಮಂತ್ರಿಮಂಡಲವನ್ನೂ ಇದೊಂದು ವಿಷಯದಲ್ಲಾದರೂ ಮೆಚ್ಚುವಂತೆ ನಡೆದುಕೊಳ್ಳುವರೆಂದು ನಾನು ಆಶಿಸುತ್ತೇನೆ. ಈ ದಿವಸ ಸರಕಾರ ಮಂಡಿಸಿದ ಡಿಮ್ಯಾಂಡುಗಳಿಗೆ ಹಣ ಕಡಿಮೆಯಾಗಿದೆ ಎಂಬ ಅಭಿಪ್ರಾಯವಿದ್ದರೂ ಅವನ್ನು ವಿರೋಧಿಸುತ್ತೇನೆ. ಏಕೆಂದರೆ ಜನರಿಗೆ ಅವರ ಹಿತದೃಷ್ಟಿಯಿಂದ ಸಮರ್ಪಕವಾದ ಯೋಜನೆ ಇದರಲ್ಲಿ ಅಡಕವಾಗಿಲ್ಲ ಅದರ ಸರಕಾರದ ಮುಂಜಾಗ್ರತೆ ಅಭಾವ ಇದರಲ್ಲಿ ಕಂಡುಬರುವುದರಿಂದ ವಿರೋಧಿಸುತ್ತಿದ್ದೇನೆ.

ಇಂದು ದನಗಳ ಬಗ್ಗೆ ಹೇಳುವುದಾದರೆ ಅವುಗಳ ಸಂಖ್ಯೆಯನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲನೆಮಾಡಿದರೆ 3 ವರ್ಷಗಳ ಹಿಂದೆ ಇದ್ದುದಕ್ಕಿಂತ 2-3 ಲಕ್ಷ ಮಾತ್ರ ಹೆಚ್ಚಿರುತ್ತದೆ. ಇದು ಯಾವುದೇ ರೀತಿಯಿಂದ ಸಮರ್ಪಕವಾಗಿಲ್ಲ. ದನಗಳ ಸಂಖ್ಯೆ ಬೆಳೆಯದಿದ್ದರೆ ನಮಗೆ ಬೇಕಾದ ಗೊಬ್ಬರ ಸಿಕ್ಕುವುದಿಲ್ಲ, ಹಾಲು ದೊರೆಯುವುದಿಲ್ಲ, ಮನುಷ್ಯರ ಆರೋಗ್ಯದಲ್ಲಿ ಸುಧಾರಣೆಯಾಗುವುದಿಲ್ಲ. ದವಾಖಾನೆಗೆ ಹೋಗುವುದನ್ನು ತಪ್ಪಿಸಬೇಕಾದರೆ ಹಾಲು ಹೆಚ್ಚಾಗಿ ಪೂರೈಸಬೇಕು. ಡೈರಿ ಅಭಿವೃದ್ಧಿಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನನ್ನ ಮಿತ್ರರಾದ ಘೋರ್ಪಡೆಯವರು ಒಳ್ಳೆಯ ಸಲಹೆಗಳನ್ನು ಈ ಸಭೆಗೆ ಕೊಟ್ಟಿದ್ದಾರೆ. ಅದರಂತೆ ಸರಕಾರ ಸೂಕ್ತ ಕ್ರಮ ಕೈಗೊಂಡರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಸರಕಾರ ಗಮನಿಸಬೇಕು. ಸಹಕಾರಿ ರಂಗದಲ್ಲಿ ಡೈರಿ ಅಭಿವೃದ್ಧಿಮಾಡಲು ಕೇವಲ ಸಹಕಾರ ಸಂಘಗಳ ಸ್ಥಾಪನೆಗೆ ಕೇವಲ 400–500 ರೂಪಾಯಿಗಳನ್ನು ಕೊಟ್ಟರೆ ಉದ್ಧಾರವಾಗುವುದಿಲ್ಲ. ನಿಜವಾಗಿಯೂ ಉದ್ಧಾರವಾಗಬೇಕಾದರೆ ರೈತರಿಗೆ ದನ ಕೊಳ್ಳುವುದಕ್ಕೆ ಬೇಕಾದ ಸಾಲ (ಸಹಾಯ ಧನದ ಮಾದರಿಯಲ್ಲಿ) ರೈತರಿಗೆ ನೇರವಾಗಿ ಕೊಡುವ ಯೋಜನೆಮಾಡಬೇಕು. ಸರಕಾರದವರು ಇಂದು ಸಹಕಾರ ಸಂಘಗಳ ಮೂಲಕ ಒಕ್ಕಲುತನದವರಿಗೆ ಅನೇಕ ವಿಧವಾದ ಸಾಲಗಳನ್ನು ಕೊಡುತ್ತಿದ್ದಾರೆ. ಆದರೆ ದುರ್ದೈವದಿಂದ ಒಕ್ಕಲಿಗರಿಗೆ ಇದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಕೆಲವು ಸಹಕಾರ ಸಂಘಗಳಲ್ಲಿ ನೂರು ರೂಪಾಯಿ, ಕೆಲವು ಬ್ಯಾಂಕುಗಳಲ್ಲಿ ಒಂದು ಸಾವಿರ ರೂಪಾಯಿ, ಕೊಡುತ್ತಿದ್ದಾರೆ. ಆದರೆ ಅದು ಸಾಲದು, ಇಂದು ಒಂದು ಉತ್ತಮ ದನಕ್ಕೆ 15 ನೂರು ರೂಪಾಯಿಯಾದರೂ ದನಗಳ ಖರೀದಿಗೆ ಬೇಕು. ಕಡಮೆ ಹಣ ಕೊಟ್ಟರೆ ಕೊಳ್ಳುವುದಕ್ಕೇ ಸಾಧ್ಯವಿಲ್ಲ. ಅದಕ್ಕೆ ತಕ್ಕಷ್ಟು ಕೊಟ್ಟು ರಕ್ಷಣೆ ನೀಡಿ ತಳಿ ಅಭಿವೃದ್ಧಿಮಾಡಲು ಅವಕಾಶ ಕೊಡಬೇಕು. ತಳಿ ಅಭಿವೃದ್ಧಿಮಾಡಲು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿಕೊಳ್ಳುವುದಕ್ಕೆ ಮತ್ತು ಬಡವರಿಗೆ ಸಹಾಯಮಾಡಲು ಅವಕಾಶಮಾಡಬೇಕು. ಇದಕ್ಕೆ ತಕ್ಕ ಯಂತ್ರೋಪಕರಣಗಳನ್ನೊಳಗೊಂಡ ಡೈರಿ ಪ್ರಾಜೆಕ್ಟ್ ನಿರ್ಮಿಸಬೇಕು ಹೀಗೆ ಮಾಡಿದರೆ ಪರಿಸ್ಥಿತಿ ಉತ್ತಮವಾಗಬಹುದು. ಇಷ್ಟೇ ಅಲ್ಲದೆ ಮನುಷ್ಯರಿಗೆ ಹೇಗೆ ಆಹಾರ ಅವಶ್ಯಕವೋ ಹಾಗೆಯೇ ಪಶುಗಳಿಗೂ ಕೂಡ ಅವಶ್ಯಕ, ಅದನ್ನು ಉತ್ಪತ್ತಿಮಾಡಲು ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಆದರೆ ಸಹಕಾರಿ ರಂಗದಲ್ಲಿ ಸ್ಥಾಪಿತವಾಗಿರುವ ಸಂಸ್ಥೆಗಳಿಗೆ ಅಡಗಲ್ಲಾಗುವುದು ತಪ್ಪಬೇಕು. ಅದೊಂದು ಇದೊಂದು ತಳಿ ಬೆಳೆಸಿದರೆ ಸಾಲದು, ಪರ ರಾಷ್ಟ್ರಗಳಲ್ಲಿ ಇರುವಂತೆ ಇಲ್ಲೂ ದನಗಳ ಅಭಿವೃದ್ಧಿಗೆ ಒಳ್ಳೆಯ ತಳಿಗಳು ದೊರೆಯುವಂತೆ ಮಾಡಲು ಸೂಕ್ತ ಕ್ರಮ ಕೈಕೊಳ್ಳಬೇಕು. ಕೆಲ ರಾಷ್ಟ್ರಗಳಲ್ಲಿ ದನಗಳಿಗೆ ತಿನ್ನಲು ಬಾದಾಮಿ ಸಹ ಕೊಡುವ ಪದ್ಧತಿ ಇದೆ. ಆದರೆ ನಮ್ಮಲ್ಲಿ ಬಾದಾಮಿ ಇರಲಿ, ದನಗಳಿಗೆ ಅತ್ಯಾವಶ್ಯಕವಾದ ಆಹಾರವನ್ನು ಕೂಡ ಹೊಟ್ಟೆತುಂಬ ಹಾಕಲು ಶಕ್ತಿಯಿಲ್ಲ. ಅದನ್ನಾದರೂ ಹಾಕಲು ಅವಕಾಶಮಾಡಿ ಸಮೃದ್ಧಿಯಾಗಿ ಗೋಸಂಪತ್ತು ದೊರೆಯುವಂತೆ ವ್ಯವಸ್ಥೆಮಾಡಬೇಕು. ಪ್ರಾಮುಖ್ಯವಾಗಿ ಬಸವಣ್ಣನ ಚಿತ್ರವನ್ನೇ ಆಶ್ರಯಿಸಿ ಚುನಾಯಿತರಾಗಿರುವ ಕಾಂಗ್ರೆಸ್ಸಿನವರಿಗಂತೂ ಆ ಎತ್ತಿನ ತಾಯಿಯ ಹಿತಾಭಿವೃದ್ಧಿಗಾಗಿ ಪ್ರಯತ್ನಿಸುವುದು ಅವರ ನೈತಿಕ ಹೊಣೆಯಾಗಿದೆ.

ಇದರ ಜೊತೆಗೆ ವೆಟರ್ನರಿ ಆಸ್ಪತ್ರೆಗಳಿರುವುದು ಸಾಲದು, ತಾಲ್ಲೂಕಿಗೆ ಒಂದೆರಡು ಆಸ್ಪತ್ರೆಯಿದ್ದರೆ ಸಾಕು ಎಂದು ಭಾವನೆ ಇದೆ. ಮನುಷ್ಯನಾದರೆ ಎಲ್ಲಾದರೂ ಹೋಗಿ ತಾನು ಮಾತನಾಡಲು ಶಕ್ತಿಯಿರುವುದರಿಂದ ಕಾಯಿಲೆಯಾದಾಗ ಔಷಧಿ ತೆಗೆದುಕೊಳ್ಳಬಲ್ಲ. ಆದರೆ ದನಗಳಿಗೆ ಆ ಶಕ್ತಿಯಿಲ್ಲ. ಆದುದರಿಂದ ದನಗಳಿಗೆ ರೋಗ ಬಂದಾಗ ಹರಡದಂತೆ ಮತ್ತು ಉಲ್ಬಣವಾಗದಂತೆ ನೋಡಿಕೊಳ್ಳಲು ಹೆಚ್ಚು ಆಸ್ಪತ್ರೆಗಳನ್ನು ಅವುಗಳಿಗಾಗಿ ತೆರೆಯುವುದು ಅವಶ್ಯಕ. ಈಗಿರುವ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಬೇಕು. ಅವುಗಳಿಗೆ ಸಂಚಾರಿ ವ್ಯಾನುಗಳನ್ನು ಒದಗಿಸಬೇಕು. ಇದರ ಅವಶ್ಯಕತೆ ಇದೆ. ತಾಲ್ಲೂಕು ಬೋರ್ಡಿನವರು ಅಥವಾ ಸಹಕಾರ ಸಂಘದವರು ಮೊಬೈಲ್ ವ್ಯಾನ್ ಇಟ್ಟು ಅದಕ್ಕೆ ಒಬ್ಬ ಅಧಿಕಾರಿಯನ್ನು ಹಾಕಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅದು

(ಶ್ರೀ ಕೆ. ಎಚ್. ಪಾಟೀಲ್)

ಸಂಚರಿಸಿ ದನಗಳಿಗೆ ಬೇಕಾದ ಔಷಧೋಪಚಾರಮಾಡಲು. ರಕ್ಷಣೆ ನೀಡಲು ಅವಕಾಶಮಾಡಬೇಕು. ಹೀಗೆ ಏರ್ಪಾಡುಮಾಡಿ ಇಡೀ ತಾಲ್ಲೂಕಿನ ದನಗಳ ರಕ್ಷಣೆ ಮಾಡುವುದು ಬಹಳ ಸೂಕ್ತ. ಅದಕ್ಕಾಗಿ ಸಹಾಯ ಸೌಲಭ್ಯಗಳನ್ನು ಕೊಡಿರಿ.

ಇನ್ನು ಪೌಲ್ಟ್ರಿ ವಿಚಾರವಾಗಿ ಹೇಳುವುದಾದರೆ, ವಕ್ಕಲಗರಿಗೆ ಆಧಾರವಾಗಿರುವುದು ಪೌಲ್ಟ್ರಿ ಒಂದುನೂರು ಕೋಳಿಗಳನ್ನು ಸಾಕುವುದರಿಂದ ಯಾವುದೇ ಶ್ರಮವಿಲ್ಲದೆ, ಒಂದು ವರ್ಷಕ್ಕೆ, ಎಲ್ಲಾ ಖರ್ಚು ಹೋಗಲಾಡಿಸಿ, ಒಂದು ಸಾವಿರ ರೂಪಾಯಿ ಉಳಿತಾಯ ಮಾಡಬಹುದು. ಇದು ಅನೇಕ ಜನರಿಗೆ ಗೊತ್ತಿಲ್ಲ. ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಸಾಧಿಸುವುದಿಲ್ಲ. ಕೋಳಿಯನ್ನು ಇಂದು ತೆಗೆದುಕೊಂಡರೆ, ನಾಳೆ ಸಾಯುತ್ತದೆಯೋ, ಎಂಬ ಭಯ ಬೇರೆ ಇದೆ. ಆದ್ದರಿಂದ ಅದಕ್ಕೆ ಬೇಕಾಗಿರುವ ವೆಟರನರಿ ಅಧಿಕಾರಿಗಳನ್ನು ನೇಮಿಸಿ, ಔಷಧಿಗಳು ಸಂದರ್ಭಕ್ಕೆ ಸರಿಯಾಗಿ ಸಮರ್ಪಕವಾಗಿ ಸಿಗುವಂತೆ ಮಾನ್ಯ ಮಂತ್ರಿಗಳವರು ಮಾಡುತ್ತಾರೆಂದು ತಿಳಿಯುತ್ತೇನೆ. ಸರ್ಕಾರದವರು ಎಲ್ಲಾ ಮಟ್ಟದಲ್ಲೂ ಅಭಿವೃದ್ಧಿಗಳನ್ನು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಇನ್ನೂ ಕೂಡ ಈ ಹೈಬ್ರಿಡ್ ಕೋಳಿಗಳನ್ನು ತಯಾರು ಮಾಡುತ್ತಾ ಇಲ್ಲ. ಪೂನಾದಿಂದ ತರಬೇಕಾಗಿದೆ. ಇದರಿಂದ ನಾನು ಮಂತ್ರಿಯವರನ್ನು ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ. ಅವರು ಈಗತಾನೇ ಖಾತೆಯನ್ನು ಹಿಡಿದುಕೊಂಡಿರುವುದರಿಂದ, ಇನ್ನುಮುಂದಾದರೂ ಇದನ್ನು ಒದಗಿಸುವಂತ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇದಲ್ಲದೆ ಈ ಪೌಲ್ಟ್ರಿಯನ್ನು ಒಬ್ಬೊಬ್ಬನಾಗಿ ಮಾಡಿದರೆ, ವಿನಾ ಕಾರಣ ವೇಸ್ಟ್ ಆಫ್ ಲೇಬರ್ ಆಗುತ್ತದೆ. ಆದ್ದರಿಂದ ಊರು, ಊರಿಗೆ ಒಂದು ಸಣ್ಣ ಸಣ್ಣ ಸಹಕಾರ ಸಂಘಗಳನ್ನು 10-20 ಜನ ಸಾಮೂಹಿಕವಾಗಿ ಮಾಡಿದರೆ, ಅದರಿಂದ ಹಣವೂ ಖರ್ಚಾಗುವುದು ಕಡಿಮೆಯಾಗುತ್ತದೆ, ಎಲ್ಲರಿಗೂ ಲಾಭ ಬರುತ್ತದೆ, ಮತ್ತು ಸರ್ಕಾರದವರಿಗೂ ಮೇಲಿಂದ ಮೇಲೆ ಮೇಲ್ವಿಚಾರಣೆ ಮಾಡುವ ಅನುಕೂಲತೆಯೂ ಇದೆ. ಇನ್ನು ಎಲ್ಲಿಯಾದರೂ ಒಂದು ಇನಾಕ್ಯುಲೇಶನ್ ಹಾಕಬೇಕಾದರೆ, ಅದು ಬೆಂಗಳೂರಿನಿಂದ ಬರಬೇಕು. ಇಲ್ಲಿಂದ ಅಲ್ಲಿಗೆ ಬರುವುದರೊಳಗೆ ಆ ಕೋಳಿಯು ಸತ್ತುಹೋಗುತ್ತದೆ. ಆದ್ದರಿಂದ, ಜಿಲ್ಲೆಯ ಡಿವಿಜನೊಳಗೆ, ದೊಡ್ಡ ದೊಡ್ಡ ಕೇಂದ್ರಗಳಲ್ಲಿ ಇವುಗಳನ್ನು ಇಡಲಿಕ್ಕೆ ಪ್ರಾರಂಭ ಮಾಡಬೇಕು. ಇನ್ನು ಹೆಚ್ಚು ಹೇಳದೆ, ಕೈರಾನ್ ಸ್ಲೋಗಾನಿನಂತ ದೇವರಾಜ್ ಅರಸರು, ಮೈಸೂರು ರಾಜ್ಯದಲ್ಲಿ ಸರ್ವರಿಗೂ ಅನುಕೂಲವಾಗುವಂತಹ ಯೋಜನೆಗಳನ್ನು ಮಾಡಿ. ಅದರ ಮುಖಾಂತರ ಜನರ ಸಂಪತ್ತು, ಹಾಗೂ ರಾಜ್ಯದ ಸಂಪತ್ತು, ಬೆಳೆಯುವಂತೆ ಮಾಡುತಾರೆಂದು ಹೇಳಿ ನನ್ನ ಮಾತುಗಳನ್ನು ಅಧ್ಯಕ್ಷರಿಗೆ ವಂದಿಸಿ ಮುಗಿಸುತ್ತೇನೆ.

†ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಪಶುಪಾಲನೆಯ ಇಲಾಖೆಯ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೋರಿರುವ ಹಣದ ಬೇಡಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ಕೆಲವು ಸಲಹೆಗಳನ್ನು ನೀಡಲು ಬಯಸುತ್ತೇನೆ. ನಮ್ಮ ದೇಶದಲ್ಲಿ ಈ ಪಶು ಸಂಪತ್ತು ಮತ್ತು ಪ್ರಾಣಿಗಳ ಸಂಪತ್ತು ಯಾವ ರೀತಿ ಹಿಂದುಳಿದಿದೆ ಎಂಬ ವಿಚಾರವನ್ನು ಈಗ ಆಲೋಚನೆ ಮಾಡಿದ್ದಾರೆ. ದನಗಳ ಸಾಕಾಣಿಕೆ ವಿಚಾರ, ಈ ಇಲಾಖೆಯ ಬಹು ಲಘುವಾಗಿ ಆಲೋಚನೆ ಮಾಡುವುದು ಉಂಟು. ಇನ್ನು ತಿಳಿಯದ ಜನರ ಬಗ್ಗೆ ವ್ಯವಹಾರಿಕವಾಗಿ ಅವರಿಗೆ ಏನೂ ಗೊತ್ತಿಲ್ಲದಿದ್ದರೆ "ಏನೋ, ನೀನು ದನ ಕಾಯುವುದಕ್ಕೆ ಹೋಗು" ಎಂದು ಹೇಳುತ್ತಾರೆ. ಇದರಿಂದ ಗೋವಿನ ಬಗ್ಗೆ ಏನೂ ತಿಳಿಯದಿರುವ ಭಾವನೆ ಬಂದಿದೆ. ಇತ್ತೀಚೆಗೆ ಪಾಶ್ಚಿಮಾತ್ಯ ದೇಶದಲ್ಲಿ ಪ್ರಾಣಿಗಳ ಸಾಕಾಣಿಕೆ ವಿಚಾರದಲ್ಲಿ ವ್ಯಾಸಂಗ ಮಾಡಿ ಬಂದ ತಜ್ಞರು ಸಾಕಷ್ಟು ಇಲಾಖೆಯಲ್ಲಿ ಇದ್ದಾರೆ. ಇಷ್ಟು ಜನರಿದ್ದರೂ ಇದರಲ್ಲಿ ಬೆಳವಣಿಗೆಯಾಗಲಿಲ್ಲ. ಈ ಇಲಾಖೆಯ ಯೋಜನೆಗಳನ್ನು ನಾನಾ ರೂಪದಲ್ಲಿ ಬೆಳೆಸುತ್ತಿದ್ದಾರೆ. ಇದನ್ನು ಒಂದು ರೂಪದಲ್ಲಿ ಡೆವಲೆಪ್‌ಮೆಂಟ್ ಇಲಾಖೆ ಎಂದು ಕೂಡ ನಿಗ ಮಾಡಿದ್ದಾರೆ. ಆದರೆ ಇದರಲ್ಲಿರತಕ್ಕ ಯೋಜನೆಗಳನ್ನು ಮೂರು ಭಾಗಗಳಾಗಿ ಮಾಡಿ ನೋಡಬೇಕಾಗುತ್ತದೆ. ಒಂದು ಟೆಕ್ನಿಕಲ್ ವಿಚಾರವಾಗಿ, ಮತ್ತು ಫೀಲ್ಡ್ ಡೆವಲಪ್‌ಮೆಂಟ್, ಮತ್ತು ಪ್ರಾಣಿಗಳನ್ನು ಸಾಕತಕ್ಕ ವಿಚಾರ. ಇತ್ತೀಚೆಗೆ ಪ್ರಾಣಿಗಳನ್ನು ಸಾಕುವುದರಲ್ಲಿ ಇರತಕ್ಕ ಶೋಧಕ ಮೇವಿನ ಅಭಾವ, ಮತ್ತು ಔಷಧೋಪಚಾರ ವಿಚಾರವೆಲ್ಲವನ್ನೂ ಆಲೋಚನೆ ಮಾಡಿದರೆ, ಇದು ಒಂದು ಕ್ರಮಬದ್ಧವಾದ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲ. ಟೆಕ್ನಿಕಲ್ ಸೈಡಿನಲ್ಲಿ ಕೊರತೆ ಇಲ್ಲವೆಂದು ನನ್ನ ಭಾವನೆ. ಅದಕ್ಕೆ ಅಷ್ಟು ಮಟ್ಟಿಗೆ ಸಹಕಾರ, ಬೆಂಬಲ, ಬಹುಶಃ ದೊರೆತಿಲ್ಲವೆಂದು ನನಗನಿಸುತ್ತದೆ. ಮಾನ್ಯ ಮಿತ್ರರು ಹೇಳಿದಂತೆ ಈಗ ಮಾನ್ಯ ಮಂತ್ರಿಗಳು ಈ ಇಲಾಖೆಯಲ್ಲಿ ಒಂದು ಹೆಚ್ಚಿನ ಕೆಲಸವನ್ನು ಮಾಡಿ ಹೆಸರನ್ನು ಪಡೆಯುತ್ತಾರೆಂದು ನನಗನಿಸುತ್ತದೆ. ಅವರು ಮನಸ್ಸು ಮಾಡಿದರೆ,

ಒಂದು ಹೆಚ್ಚಿನ ಕೆಲಸ ಮಾಡುತ್ತಾರೆಂದು ನನ್ನ ಅಭಿಪ್ರಾಯ. ಈ ಸ್ಕೀಮನ್ನು ಎಲ್ಲಾ ನಾವು ಇಲಾಖೆಗಳ ಮೇಲೆ ಹಾಕಬಾರದು ಎಂದು ನನಗನಿಸುತ್ತದೆ. ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅದಕ್ಕೆ ಹಣ ಕೊಟ್ಟಿಲ್ಲವೆಂದು ಹೇಳಿದರೆ, ಇದು ಮತ್ತೊಂದು ತೊಡಕನ್ನು ಸೇರಿಸಿದ ಹಾಗೆ ಆಗುತ್ತದೆ. ಯಾವ ಒಂದು ಕೆಲಸ ಮಾಡಿದರೂ ಅದಕ್ಕೆ ವಿರೋಧವಾದ ಟೀಕೆಗಳು ಇದ್ದೇ ಇವೆ. ಅದರಲ್ಲೂ ಈ ಅಮೃತಮಹಲ್ ಕಾವಲನ್ನು ಬಹಳ ಚೆನ್ನಾಗಿ ಮಾಡಬೇಕು; ಮತ್ತು ಅದರಿಂದ ಎಲ್ಲರಿಗೂ ಅನುಕೂಲವಾಗಬೇಕು. ಬೂಸ ಸಿಗುತ್ತಿಲ್ಲವೆಂದು ಸತ್ಯಾಗ್ರಹ ಕೂಡ ಮಾಡುತ್ತಾರೆ. ಆ ರೀತಿ ಮಾಡಿದರೆ ಗೋವಿನ ಗತಿ ಏನು? ಮೊನ್ನೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಫಾರಿನ್ ಎಕ್ಸ್ಚೇಂಜ್ ಗಳಿಸುವುದಕ್ಕೋಸ್ಕರ ದನಗಳು ತಿನ್ನತಕ್ಕ ಹಿಂಡಿಯನ್ನು ಕಳುಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇದು ತಪ್ಪು ಹೀಗೆ ನಮ್ಮ ದೇಶದಲ್ಲಿ ಗೋವಿನ ಸುದ್ದಿ ಎತ್ತಿದರೆ ಸಾಕು, ಇತಿಹಾಸ, ಪುರಾಣ, ಚರಿತ್ರೆ ಎಲ್ಲಾ ಬರುತ್ತದೆ. ಮೊನ್ನೆ ತಾನೆ ಗೋವನ್ನು ಕೊಲ್ಲಬೇಡಿ ಎಂದು ಸಾಧು ಸಂತರೂ ಸಹ ಕೋಪಮಾಡಿಕೊಂಡು ಇದನ್ನು ನಿಲ್ಲಿಸಬೇಕು ಎಂದು ಹೇಳಿದರು, ಎಂಥದ್ದು ಒಳ್ಳೆಯದು ಎಂದು ಹೇಳಿದರೆ, ಅದಕ್ಕೆ ಎದುರಾಗಿ ಟೀಕೆ ತಪ್ಪಿದ್ದಲ್ಲ. ಗೋವು ಎನ್ನತಕ್ಕಂಥದ್ದು ಸತ್ಯ ಅಹಿಂಸೆಗಳ ನೆಲೆಯಾದಂತಹ ಪ್ರಾಣಿ. ಆದಕ್ಕೂ ಟೀಕೆ ಮಾಡಿದರೆ ಹೇಗೆ? ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 20 ವರ್ಷವಾದರೂ ಯಾವ ಯೋಜನೆಯನ್ನೂ ಸರಿಯಾದ ಬುನಾದಿಯನ್ನು ಇಟ್ಟಿದ್ದಾರೆ, ಎಂದರೆ ಹೌದು ಎಂದು ಯಾರಾದರು ಹೇಳುತ್ತಾರೊ ಎಂದು ನಾವು ನೋಡಬೇಕು. ನಮ್ಮ ದೇಶದಲ್ಲಿ ಒಂದು ಸಂತೋಷಪಡತಕ್ಕ ವಿಚಾರ ಇದೆ. ಅದು ಇಲ್ಲಿರುವ ಥಿಯರಿ ಏನು ಎನ್ನುವುದನ್ನು ಇನ್ನೂ ಅರಿತುಕೊಂಡಿಲ್ಲ. ನಮ್ಮ ಜನ ದಾರಿಯಲ್ಲಿ ಬಡಕಲಾಗಿರುವ ಎಲ್ಲ ಮೂಳೆಗಳೂ ಕಾಣಿಸುತ್ತಿರುವ ಗೋವು ಬಂದರ ಅದಕ್ಕೆ ಕೂಡಲೇ ನಮಸ್ಕಾರ ಹಾಕಿ ಕುಂಕುಮ ಇಟ್ಟು ಪೂಜಿಸುತ್ತಾರೆ. ಇದರಿಂದ ನಮಗೆ ಒಳ್ಳೆಯ ಹಾಲು ಸಿಕ್ಕಿದಂತಾಯಿತೇ? ಏನೋ ನಮ್ಮ ಜನಗಳಲ್ಲಿ ಒಂದು ರೀತಿಯಾದ ಭಾವನೆ ಬಂದಿದೆ. ಅದು ಒಂದು ಚಟಾಕು ಹಾಲಿಗೆ ಒಂದು ಪಾವು ನೀರು ಬೆರಸಿ ಹಾಲು ಎಂದು ತಂದುಕೊಟ್ಟರೂ ಸಾಕು ಎಂದು ತೆಗೆದುಕೊಳ್ಳುತ್ತೇವೆ. ಇಂತಹ ಶೋಚನೀಯ ಪರಿಸ್ಥಿತಿಗೆ ಬಂದಿದ್ದೇವೆ. ಇದಕ್ಕೋಸ್ಕರ ಈಗ ಕ್ರಾಸ್ ಬ್ರೀಡಿಂಗು ಮಾಡಬೇಕೆಂದು ಹೇಳಿದ್ದಾರೆ. ಈ ದೇಶದಲ್ಲಿ ಹಿಂದೆ ಅಮೃತ ಮಹಲ್ ಕಾವಲಿನ ದನಗಳು, ಹಳ್ಳಿಕಾರ್ ದನಗಳು ಎಂದು ಇರುತ್ತಿತ್ತು. ಈಗ ಇವೆಲ್ಲ ಮಾಯವಾಗಿವೆ. ಅಮೃತ ಮಹಲ್ ಹೋಗಿ ಈಗ ಹೊರಗಡೆಯಿಂದ ತಳಿಗಳನ್ನು ತಂದು ಇಲ್ಲಿ ಅಭಿವೃದ್ಧಿ ಮಾಡಬೇಕೆಂದು ಇದೆ. ಇದಕ್ಕಾಗಿ ಹರಿಯಾನ ತಳಿ ಹಾಗೂ ಸಿಂಧಿ ತಳಿ ಎಂದು ಇಲ್ಲಿಗೆ ತಂದು ಇದನ್ನು ಅಭಿವೃದ್ಧಿ ಮಾಡಬೇಕೆಂದು ಮಾಡುತ್ತಿದ್ದಾರೆ. Let all these drought cattle go. ಇದಕ್ಕೆ ಕೆಲವರು ಇಲ್ಲಿ ಮಾತಾಡುವಾಗ ಕ್ಯಾಸ್ಟ್ರೇಷನ್ ಮಾಡಬೇಕು ಎಂದೂ ಹೇಳಿದರು. ನಿಜ. ಈಗ ಹೋರಿಗಳೇ ಇಲ್ಲದೇ ಇರುವಾಗ ಹಸುಗಳು ತಾನೇ ಎಲ್ಲಿಂದ ಬಂದಾವು? ಇನ್ನು ಮುಂದೆ ಹೋರಿಗಳಿಲ್ಲ ಎಂದು ಹೈಕೋರ್ಟಿಗೆ ರಿಟ್ ಹಾಕಲು ಹೋಗಬೇಕಾದೀತೋ ಏನೋ? ಇನ್ನು ಕೆಲವು ಕಡೆಗಳಲ್ಲಿ ನೇಪಿಯರ್ ಹುಲ್ಲು ಬೆಳೆಸಬೇಕು ಎಂದು ಹೇಳುತ್ತಾರೆ ಮತ್ತು ಫಾರಂ ಹುಲ್ಲು ಬೆಳೆಸಬೇಕು ಎನ್ನುತ್ತಾರೆ. ಕ್ರಾಷ್ ಪ್ರೋಗ್ರಾಂ ಎಂದು ಮಾಡಿರುವ ಕಡೆಗಳಲ್ಲಿ ಅವರಿಗೆ ದುಡ್ಡು ಕೊಟ್ಟರೆ ಏನಾದರೂ ಕೆಲಸಗಳನ್ನು ಮಾಡುತ್ತಾರೆ ಮತ್ತು ಅಲ್ಲಿ ಬೆಳೆ ಮಾಡಿದರೆ ಹುಲ್ಲು ಕೂಡ ಬೆಳೆಸಬಹುದು ಎಂದು ಹೇಳುತ್ತಾರೆ. ಆದರೆ ಇಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಇದು ಹೇಗಿದೆ ಎಂದರೆ, ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂ ಎಂಬಂತೆ ಆಗಿದೆ. ಭತ್ತ ಬೆಳೆದು ಕೊಟ್ಟರೆ ಅದರ ಜೊತೆಗೆ ಹುಲ್ಲನ್ನೂ ಬೆಳೆಸಬೇಕೆಂದು ಇದೆ. ಈಗ ಸರಕಾರ ಬಾವಿಗಳನ್ನು ತೋಡಿಸಲು ಸಾಲ ಕೊಟ್ಟಿದೆ. ಎಷ್ಟು ಬಾವಿ ಕೆಳಗಡೆ ಜನ ಹುಲ್ಲು ಬೆಳಸಲು ಪ್ರಾರಂಭ ಮಾಡಿದ್ದಾರೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇಲ್ಲಿ ಏನಾದರೂ ಅಕ್ರಮಗಳಿದ್ದರೆ ಇದನ್ನು ಸರಕಾರ ನೋಡಿ ಸರಿಪಡಿಸಬೇಕು. ಅಲ್ಲದೆ ಯಾರಾದರೂ ಇಲಾಖೆಯವರು ಬಾವಿಗಳನ್ನು ತೋಡಿಸಿದವರೇ ಅದರ ಮೂಲಕ ಬಂದ ನೀರಿನಿಂದ ಏನಾದರೂ ಬೆಳೆ ಮಾಡಿದ್ದಾರೆಯೇ ಎನ್ನುವುದನ್ನು ನೋಡಿ ಬರುತ್ತಾರೆಯೇ ಎಂದರೆ ಯಾರೂ ನೋಡುತ್ತಿಲ್ಲ. ಅವನು ಹುಲ್ಲು ಬೆಳೆಯುವುದಕ್ಕೆ ಬದಲಾಗಿ ಮೂಲಂಗಿ ಬೆಳೆದಿರಬಹುದು ಇಲ್ಲವೇ ಸಾವೆ ಬೆಳೆದಿರಬಹುದು. ಸರಕಾರ ಈಗೇನೋ ಬಾವಿಗಳಿಗಾಗಿ ಸುಮಾರು 18 ಲಕ್ಷದಷ್ಟು ಸಾಲವಾಗಿ ಸಹಾಯ ಮಾಡಿದರು ಮತ್ತು ಅದರಂತೆ ಎಷ್ಟು ಕಡೆಗಳಲ್ಲಿ ಬಾವಿಗಳಾಗಿವೆ ಎಷ್ಟು ಕಡೆ ಬೆಳೆಗಳನ್ನು ಮಾಡಿದ್ದಾರೆ ಎಂದು ಪರಿಶೀಲನೆ ಮಾಡಿದ್ದಾರೆಯೇ? ಏನೋ ಅವರು ಕೊಟ್ಟ ಸಾಲದಲ್ಲಿ ಸುಮಾರು 15 ಲಕ್ಷದಷ್ಟನ್ನೂ ಈಗಾಗಲೇ ವಾಪಸು ವಸೂಲು ಮಾಡಿಕೊಂಡಿದ್ದಾರೆ. ಇನ್ನೂ ಮೂರು ಲಕ್ಷದಷ್ಟು ವಸೂಲು ಮಾಡಬೇಕಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಾಗ ನಮ್ಮಲ್ಲಿರುವ ಹಸುಗಳನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕು ಎನ್ನುವುದಕ್ಕೇನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಎಂದರೆ ಏನೂ ಇಲ್ಲ. ಹಸುವಿಗಾಗಿ ಈ ದೇಶದಲ್ಲಿ ಏನಾದರೂ

(ಶ್ರೀ ಕೆ. ಪ್ರಭಾಕರ್)

ಮಾಡಿದ್ದಾರೆಯೋ ಎಂದರೆ ಏನೂ ಕಾಣುತ್ತಿಲ್ಲ. ಅರಿವೇ ಇಲ್ಲದವರಿಗೆ ಅರಳಮಲ್ಲಿಗೆ ಕೊಡುವಂತೆ ನಮ್ಮ ಜನಗಳ ಸ್ಥಿತಿಯಾಗಿದೆ. ಇದರ ಬಗ್ಗೆ ಸರಕಾರ ಸರಿಯಾಗಿ ನಿಗಾ ಕೊಡಬೇಕು. ಹಸುಗಳು ದುರ್ಬಲವಾಗಿವೆ ಎಂದು ಹೇಳುತ್ತಾ ದನದ ಇಲಾಖೆಯಲ್ಲಿ ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕು ಎಂದು ಹೇಳುತ್ತಾರೆ. ಆದುದರಿಂದ ಸರಕಾರ ಇವೆಲ್ಲವನ್ನೂ ಪರಿಶೀಲನೆ ಮಾಡಲು ಎಲ್ಲಿಯಾದರೂ ಒಂದು ರೀತಿಯಾಗಿ ಎಕ್ಸ್‌ಪೆರಿಮೆಂಟ್ ಮಾಡಬೇಕು. Let them experiment in one village. Let them call that village by any name. ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲಿ ಕ್ಯಾಟಲ್‌ಗೆ ಸರಿಯಾದ ಮಾರ್ಕೆಟ್ ಇಲ್ಲ. ಹಸುಗಳನ್ನು ಮಾರಾಟ ಮಾಡುವವರಿಗೆ ಸರಿಯಾದ ಮಾರುಕಟ್ಟೆಗಳೇ ಇಲ್ಲ; ಮತ್ತು ಹಳ್ಳಿಗಳಲ್ಲಿ ಎಲ್ಲಿಯಾದರೂ ದನಕ್ಕೆ ಚಪ್ಪೆ ರೋಗ ಇದೆ ಅದನ್ನು ನೋಡಬೇಕೆಂದು ಅಲ್ಲಿರುವ ವೆಟರ್ನರಿ ಡಾಕ್ಟರಿಗೆ ಹೇಳಿಕೊಂಡರೆ ಅವರು ಬೇಗನೆ ಹಳ್ಳಿಗೆ ಹೋಗಲು ಒಂದು ಜೀಪ್ ಆಗಲೀ ವೆಹಿಕಲ್ ಆಗಲಿ ಇಲ್ಲ. ಅಲ್ಲಿಗೆ ಡಾಕ್ಟರು ಹೇಗೆ ತಾನೆ ಹೋಗುವುದು ? ಸೈಕಲ್ ತೆಗೆದುಕೊಂಡು ಹೋಗಲು ಅವರು ಔಷಧಿಗಳ ಬಾಟಲ್‌ಗಳನ್ನು ಹೇಗೆ ತಾನೆ ತೆಗೆದುಕೊಳ್ಳುವುದು ಎಂದು ಅವರು ಹೋಗಲಿಕ್ಕೆ ಆಗಲಿಲ್ಲ. ಹೀಗಿದೆ ವೆಟರ್ನರಿ ಆಸ್ಪತ್ರೆಗಳ ಸ್ಥಿತಿ! ಇನ್ನೂ ಹಾಗೆ ಕೋಳಿ ಸಾಕಾಣಿಕೆಗೆ ಉತ್ತೇಜನ ಕೊಡಬೇಕು. ಕುರಿ ಸಾಕುವಿಕೆಗೆ ಉತ್ತೇಜನ ಕೊಡಬೇಕು ಇನ್ನೂ ಹೆಚ್ಚಾಗಿ ಸಾಕಬೇಕು ಮತ್ತು ಬಡವರಿಗೆ ಒಳ್ಳೆಯ ತಳಿಗಳನ್ನು ತಂದು ಹಂಚಬೇಕು. ಇದನ್ನು ಪ್ರಾಯೋಗಿಕವಾಗಿ ನೋಡಲು ಎಲ್ಲಿಯಾದರೂ ಒಂದು ಕ್ಷೇತ್ರದಲ್ಲಿ ಎಕ್ಸ್‌ಪರಿಮೆಂಟು ಮಾಡಿ ನೋಡಬೇಕು. ಅಡ್ಮಿನಿಸ್ಟ್ರೇಷನ್ ಸೈಡ್‌ನಲ್ಲಿ ಎಲ್ಲಿಯಾದರೂ ಒಂದು ಕಡೆ ಇದರ ಎಕ್ಸ್‌ಪೆರಿಮೆಂಟ್ ಮಾಡಿ ನೋಡಬೇಕು ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ನಾಗನಗೌಡರು ಕುರಿ ಸಾಕಾಣಿಕೆ ಬಗ್ಗೆ ತಮ್ಮ ಅನುಭವವನ್ನು ಇಲ್ಲಿ ಹೇಳಿದರು. ಇದನ್ನು ಟೆಕ್ನಿಕಲ್ ಎಕ್ಸ್‌ಪರ್ಟ್‌ಗಳು ಪರಿಶೀಲಿಸಬೇಕು. ಇನ್ನು ಕೆಲವರಲ್ಲಿ ಒಂದು ಮನೋಭಾವನೆ ಬಂದಿದೆ. ಹಸುಗಳನ್ನು ಸಾಕುವವರು ಅವರಿಗೆ ಹೆಚ್ಚು ಹಾಲು ಮೊಸರು ಕೊಡುತ್ತದೆ ಎಂದು ಹಸುವನ್ನು ಕಟ್ಟಿರುವ ಕೊಟ್ಟಿಗೆಗಳಲ್ಲಿರುವ ಕಸಕಡ್ಡಿಗಳು, ಹಾಗೂ ಗಂಜಲ ಇತ್ಯಾದಿಗಳನ್ನು ಶುದ್ಧಿ ಮಾಡಿ ಹಸುಗಳಿಗೆ ಒಳ್ಳೆಯ ಹುಲ್ಲನ್ನು ಹಾಕಿ ಸಾಕಿಕೊಂಡು ಇರುತ್ತಾರೆ ಮತ್ತು ಗೋವನ್ನು ಪೂಜಿಸಬೇಕು ಎಂದೂ ಪೂಜಿಸುತ್ತಾರೆ. ಆದರೆ ಎಲ್ಲರೂ ಹೀಗೆ ಮಾಡಲು ಆಗುವುದಿಲ್ಲ. ಯಾವುದಾದರೂ ಕೆಲಸವನ್ನು ಮಾಡಬೇಕಾದರೆ ಅದನ್ನು ಹೇಗೆ ಸುಲಲಿತವಾಗಿ ಮಾಡಬಹುದು ಎನ್ನುವುದರ ಕಡೆಗೆ ಗಮನ ಕೊಡಬೇಕು. ಇದಕ್ಕಾಗಿ ಎಲ್ಲವನ್ನೂ ಕೇಂದ್ರೀಕರಿಸಿ ಸೆಂಟ್ರಲ ಸ್ಟಾಂಡರ್ಡ್ ಸ್ಕೀಂ ಒಂದನ್ನು ತಯಾರುಮಾಡಬೇಕಾಗುತ್ತದೆ.

Let us do all about the cow in one place. I do not mind whether you call it key village or model farm or central co-operative society. ಇದಕ್ಕೆ ಬೇಕಾದರೆ ಒಂದು ಕಾನೂನನ್ನಾದರೂ ಮಾಡಿ. ಸುಮ್ಮನೆ ಬೆಂಗಳೂರಿನಲ್ಲಿರುವ ತಳಿಗಳನ್ನು ನೋಡಿ ಎಂದರಾಯಿತೇ! ಬೆಂಗಳೂರಿಗೆ ಬಂದು ವಿಧಾನಸೌಧದಂತಹ ಅರಮನೆಗಳನ್ನು ನೋಡಿ ಹೋದರಾಯಿತೇ? ಇದರ ಬಗ್ಗೆ ನಾನು ಹೇಳಿದಂತಹ ನಾನ್ಯಾರು ಸಲಹೆಗಳನ್ನು ಸರಕಾರದವರು ನಿಷ್ಠೆಯಿಂದ ಅರಿತು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ಇಲಾಖೆಯ ಬಗ್ಗೆ ಇಲ್ಲಿಯವರೆಗೆ ಸುಮಾರು 16 ಮಂದಿ ಇಲ್ಲಿ ಮಾತನಾಡಿದ್ದಾರೆ. ಈ 16 ಜನರಲ್ಲಿ ಎಲ್ಲ ಮಾನ್ಯ ಸ್ನೇಹಿತರೂ ಕೂಡ ಈ ಇಲಾಖೆಗೆ ಹಣವನ್ನು ಒದಗಿಸುವುದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಇನ್ನೂ ಹೆಚ್ಚು ಹಣ ಒದಗಿಸಬೇಕಾಗಿತ್ತು ಎಂದು ತಿಳಿಸಿದರು ಎಂದು ನಾನು ತಿಳಿಯುತ್ತೇನೆ. ನಮ್ಮ 16 ಮಾನ್ಯ ಸದಸ್ಯರು ಇಲ್ಲೇನು ಹೇಳಿದ್ದಾರೆ ಆ ಮಾತು ಇಡೀ ಮಾನ್ಯ ಸಭೆಯ ಅಭಿಪ್ರಾಯವೆಂದು ನಾನು ತಿಳಿಯುತ್ತೇನೆ. ನಮ್ಮ ಸ್ನೇಹಿತರು ಮಾತನಾಡುತ್ತಾ ಹೇಳಿದುದನ್ನು ಕೇಳಿದರೆ ನನಗೆ ಏನು ಕಾಣುತ್ತದೆ ಎಂದರೆ ಎಲ್ಲ ಮಾನ್ಯ ಸದಸ್ಯರಿಗೂ ಈ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ಆಸಕ್ತಿ ಇದೆ ಮತ್ತು ಇದು ಇನ್ನೂ ಚೆನ್ನಾಗಿ ನಡೆಯಬೇಕು ಎನ್ನತಕ್ಕ ಮನೋಭಾವ ಇದೆ ಮತ್ತು ಇದಕ್ಕಾಗಿ ದುಡ್ಡನ್ನು ಹೆಚ್ಚು ಮಾಡಬೇಕು ಇದರ ಅನುಕೂಲ ನಮ್ಮ ದೇಶದ ಜನರಿಗೆ ಸಿಗಬೇಕು ಎಂಬತಕ್ಕ ವಿಚಾರವಿದೆ. ಇದರ ಜೊತೆಗೆ ನಮ್ಮ ದೇಶಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ ಆಹಾರ ಒದಗಿಸುವುದಕ್ಕೆ ಈ ಆದೇಶದಲ್ಲಿ ಇಲ್ಲ. ಅದರಲ್ಲೂ ಆರೋಗ್ಯಕರವಾದ ಹಾಲು, ಹೈನು ಮತ್ತು ಮಾಂಸ ಇವನ್ನೆಲ್ಲಾ ಒದಗಿಸುವುದಕ್ಕೆ ಈ ಇಲಾಖೆಯ ಕಾರ್ಯಚಟುವಟಿಕೆಗಳು ಇನ್ನೂ ಹೆಚ್ಚು ಫಲಕಾರಿಯಾಗುವಂತೆ

ಆಗಬೇಕು. ಈ ದೃಷ್ಟಿಯಿಂದ ಹಣ ಒದಗಿಸಬೇಕು ; ಮತ್ತು ಈಗ ಒದಗಿಸಿರುವ ಹಣ ಸಾಲದು ಎಂದೂ ಹೇಳಿದರು. ಅದರಲ್ಲೂ ವಿರೋಧ ಪಕ್ಷದ ಸದಸ್ಯರು ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಎಂದರೆ ಇದಕ್ಕೆ ಒದಗಿಸಿರುವ ಹಣ ಸಾಲದು ಅದಕ್ಕಾಗಿ ಇದನ್ನು ವಿರೋಧಿಸುತ್ತೇವೆ ಎಂದು ಹೇಳಿದರು. ಯಾವ ಒಂದು ವಿಷಯವನ್ನು ತೆಗೆದುಕೊಂಡರೂ ನಾವು ಸರ್ವೇ ಸಾಧಾರಣವಾಗಿ ಬೇರೆ ಒಂದು ಡಿಮ್ಯಾಂಡನ್ನು ತೆಗೆದುಕೊಳ್ಳುವಾಗಲಾಗಲೀ ಎಲ್ಲ ಬಾಬುಗಳಿಗೂ ಹಣ ಒದಗಿಸಬೇಕು ಮತ್ತು ವ್ಯವಸಾಯದ ಬಾಬು ಬಂದಾಗ ಅದಕ್ಕೆ ಹೆಚ್ಚು ಹಣ ಕೊಡಬೇಕು, ವಿದ್ಯಾಭ್ಯಾಸದ ಇಲಾಖೆ ಬಂದಾಗ ಅಲ್ಲಿಗೆ ಹೆಚ್ಚು ಹಣ ಕೊಡಬೇಕು. ಇನ್ನು ಪಿ.ಡಬ್ಲ್ಯು.ಡಿ. ಇಲಾಖೆ ಬಂದಾಗ ನಮ್ಮ ಊರಿನಲ್ಲಿರುವ ರಸ್ತೆಗಳನ್ನೆಲ್ಲಾ ಸ್ಟೇಟು ಫಂಡು ರಸ್ತೆಗಳನ್ನಾಗಿ ಮಾಡಬೇಕೆಂದು ಹಾಗೇ ಕೆಲವು ಪ್ರೈಮರಿ ಶಾಲೆಗಳಲ್ಲಿ ಹಾಗೂ ಮಿಡಲ್ ಸ್ಕೂಲುಗಳಲ್ಲಿ ಕಾಲೇಜುಗಳಲ್ಲಿ ಹೆಚ್ಚು ಹಣ ಕೊಡಬೇಕು. ಹೀಗೆ ಯಾವ ವಿಚಾರ ತೆಗೆದುಕೊಂಡರೂ ಅಲ್ಪಸ್ವಲ್ಪ ಬಿಟ್ಟರೆ ಇನ್ನೂ ಸ್ವಲ್ಪ ಹೆಚ್ಚು ಹಣ ಇಡಬೇಕಾಗಿತ್ತು ಎಂದು. ನಮ್ಮ ದೇಶದ ಆಡಳಿತದ ಎಲ್ಲ ಇಲಾಖೆಗಳಲ್ಲೂ ಎಲ್ಲ ಬಾಬುಗಳಿಗೂ ಹೆಚ್ಚು ಹಣ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುವಂತೆ ನಾನೂ ಒಪ್ಪುತ್ತೇನೆ. ಆದರೆ ಸರಕಾರದ ಮನೋಭಾವ ಯಾವ ಬಾಬಿಗೆ ಹೆಚ್ಚು ಖರ್ಚು ಮಾಡಬೇಕೋ ಆ ಬಾಬಿಗೆ ಕಡಿಮೆ ಹಣ ಒದಗಿಸಿದ ಹಾಗೆ ಕಾಣುತ್ತೆ. ನಮ್ಮ ಮೈಸೂರು ದೇಶದ ಪರಿಸ್ಥಿತಿ ಏನಾಗಿದೆ ಎಂದರೆ, ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ: ಅದು ಏನೆಂದರೆ, A friend to everybody is a friend to nobody. ಹೀಗಾಗಿ ಇಲಾಖೆಗಳೂ ಪ್ರಾಮುಖ್ಯವಾಗಿ ಎಲ್ಲಕ್ಕೂ ಹೆಚ್ಚು ದುಡ್ಡು ಒದಗಿಸಬೇಕೆಂಬ ರೀತಿ ಸರ್ಕಾರದಲ್ಲಾಗಿದೆ. ಈ ನೀತಿ, ಈ ಸಭೆಯ ಅಭಿಪ್ರಾಯವನ್ನೇ ಅವಲಂಬಿಸಿದೆ. ನಮ್ಮ ಅಭಿಪ್ರಾಯ ಬದಲಾವಣೆಯಾಗದೆ ಮತ್ತು ಯಾವ ವಿಷಯಕ್ಕೆ ಮೊದಲು ಗಮನ ಕೊಡಬೇಕೆಂಬ ಅರಿವು ನಮಗುಂಟಾಗ ದಲ್ಲದೆ ಈ ಇಲಾಖೆಗೆ ಹೆಚ್ಚು ಹಣ ಹೇಗೆ ಒದಗುತ್ತದೆಯೋ ನನಗೆ ತಿಳಿಯದು. ನಾನು ಸ್ವಲ್ಪ ಮನಬಿಚ್ಚಿ ಹೇಳುವುದಾದರೆ, ಪ್ಲಾನಿಂಗ್ ಕಮೀಷನ್ ಅವರ ವತಿಯಿಂದಲೂ ಕೂಡ ಇದೇ ಮನೋಭಾವ ಬೆಳೆದುಬರುತ್ತಿದೆಯೆಂದು ನನ್ನ ಅಭಿಪ್ರಾಯ. ಇತ್ತೀಚೆಗೆ ವ್ಯವಸಾಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದು ಎಲ್ಲಾಕಡೆಯಲ್ಲೂ ಮಾತನಾಡುತ್ತಿದ್ದೇವೆ. 3-4ವರ್ಷ ಗಳಿಂದ ನಮ್ಮ ಅನುಭವಕ್ಕೆ ಬಂದಿರುವ ವಿಚಾರವೆಂದರೆ, ಸಾಕಷ್ಟು ಮಳೆಯಾಗದೆ ಬೆಳೆಯಾಗದ್ದ ರಿಂದ ಪರದೇಶದಿಂದ ಆಹಾರವನ್ನು ತರಿಸಬೇಕಾಗಿದೆ. ರಾಜ್ಯಗಳ ಮಂತ್ರಿಗಳು, ಕೇಂದ್ರದ ಮಂತ್ರಿಗಳು ಮತ್ತು ಪ್ಲಾನಿಂಗ್ ಮಿನಿಷ್ಟರ್ ಅವರು ಹೆಚ್ಚು ಹೆಚ್ಚು ಆಹಾರ ಬೆಳೆಯಬೇಕಾದರೆ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕೆಂದು ಹೇಳುತ್ತಿದ್ದಾರೆ. ಇದೇ ಒಂದು ಅಭಿಪ್ರಾಯ ನಮಗೆ 20 ವರ್ಷಗಳಹಿಂದೆ ಇರಲಿಲ್ಲ. ಇತ್ತೀಚೆಗೆ ಈ ಕಡೆಗೆ ಹೆಚ್ಚಿನ ಗಮನ ಕೊಡುತ್ತಿದ್ದೇವೆ. ಪಶುಪಾಲನೆಯ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದರು, ವ್ಯವಸಾಯ ಮತ್ತು ಪಶುಪಾಲನೆ ಒಂದಕ್ಕೊಂದು ಮಿಳಿತವಾಗಿದೆ, ಆದ್ದರಿಂದ ಎರಡಕ್ಕೂ ಸಮಾನವಾದ ಪ್ರಾಮುಖ್ಯತೆ ಕೊಡಬೇಕು ಎಂದು. ಇದನ್ನು ನಾನು ನೇರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಸರ್ಕಾರದವರು ಈ ಬಾಬಿಗೆ ಏತಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟಿಲ್ಲವೆಂದು ಕೇಳುವುದಾದರೆ ಅದಕ್ಕೆ ನಾನಾ ಕಾರಣಗಳನ್ನು ಕೊಡಬಹುದು. ಕೇವಲ ಈ ಬಾಬಿಗೆ ಮಾತ್ರ ಸರ್ಕಾರದವರು ಪ್ರಾಮುಖ್ಯತೆ ಕೊಟ್ಟಿಲ್ಲವೆಂದು ಹೇಳು ವುದು ನಿಜವಾಗಲಾರದು. ಯಾವ ಬಾಬಿಗೆ ಹೆಚ್ಚು ಹಣವನ್ನು ಒದಗಿಸಬೇಕು ಎಂಬುದು ನಮ್ಮ ಮುಂದೆ ಬಂದಾಗ ಸಂದರ್ಭಾನುಸಾರವಾಗಿ ಇಂತಹ ಕೆಲವು ಇಲಾಖೆಗಳಿಗೆ ಹಣ ಖೋತಾ ಮಾಡಬೇಕಾಗಿ ಬರುತ್ತದೆ. ಈ ಇಲಾಖೆಗೆ ಹೆಚ್ಚುಹಣ ಒದಗಿಸಬೇಕಾಗಿತ್ತು ಎಂದು ಕೆಲವು ಸದಸ್ಯರು ಹೇಳಿದರು. ಹಣದ ಅಭಾವದಿಂದ ಹೆಚ್ಚು ಹಣವನ್ನು ಒದಗಿಸುವುದಕ್ಕಾಗಲಿಲ್ಲ. ಈ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸಬೇಕಾದರೆ, ಬೇರೆ ಇಲಾಖೆಗೆ ಹಣ ಕಡಿಮೆ ಒದಗಿಸಬೇಕಾಗುತ್ತದೆ. ಇಲ್ಲದಿದ್ದರೆ ಹಣವನ್ನು ಸಂಪಾದನೆ ಮಾಡಬೇಕಾಗುತ್ತದೆ. ಸಂಪಾದನೆಗೋಸ್ಕರ ತೆರಿಗೆ ಹಾಕಬೇಕಾಗುತ್ತದೆ. ತೆರಿಗೆ ಹಾಕಿದರೆ ಅದರಿಂದ ಬೇರೆ ಬೇರೆ ಅಭಿ ಪ್ರಾಯ ಬರುತ್ತವೆ. ಯಾವ ಇಲಾಖೆಗೆ ಹಣ ಕಡಿಮೆ ಒದಗಿಸಬೇಕು ಎನ್ನುವ ಮಾತು ಬಂದಾಗ ಎಲ್ಲಾ ಇಲಾಖೆಗಳಿಗೂ ಪ್ರಾಮುಖ್ಯತೆ ಕೊಡಬೇಕು ಎನ್ನುವ ಅಭಿಪ್ರಾಯ ಬರುತ್ತದೆ. ಎಲ್ಲಾ ಇಲಾಖೆಗಳಿಗೂ ಸಾಕಷ್ಟು ಪ್ರಾಮುಖ್ಯತೆ ಕೊಡಬೇಕಾದರೆ ಹಣ ಹೆಚ್ಚು ಒದಗಿಸಬೇಕಾಗಿ ಬರುತ್ತದೆ. ಮಾನ್ಯ ಸದಸ್ಯರುಗಳು ಒಂದು ಮಾತನ್ನು ಹೇಳಿದ್ದಾರೆ, ಸಪ್ಲಿಮೆಂಟರಿ ಬಡ್ಜೆಟ್ಟಿನ ಬೇಡಿಕೆಯೇನಾದರೂ ಈ ಇಲಾಖೆ ಬಗ್ಗೆ ಬಂದರೆ ನಾವೆಲ್ಲರೂ ಒಪ್ಪುತ್ತೇವೆಂದು. ಅದಕ್ಕಾಗಿ ಅವರನ್ನು ವಂದಿಸುತ್ತೇನೆ. ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಈ ಇಲಾಖೆಗೆ ಎಷ್ಟು ಹಣ ಒದಗಿಸಲಾಗುತ್ತದೆ ಎಂದು ಈಗಲೇ ಹೇಳು ವುದು ಕಷ್ಟವಾಗುತ್ತದೆ. ಅದನ್ನು ಆಲೋಚನೆ ಮಾಡಬೇಕಾಗುತ್ತದೆ. ಪಶುಪಾಲನೆಯ ಬಗೆ. ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ತೀವ್ರವಾಗಿ ಮನ

(ಶ್ರೀ ಡಿ. ದೇವರಾಜ ಅರಸ್)

ಸ್ಸಿನಲ್ಲಿ ಇಟ್ಟುಕೊಂಡಿರುತ್ತೇನೆ. ಆಹಾರ ಸಮಸ್ಯೆ ಬಹಳ ಮುಖ್ಯವಾದುದು. ಇದರ ಕಡೆ ಹೆಚ್ಚು ಗಮನ ಕೊಡುವುದಕ್ಕೆ ಪ್ರಯತ್ನಮಾಡೋಣ. ಆಹಾರ ಸಮಸ್ಯೆ ಬಗ್ಗೆ ಮಾತನಾಡುವಾಗ, ಪಶು ಪಾಲನೆ ಯಾವ ಪಾತ್ರವನ್ನು ವಹಿಸಿದೆ ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನವನ ಚರಿತ್ರೆ ತೆಗೆದುಕೊಂಡರೆ, ಬಹಳ ವರ್ಷಗಳ ಹಿಂದಿನ ಮಾನವ ತನ್ನ ಆಹಾರವನ್ನು ಯಾವ ರೀತಿ ಒದಗಿಸಿಕೊಳ್ಳುತ್ತಿದ್ದ ಎಂದರೆ ಕಾಡಿನಲ್ಲಿರುವ ಗೆಡ್ಡೆ ಗೆಣಸು ಮತ್ತು ಇತರ ಪ್ರಾಣಿಗಳನ್ನು ತನ್ನ ಆಹಾರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದ. ಅವನು ಭೂಮಿಯನ್ನು ಹದ ಮಾಡಿ, ಸಸಿ ನೆಟ್ಟು ಆಹಾರ ಬೆಳೆಯುತ್ತಿರಲಿಲ್ಲ. ನಮ್ಮ ದೇಶಕ್ಕೆ ಪ್ರಥಮವಾಗಿ ಆರ್ಯರು ಬಂದಾಗ, ಅವರು ಪಶು ಪಾಲನೆ ಮಾಡುತ್ತಿದ್ದರೆಂದು ಗೊತ್ತಾಗಿದೆ. ವ್ಯವಸಾಯ ಎರಡನೆಯದಾಗಿ ಬಂದಿದೆ. ಮಾನ್ಯ ಪ್ರಭಾಕರ್ ಅವರು ಹೇಳಿದರು, ದನಕಾಯುವವರನ್ನು ನಿಕೃಷ್ಟರಾಗಿ ಕಾಣುತ್ತಾರೆಂದು. ಹಸು ಗಳಿಗಿರುವ ಗೌರವ ಹೋಗಿ ಈ ರೀತಿಯ ವ್ಯಂಗ ಅರ್ಥ ಬಂದಿದೆಯೆಂದು ಕಾಣುತ್ತದೆ. ದನ ಕಾಯು ವುದು ನಿಕೃಷ್ಟವಾದ ಕೆಲಸವೆಂದು ಹೇಳುತ್ತಿದ್ದವರು ಇವತ್ತಿನ ದಿವಸ ದನ ಸಾಕುವುದು ಒಳ್ಳೆಯ ಕಸಬೆಂದು ತಿಳಿದಿದ್ದಾರೆ. ದನಗಳ ಸಾಕಾಣಿಕೆ ಬಗ್ಗೆ ತೀವ್ರವಾದ ಆಸಕ್ತಿ ವಹಿಸಬೇಕೆಂದು ತಾವು ಹೇಳಿದ್ದೀರಿ. ಪುರಾಣ ಮತ್ತು ಕಥೆಗಳಲ್ಲಿ ಹೇಳಿದೆ, ಶ್ರೀಕೃಷ್ಣ ದನಕಾಯುವವನಾಗಿದ್ದ ಎಂದು. ಆ ಕಾಲಕ್ಕೆ ಹಸುಗಳಲ್ಲಿ ಏನು ಒಂದು ಪೂಜ್ಯ ಭಾವನೆ ಇತ್ತೋ ಅದೇ ಭಾವನೆ ಮತ್ತೆ ಈಗ ಜನರಲ್ಲಿ ಬರುತ್ತಿದೆ. ಹಾಲಿನ ಬಗ್ಗೆ ಶ್ರೀಮಾನ್ ಕೋಟಾವಳೆಯವರು ಕೆಲವು ಅಂಕಿಅಂಶ ಗಳನ್ನು ಕೊಟ್ಟರು. ನಾವು ಹಾಲನ್ನು ಎಷ್ಟರಮಟ್ಟಿಗೆ ಉತ್ಪಾದನೆ ಮಾಡುತ್ತಿದ್ದೇವೆ, ಬೇರೆ ರಾಷ್ಟ್ರಗಳಲ್ಲಿ ಯಾವ ರೀತಿ ಉತ್ಪಾದನೆ ಮಾಡುತ್ತಿದ್ದಾರೆ ಎಂಬುದನ್ನು ಹೇಳಿದರು. ಪರ್ ಕ್ಯಾಪಿಟಾ ಕನ್‌ಸಮ್‌ಷನ್ ಇಂಡಿಯಾ ದೇಶದಲ್ಲಿ 5 ಔನ್ಸ್ ಎಂದು ಹೇಳಿದ್ದಾರೆ. ಮೈಸೂರು ರಾಜ್ಯದಲ್ಲಿ 2 ಔನ್ಸ್ ಅದಕ್ಕಿಂತ ಕಡಿಮೆ ಎಂದು ಹೇಳಿದ್ದಾರೆ. ಅವರೇಜ್ 5 ಔನ್ಸ್ ಇರುವುದಕ್ಕೆ ಕಾರಣವಿದೆ. ನಮ್ಮ ದೇಶದ ಉತ್ತರಭಾಗದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿದೆಯೆಂಬುದನ್ನು ನಾವು ಕಾಣಬಹುದು. ಅಲ್ಲಿರತಕ್ಕಂಥ ದನಗಳ ತಳಿಗಳು ಹೆಚ್ಚು ಹಾಲನ್ನುಕೊಡುತ್ತವೆ. ದಕ್ಷಿಣ ಭಾಗದಲ್ಲಿ ಅಂತಹ ಒಳ್ಳೆಯ ತಳಿಗಳಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಅಮೃತಮಹಲ್ ತಳಿಗಳು ಇವೆ. ಹೊಸ ಮೈಸೂರು ಭಾಗದಲ್ಲಿರುವ ಕೃಷ್ಣಾವ್ಯಾಲಿ ಪ್ರದೇಶದಲ್ಲಿರುವ ಹಸುಗಳು ಎರಡು ಮೂರು ಲೀಟರ್ ಹಾಲನ್ನು ಮಾತ್ರ ಕೊಡುತ್ತವೆ. ಇತ್ತೀಚೆಗೆ ಯಾವ ಯಾವ ಭಾಗದಲ್ಲಿರುವ ಹಸುಗಳು ಎಷ್ಟು ಹಾಲು ಕೊಡುತ್ತವೆಂಬುದರ ಬಗ್ಗೆ ಸರ್ವೆ ಮಾಡಿದ್ದೇವೆ. ಬೆಂಗಳೂರಿನ ಸುತ್ತಮುತ್ತಲಿರುವ ಹಸುಗಳ ಸರಾಸರಿ ಲೆಕ್ಕ ತೆಗೆದುಕೊಂಡರೆ ಅರ್ಧ ಲೀಟರ್ ಹಾಲನ್ನೂ ಸಹ ಸರಿಯಾಗಿ ಕೊಡುವುದಿಲ್ಲ. ಗೋಸಂಪತ್ತನ್ನು ಹೆಚ್ಚಿಸಬೇಕು, ಹಾಲನ್ನು ಹೆಚ್ಚಿಸಬೇಕು ಎನ್ನುವಾಗ ದನಗಳನ್ನು ಚೆನ್ನಾಗಿ ಸಾಕಿ ಅವುಗಳನ್ನು ಉತ್ತಮರೀತಿಯಲ್ಲಿ ಅಭಿವೃದ್ಧಿಪಡಿಸಬೇಕು. ಆ ಮೂಲಕ ಹೆಚ್ಚು ಹಾಲನ್ನು ನಿರೀಕ್ಷಣೆ ಮಾಡಬಹುದು. ಅದಕ್ಕೆ ಪೂರ್ವಭಾವಿಯಾಗಿ ಅನೇಕ ಮಾನ್ಯ ಸದಸ್ಯರುಗಳು ಹೇಳಿದಂತೆ, ದನಗಳಿಗೆ ಬೇಕಾಗುವ ಮೇವು ಮತ್ತು ಅವಕ್ಕೆ ಬೇಕಾಗುವ ಇತರ ತಿನಸುಗಳು ಏನಿವೆ, ಅವುಗಳು ಸರಿಯಾಗಿ ಒದಗುತ್ತಿವೆಯೆ ಎಂದು ನೋಡಬೇಕು.

ಹಿಂಡಿ, ಹೊಟ್ಟು, ಹತ್ತಿಬೀಜ ಮತ್ತು ಇದಕ್ಕೆ ಬೇಕಾದ ಲವಣಗಳು ಇವುಗಳನ್ನು ಯಾವ ಪ್ರಮಾಣದಲ್ಲಿ ಒದಗಿಸುತ್ತಾ ಇದ್ದೇವೆ ಅದನ್ನು ಉತ್ತಮಪಡಿಸುವುದು ಹೇಗೆ ಎನ್ನುವ ವಿಚಾರವನ್ನು ಮೊದಲು ಪ್ರಸ್ತಾಪ ಮಾಡದೆ ಯಾವುದೇ ರೀತಿಯಲ್ಲಿ ಹಾಲಿನ ಅಭಿವೃದ್ಧಿಯಾಗಲಿ ಅಥವಾ ಕೋಳಿ ಅಭಿವೃದ್ಧಿ ಮಾಡುವುದಾಗಲಿ ಮಾತನಾಡುವುದರಲ್ಲಿ ಅರ್ಥವಿಲ್ಲ. ನಮ್ಮಲ್ಲಿ ಎಲ್ಲಾ ವಿಚಾರದಲ್ಲೂ ಕೂಡ ಕನ್‌ಫ್ಯೂಸ್ಡ್ ಅಥವಾ ಡಬ್ಬಲ್ ಥಿಂಕಿಂಗ್ ಇದೆ. ಒಂದು ಕಡೆ ಎಲ್ಲರೂ ಹೇಳುತ್ತೇವೆ ತಳಿ ಅಭಿವೃದ್ಧಿ ಆಗಬೇಕು, ಮೊಟ್ಟೆ ಹೆಚ್ಚಾಗಿ ಉತ್ಪಾದನೆಯಾಗಬೇಕು, ಮಾಂಸ ಆಗಬೇಕು, ನಿಜ. ಆದರೆ ನಮ್ಮ ದೇಶದಲ್ಲಿ ಊಟ ಮಾಡತಕ್ಕ ಆಹಾರದ ಪದ್ಧತಿಯಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು; ಅದು ಯಾವ ರೀತಿಯಲ್ಲಿ ಎಂದರೆ, ಸೀರಿಯಲ್ಸ್ ಮತ್ತು ಮಿಲೆಟ್ಸ್‌ನ್ನು ಹೆಚ್ಚಾಗಿ ತಿನ್ನುತ್ತೇವೆ ಅದನ್ನು ಕಡಿಮೆ ಮಾಡಬೇಕು. ಏಕೆ ಎನ್ನುವುದನ್ನು ಸೈಂಟಿಫಿಕ್ ಆಗಿ ಪ್ರೂವ್ ಮಾಡಿದ್ದಾರೆ. ನಾನ್ ವೆಜಿ ಟೇರಿಯನ್ಸ್ ಮತ್ತು ಅದರಲ್ಲೂ ವೆಜಿಟೇರಿಯನ್ಸ್‌ಗೆ ಹಾಲು ಬೇಕೇ ಬೇಕು. ಮನುಷ್ಯನ ಅಭಿವೃದ್ಧಿಗೆ ಪ್ರೋಟೀನ್‌ನ ಅಂಶ ಬೇಕೇ ಬೇಕು. ಮಾಂಸ ಇಲ್ಲದೇ ಹೋದರೂ ಹಾಲು ಬೇಕೇ ಬೇಕಾಗುತ್ತದೆ. ಇತ್ತೀಚೆಗೆ ವೆಜಿಟೇರಿಯನ್ಸ್ ಕೂಡ ಮೊಟ್ಟೆಯನ್ನು ಉಪಯೋಗಿಸುತ್ತಾ ಇರುವುದರಿಂದ ಮೊಟ್ಟೆಯೂ ಕೂಡ ಬೇಕೇಬೇಕಾಗಬಹುದು. ಇವುಗಳನ್ನು ಒದಗಿಸಬೇಕಾದರೆ ಒಂದು ಮೊಟ್ಟೆಯನ್ನಾಗಲಿ ಒಂದು ಲೀಟರ್ ಹಾಲನ್ನಾಗಲಿ ಯಾವ ರೀತಿ ಉತ್ಪಾದನೆ ಮಾಡಬೇಕು ಎನ್ನುವುದು ನಮ್ಮ ಮುಂದಿ ರುವ ಪ್ರಶ್ನೆ. ಅನ್ನ, ಜೋಳ, ರಾಗಿ ತಿನ್ನುವುದರಿಂದ ಶರೀರ ಪೋಷಣೆ ಪೂರ್ತಿಯಾಗಿ ಆಗುವುದಿಲ್ಲ;

ಇಂಡಿಯಾ ದೇಶದಲ್ಲಿ ಮಿಲೆಟ್ಸ್ ಮತ್ತು ಸೀರಿಯಲ್ಸ್ ಕಡಿಮೆಯಾಗಿದೆ ಎಂದು ಹೇಳುವುದಕ್ಕೆ ಕಾರಣ ವೇನೆಂದರೆ, ಬೇರೆ ಆಹಾರ ಯಾವುದೂ ಇಲ್ಲದೆ ಇರುವಾಗ ಬೇರೆ ದೇಶದಲ್ಲಿ 8-10 ಜನ ಊಟ ಮಾಡ ತಕ್ಕ ಸೀರಿಯಲ್ಸ್‌ನ್ನು ನಮ್ಮ ಇಂಡಿಯಾದೇಶದಲ್ಲಿ ನಾವು ಒಬ್ಬರೇ ಊಟ ಮಾಡುತ್ತೇವೆ. ನಮ್ಮ ಶರೀರಕ್ಕೆ ಬೇಕಾದ ಪೌಷ್ಟಿಕ ಆಹಾರ ಹೊಂದಲು ಜಿಡ್ಡಿನ ಆಹಾರ ಮತ್ತು ಪ್ರೋಟೀನ್ ಆಹಾರ ಒದಗಿಸುವುದಾದರೆ ಸ್ವಾಭಾವಿಕವಾಗಿ ಕಾಲಕ್ರಮದಲ್ಲಿ ಸೀರಿಯಲ್ಸ್ ಮತ್ತು ಮಿಲೆಟ್ಸ್‌ಗಳನ್ನು ಹೆಚ್ಚಳವಾಗಿ ಮತ್ತು ನೇರವಾಗಿ ತಿನ್ನಬೇಕಾಗಿ ಬರುವುದಿಲ್ಲ. ಇದು ನಮ್ಮ ಅನುಭವದಲ್ಲಿರುವ ವಿಚಾರ. ಒಬ್ಬ ಮನುಷ್ಯ ಒಂದು ದಿವಸಕ್ಕೆ ಅರ್ಧ ಸೇರು ಅಕ್ಕಿ ಊಟ ಮಾಡುತ್ತಾ ಇದ್ದರೆ ಜಿಡ್ಡಿನ ಪದಾರ್ಥ ಹೆಚ್ಚಾಗಿ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದರಲ್ಲಿ ಅರ್ಧ ಕಡಿಮೆ ಊಟ ಮಾಡುತ್ತಾನೆ, ಇದು ನಮ್ಮ ಅನುಭವಕ್ಕೆ ಬಂದಿರತಕ್ಕ ವಿಚಾರ.

ಇದರ ಜೊತೆಗೆ ಮನುಷ್ಯ ತಿನ್ನುವುದಕ್ಕೆ ಆಗದೆ ಇರತಕ್ಕ ಕೆಲವು ವಸ್ತುಗಳು ಇವೆ. ಸೀರಿಯಲ್ಸ್ ಮತ್ತು ಮಿಲೆಟ್ಸ್‌ನಿಂದ ಬರತಕ್ಕ ಬೈ ಪ್ರಾಡಕ್ಟ್ಸ್‌ಗಳು. ಅವುಗಳನ್ನು ಮನುಷ್ಯ ನೇರವಾಗಿ ತಿನ್ನುವು ದಕ್ಕೆ ಆಗುವುದಿಲ್ಲ. ದನಗಳಿಗೆ ಮತ್ತು ಕೋಳಿಗಳಿಗೆ ಬೇಕಾದ ಆಹಾರವನ್ನು ಒದಗಿಸಬೇಕು, ಅವಕ್ಕೆ ಬೇಕಾದ ಹುಲ್ಲನ್ನು ಒದಗಿಸಬೇಕು. ಇದು ಬರೀ ಮೈಸೂರು ಸರ್ಕಾರದ ವಿಚಾರವೇ ಅಲ್ಲ ಇಡೀ ಇಂಡಿಯಾದೇಶದಲ್ಲಿ ಇರತಕ್ಕ ಒಂದು ವಿಚಾರವಾಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳ ಬಹುದು; ಅದೇನೆಂದರೆ ಅವಕ್ಕೆ ಬೇಕಾದಂತಹ ಆಹಾರ ಆಯಿಲ್ ಕೇಕ್ಸ್, ನೆಲಗಡಲೆಕಾಯಿ ಹಿಂಡಿ, ಇವುಗಳನ್ನೆಲ್ಲಾ ಪರದೇಶಗಳಿಗೆ ಕಳುಹಿಸುತ್ತಾ ಇದ್ದೇವೆ. ಒಂದು ಕಾಲದಲ್ಲಿ 350 ಅಥವಾ 400 ರೂಪಾಯಿ ಒಂದು ಟನ್‌ಗೆ ಇದ್ದಂಥ ನೆಲಗಡಲೆಕಾಯಿ ಹಿಂಡಿ ಇವತ್ತು 850-900 ರೂಪಾಯಿ ಆಗಿದೆ. ಇದಕ್ಕೆ ಕಾರಣ ಅವುಗಳನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾ ಇದ್ದೇವೆ. ಅವುಗಳ ಒಟ್ಟು ಮೊತ್ತ 50 ಕೋಟಿ ರೂಪಾಯಿ ಆಗುತ್ತದೆ. ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ನಮ್ಮ ಮೈಸೂರನ್ನೇ ತೆಗೆದುಕೊಳ್ಳುವುದಾದರೆ, ಇಲ್ಲಿಂದ ಬತ್ತದ ಹೊಟ್ಟು ಹೊರಗೆ ಹೋಗುತ್ತಾ ಇದೆ. ಗೋಧಿ ಹೊಟ್ಟು ನಮ್ಮಲ್ಲಿ ಉತ್ಪಾದನೆ ಆಗುವುದಿಲ್ಲ ಹೊರಗಡೆಯಿಂದ ನಮ್ಮಲ್ಲಿಗೆ ಬರುತ್ತದೆ. ನಾವು ನೋಡಿದ್ದರಲ್ಲಿ ಆಂಧ್ರಪ್ರದೇಶದಲ್ಲಿ ಕೆಲವು ಮಿಲ್ಲುಗಳನ್ನು ಇಟ್ಟುಕೊಂಡಿದ್ದಾರೆ, ಅಲ್ಲಿ ಬತ್ತದ ಹೊಟ್ಟಿ ನಿಂದ ಎಣ್ಣೆ ತೆಗೆಯುತ್ತಾರೆ. ಅವಕ್ಕೆ ಹೆಚ್ಚು ಹೊಟ್ಟು ನಮ್ಮ ದೇಶದಿಂದ ಹೊರಕ್ಕೆ ಹೋಗುತ್ತಾ ಇದೆ. ಅದರ ಜೊತೆಗೆ ನಮ್ಮಲ್ಲಿ ಸರಿಯಾದ ಗೊತ್ತಾದ ಒಂದು ನೀತಿ ಈ ಫಾಡರ್ ಮತ್ತು ಫೀಡ್ ವಿಚಾರ ದಲ್ಲಿ ಹಾಕಿಕೊಳ್ಳದಿದ್ದರೆ ನಮಗೆ ಒದಗಬೇಕಾಗಿರತಕ್ಕ ಫಾಡರ್‌ನ್ನು ಒದಗಿಸಿಕೊಳ್ಳುವುದಕ್ಕೆ ಆಗುವು ದಿಲ್ಲ, ಫೀಡ್ ಕೂಡ ಒದಗುವುದಿಲ್ಲ. ಇಲ್ಲಿ ಹೆಚ್ಚು ದನಗಳನ್ನು ಸಾಕಬೇಕು, ಹೆಚ್ಚು ಕೋಳಿಗಳನ್ನು ಸಾಕಬೇಕೆಂದು ಹೇಳುತ್ತೇವೆ, ಅದಕ್ಕೆ ಕೆಲವರು ಹೇಳುತ್ತಾ ಇದ್ದರು. ಕೋಳಿ ಸಾಕುವುದಕ್ಕೆ ಅದರ ಆಹಾರದ ಬೆಲೆ ಜಾಸ್ತಿಯಾಗಿರುವುದರಿಂದ ಅದನ್ನು ಸಾಕುವುದು ಎಕನಾಮಿಕಲ್ ಆಗುತ್ತಿಲ್ಲ, ಮೊಟ್ಟೆಗಳನ್ನು ಹೆಚ್ಚು ಹೆಚ್ಚು ಬೆಲೆಗೆ ಮಾರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು. ಆ ಕಾರಣದಿಂದ ಈ ಆಹಾರದ ಬೆಲೆ ಹೆಚ್ಚಿಸಿಕೊಂಡು ಹೋಗುವುದರಿಂದ ಹೆಚ್ಚಾಗಿ ಕೋಳಿಗಳನ್ನು ಸಾಕುವುದಕ್ಕೆ ಕಷ್ಟವಾಗುತ್ತದೆ. ಇರತಕ್ಕ ಕೋಳಿ ಫಾರಂಗಳನ್ನೇ ಮುಚ್ಚಬೇಕಾಗುತ್ತದೆ. ಒಂದು ಇಂಟಿಗ್ರೇ ಟೆಡ್ ಪಾಲಿಸಿ ಇಲ್ಲದೇ ಇರುವುದರಿಂದ—ನಮಗೆ ಹೆಚ್ಚು ವಿದೇಶೀ ವಿನಿಮಯ ಬೇಕು ಅಂತ ಹೇಳಿ ಪರದೇಶಗಳಿಗೆ ಎಕ್ಸ್‌ಪೋರ್ಟ್ ಮಾಡುತ್ತಾ ಇರುವುದರಿಂದ ಇದು ಒಂದು ಸಮಸ್ಯೆಯಾಗಿ ಪರಿಣಮಿ ಸಿದೆ. ಇದನ್ನು ತೀವ್ರವಾಗಿ ಪುನರ್ವಿಮರ್ಶೆ ಮಾಡಬೇಕು, ಕೇಂದ್ರಸರ್ಕಾರದವರೇ ಇದನ್ನು ಮಾಡಬೇಕಾದೀತು ಎಂದು ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಆಹಾರ ಮತ್ತು ಹುಲ್ಲು ಎಂದು ಹೇಳಿದೆ. ಹುಲ್ಲನ್ನು ಬೆಳೆಯಬೇಕಾದರೆ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಘೋರ್ಪಡೆಯವರು ಉತ್ತಮವಾದ ಸಲಹೆಯನ್ನು ಕೊಟ್ಟರು, ಎಲ್ಲಾ ಕಡೆಯೂ ಹುಲ್ಲನ್ನು ಹೆಚ್ಚಾಗಿ ಬೆಳೆಯಬೇಕು. ಬೆಂಗಳೂರು ಮಿಲ್ಕ್ ಸಪ್ಲೈ ಸ್ಕೀಂನಲ್ಲಿ ಅದಕ್ಕಾಗಿಯೇ ಸುಮಾರು 200 ಬಾವಿಗಳನ್ನು ತೆಗೆದು ಹುಲ್ಲಿನ ಬೀಜಗಳನ್ನು ಮತ್ತು ದಂಟನ್ನು ಅನೇಕರಿಗೆ ಹಂಚಿಕೆ ಮಾಡಿದ್ದೇವೆ. ಜನರಿಗೆ ಈ ಹುಲ್ಲನ್ನು ಬೆಳೆಯುವುದರಿಂದ ಲಾಭ ಎಂಬುದು ಗೊತ್ತಾಗಿ ಬೆಂಗಳೂರಿನ ಸುತ್ತಮುತ್ತಲೂ ಹುಲ್ಲನ್ನು ಬೆಳೆದು ಲಾಭ ಹೊಂದುತ್ತಾ ಇದ್ದಾರೆ. ಬಾವಿ ನೀರಿನ ಸೌಕರ್ಯ ಇದ್ದು ಅನೇಕರು ಆ ಭೂಮಿಯನ್ನು ಬೇರೆ ಯಾವುದಕ್ಕೂ ಉಪಯೋಗಿಸದೇ ಹುಲ್ಲನ್ನು ಬೆಳೆಯುವುದಕ್ಕಾಗಿಯೇ ಉಪಯೋಗಿಸುತ್ತಾ ಇದ್ದಾರೆ. ಇನ್ನು ಕೆಲವು ಜನರು ತಾವು ಬೆಳೆದ ಆ ಹುಲ್ಲನ್ನು ಮಾರಾಟ ಮಾಡಿ ಹೆಚ್ಚು ದುಡ್ಡನ್ನು ಸಂಪಾದನೆ ಮಾಡುತ್ತಾ ಇದ್ದಾರೆ, ಈ ರೀತಿ ಬಾವಿಗಳನ್ನು ಕೆಲವು ಕಡೆ ಬೇರ ಯಾವುದನ್ನೂ ಬೆಳೆಯದೇ ಬರೀ ಹುಲ್ಲನ್ನು ಬೆಳೆ ಯುವುದಕ್ಕಾಗಿಯೇ ಉಪಯೋಗಮಾಡಿ ದುರುಪಯೋಗ ಮಾಡಿರುವುದು ನಿಜ. ಇದನ್ನೆಲ್ಲಾ ಕಾಲಾನುಕ್ರಮದಲ್ಲಿ ಸರಿಪಡಿಸಬೇಕಾಗುತ್ತದೆ. ಶ್ರೀಮಾನ್ ಘೋರ್‌ಪಡೆಯವರು ಹೇಳಿದ ಹಾಗೆ ಒಂದು ಎಕರೆಯಲ್ಲಿ ಹುಲ್ಲನ್ನು ಬೆಳೆಯುವುದರಿಂದ ಕನಿಷ್ಟ ಎಂದರೆ 5-6 ದನಗಳಿಗೆ ವರ್ಷವೆಲ್ಲಾ

(ಶ್ರೀ ಡಿ. ದೇವರಾಜ ಅರಸ್)

ಆಗುತ್ತದೆ. ಆ ರೀತಿ ಹುಲ್ಲನ್ನು ಒದಗಿಸುವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾದರೆ ಪ್ರಚಾರ ಮಾಡುವ ಅಗತ್ಯ ಇವೆ, ಅದನ್ನು ಮಾಡೋಣ. ಹೀಗೆ ನಮ್ಮಲ್ಲಿ ಸುಮಾರು 5-6 ಹಸುಗಳಿಗೆ ವರ್ಷದಲ್ಲಿ ಎಲ್ಲಾ ಕಾಲದಲ್ಲಿಯೂ ಹುಲ್ಲನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ಜನರಿಗೆ ಹೆಚ್ಚು ಪ್ರಚಾರ ಮಾಡಬೇಕಾಗಿದೆ.

ಇನ್ನು ಗೋಮಾಳ ಮತ್ತು ಅಮೃತಮಹಲ್ ಕಾವಲುಗಳ ವಿಚಾರಕ್ಕೆ ಬಂದರೆ—ನಮ್ಮಲ್ಲಿ ಇರತಕ್ಕ ಜಾನುವಾರು ಸಂಪತ್ತು, ಕೋಳಿಗಳನ್ನು ಬಿಟ್ಟರೆ, ದನ, ಕುರಿ, ಆಡು, ಎಮ್ಮೆ, ಹಂದಿ ಇತ್ಯಾದಿ ಗಳೆಲ್ಲಾ ಸೇರಿ ಸುಮಾರು ಎರಡೂವರೆ ಕೋಟಿಯಾಗಬಹುದು. ಇದರಲ್ಲಿ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ದನ ಎಮ್ಮೆಗಳು ಇರಬಹುದು. ಇಷ್ಟು ಪ್ರಾಣಿಗಳಿಗೆ ನಾವು ಎಷ್ಟು ಭೂಮಿಯನ್ನು ಹುಲ್ಲುಗಾವಲಿಗಾಗಿ ಅಮಾನತ್ತು ಇಡಬೇಕೆಂಬ ವಿಷಯಕ್ಕೆ ಬಂದರೆ, ನಮ್ಮ ಹಿಂದಿನ ಲೆಕ್ಕಾಚಾರದ ಪ್ರಕಾರ ನೂರು ದನಗಳಿಗೆ 30 ಎಕರೆ ಭೂಮಿಯನ್ನು ಇಡಬೇಕೆಂದು ನಿಗದಿಯಾಗಿತ್ತು. ಹಿಂದಿನವರು ಪ್ರತಿಯೊಂದು ಹಳ್ಳಿಗೂ ಇಷ್ಟು ಗೋಮಾಳದ ಭೂಮಿ ಇರಬೇಕೆಂದು ನಿಗದಿ ಮಾಡಿಟ್ಟಿದ್ದರು. ಆದರೆ ಇತ್ತೀಚೆಗೆ ದೇಶಾದ್ಯಂತವೂ ಜನ ಸಂಖ್ಯೆ ಹೆಚ್ಚಾದುದರಿಂದ ಸರ್ಕಾರದವರು ಹೆಚ್ಚು ಜಾನುವಾರು ಗಳನ್ನು ಅಭಿವೃದ್ಧಿ ಮಾಡುವುದರ ಕಡೆಗೆ ಇದ್ದ ಗಮನವನ್ನು ಕಡಮೆ ಮಾಡುತ್ತಾ ಬಂದರು. ಹಾಗೂ ಇದರ ಬಗ್ಗೆ ಅನುಸರಿಸುತ್ತಿದ್ದ ತಮ್ಮ ನೀತಿಯನ್ನೂ ಸಹಾ ಸಡಿಲ ಮಾಡುತ್ತಾ ಬಂದರು. ಗೋಮಾಳ ಕ್ಕಾಗಿ ರಿಜಸ್ಟ್ರಾಗಿದ್ದ ಭೂಮಿಯನ್ನು ವ್ಯವಸಾಯಕ್ಕಾಗಿ ಸರ್ಕಾರದವರು ಎಲ್ಲೆಲ್ಲಿ ಒತ್ತಾಯ ಬಂತೋ ಅಲ್ಲೆಲ್ಲಾ ಬಿಟ್ಟುಕೊಡುತ್ತಾ ಬಂದಿರುವುದನ್ನು ನಾವೀದಿವಸ ನೋಡುತ್ತಿದ್ದೇವೆ. ಲೆಕ್ಕದಲ್ಲಿ ಈ ದಿವಸ ಗೋಮಾಳದ ಭೂಮಿ ಅಂತ ಇದ್ದರೂ ಅದನ್ನು ಹೋಗಿ ನೋಡಿದರೆ ಆ ಭೂಮಿ ಅಲ್ಲಿರುವುದಿಲ್ಲ, ಅದನ್ನು ಯಾರೋ ಉಳುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇದೇ ರೀತಿಯಾಗಿ ಅನೇಕ ಕಡೆಗಳಲ್ಲಿ ಸರ್ಕಾರದವರು ಇಟ್ಟುಕೊಂಡಿದ್ದ ಅಮೃತಮಹಲ್ ಕಾವಲಿನ ಭೂಮಿಯನ್ನೂ ಕೂಡ ವ್ಯವಸಾಯಕ್ಕೆ ಬಿಟ್ಟುಕೊಟ್ಟಿದ್ದಾರೆ. ಈ ಭೂಮಿಯು ಇದ್ದರೆ ಇನ್ನು ಒಂದು ಲಕ್ಷ ಎಕರೆಗಳಿದ್ದರೆ ಹೆಚ್ಚಾಯಿತು. ಈ ಭೂಮಿಯನ್ನೂ ಸಹಾ ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂಬ ಒತ್ತಾಯ ಜನರಿಂದ ಬರುತ್ತಿದೆ. ಆದರೆ ಆ ಭೂಮಿಯನ್ನು ಸರ್ಕಾರದವರೇ ಇಟ್ಟುಕೊಂಡು ಅಲ್ಲಿ ದನಗಳ ಅಭಿವೃದ್ಧಿ ಯನ್ನೂ ಮತ್ತು ಹುಲ್ಲನ್ನು ಬೆಳೆಸತಕ್ಕ ಕಾರ್ಯವನ್ನೂ ನಡೆಸೋಣ ಎಂಬ ಒಂದು ನೀತಿಯನ್ನು ಅನು ಸರಿಸೋಣವೆಂಬುದು ಸರ್ಕಾರದವರ ಇಂದಿನ ಅಭಿಪ್ರಾಯ ಆಗಿದೆ. ನಮ್ಮ ಹಿಂದಿನವರು ಎಲ್ಲಿ ಉತ್ತಮವಾದ ಹುಲ್ಲನ್ನು ಬೆಳೆಯಬಹುದು ಎಂಬುದನ್ನು ನೋಡಿ ಅಂಥಾ ಒಳ್ಳೆಯ ಭೂಮಿಯನ್ನೇ ಕಾವಲುಗಳಾಗಿ ಇಟ್ಟುಕೊಂಡಿದ್ದರು. ಅಲ್ಲಿ ನೀರಿನ ಸೌಕರ್ಯ ಕೂಡ ಇದೆ. ನಾವು ಇಂಥಾ ಭೂಮಿ ಯನ್ನು ವಿಲೇವಾರಿ ಮಾಡಿದರೆ ನಮಗೆ ಇನ್ನು ಇಂಥಾ ಒಳ್ಳೆಯ ಭೂಮಿ ಪುನಃ ಸಿಕ್ಕುವುದಿಲ್ಲ. ಆದುದರಿಂದ ಹಾಲಿ ಇರತಕ್ಕ ಅಮೃತಮಹಲ್ ಕಾವಲಿನ ಭೂಮಿಯನ್ನು ಉಳಿಸಿಕೊಂಡು ಸರ್ಕಾರ ದವರೇ ಅಲ್ಲಿ ದನಗಳ ಅಭಿವೃದ್ಧಿ ಹಾಗೂ ಒಳ್ಳೆಯ ಹುಲ್ಲನ್ನು ಬೆಳೆಸಲು ಪ್ರಯತ್ನ ಮಾಡಬೇಕೆಂಬುದು ಸರ್ಕಾರದವರ ಅಭಿಪ್ರಾಯವಾಗಿದೆ. ಅಲ್ಲಿ ಕುರಿಗಳನ್ನು ಸಾಕುವುದಕ್ಕೂ ಕೂಡ ಅನುಕೂಲವಾಗಿದೆ.

ಇನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಅಂದರೆ, ಎಲ್ಲಾ ತಾಲ್ಲೂಕುಗಳ ಮಟ್ಟದಲ್ಲೂ ಒಂದೊಂದು ಕುರಿ ಫಾರಮ್ಮನ್ನು ತೆರೆಯಬೇಕೆಂದು ಮಾನ್ಯ ಸದಸ್ಯರುಗಳು ಸಲಹೆ ಮಾಡಿದ್ದಾರೆ. ಇನ್ನು ಕೆಲವರು ಹೀಗೆ ಹಾಲಿನ ಕೇಂದ್ರಗಳನ್ನು ತೆರೆಯಲು ಒಳ್ಳೆಯ ಕ್ಯಾಟಲ್ ಫಾರಂನ್ನು ತೆರೆಯಬೇಕೆಂದು ಹೇಳಿದ್ದಾರೆ. ಆದರೆ ಹಾಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಇವುಗಳನ್ನು ತೆರೆಯುವುದಕ್ಕೆ ಸಾಧ್ಯವಾಗುತ್ತೆಂಬ ವಿಷಯವನ್ನು ನಾನು ಹೇಳಲಾರೆ. ಒಂದು ತಾಲ್ಲೂಕ್ ಬೋರ್ಡಿನವರು ಒಂದು ಕ್ಯಾಟಲ್ ಫಾರಂನ್ನು ಅಂದರೆ ಒಂದು ನೂರು ದನಗಳನ್ನು ಇಟ್ಟುಕೊಳ್ಳಬೇಕು ಎಂದು ಪ್ರಯತ್ನ ಮಾಡಿದರೆ ಅದಕ್ಕೆ ತಗಲುವ ಒಂದು ಅಂದಾಜು ಎಷ್ಟಾಗು ತ್ತದೆ ಎಂದರೆ, ಎರಡೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅಂದರೆ, ಅದಕ್ಕೆ ಬೇಕಾದ ಹುಲ್ಲುಗಾವಲಿನ ಭೂಮಿ, ಬಾವಿ ಇತ್ಯಾದಿಗಳೆಲ್ಲಾ ಸೇರಿ ಅದು ಎರಡೂವರೆ ಲಕ್ಷಕ್ಕೆ ಬರುತ್ತೆ. ಅಷ್ಟು ಹಣ ಬೇಕಾಗುತ್ತದೆ. A sum of Rs. 2.45 lakhs towards non-recurring charges and Rs. 1.65 lakhs towards recurring annual cost will have to be spent. For the entire 170 taluks in the State, a sum of Rs. 6¾ crores is required. ನಮ್ಮಲ್ಲಿ ಈಗ 170 ತಾಲ್ಲೂಕುಗಳಿವೆ. ನಾವು ಈ ಯೋಜನೆಯನ್ನು ತಾಲ್ಲೂಕ್ ಮಟ್ಟ ದಲ್ಲಿ ತೆಗೆದುಕೊಳ್ಳಬೇಕೆಂದರೆ ಇದಕ್ಕೆ ಒಟ್ಟು ಆರೂಮುಕ್ಕಾಲು ಏಳು ಕೋಟಿ ರೂಪಾಯಿ ಬೇಕು. ಇವನ್ನು ಎಲ್ಲಾ ತಾಲ್ಲೂಕುಗಳ ಮಟ್ಟದಲ್ಲಿ ಮಾಡುವುದಕ್ಕಾಗದಿದ್ದರೂ ಎಲ್ಲೆಲ್ಲಿ ಈಗ ಅಮೃತ ಮಹಲ್ ಕಾವಲಿನ ಭೂಮಿ ಇರುತ್ತದೆಯೋ, ಅಥವಾ ರೆವಿನ್ಯೂ ಬಾಬಿನಲ್ಲಿ ನೂರಾರು ಎಕರೆ ಭೂಮಿ

ಎಲ್ಲೆಲ್ಲಿ ಇರುತ್ತದೋ ಅಂಥಾ ಕಡೆಗಳಲ್ಲಿ ಮಾತ್ರ ಭೂಮಿ ಇರತಕ್ಕ ಕಡೆ ತಾಲ್ಲೂಕ್ ಬೋರ್ಡಿನವರು ಮುಂದೆ ಬಂದರೆ, ಯಾರಿಗೆ ಆಸಕ್ತಿ ಇದೆಯೋ ಅಂಥವರಿಗೆ ಸರ್ಕಾರ ಸಾಧ್ಯವಾದ ಸಹಾಯ ನೀಡುವುದಕ್ಕೆ ಸಿದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆದರೆ ಅವರು ನೂರಾರು ಹಸುಗಳನ್ನು ಇಟ್ಟುಕೊಳ್ಳುವಾಗ ವಿದೇಶದಿಂದ ತರಿಸುವ ತಳಿ ಇಲ್ಲವೇ ಡೇನಿಷ್ ತಳಿ ಇಂಥವುಗಳನ್ನು ಇಟ್ಟುಕೊಳ್ಳುವುದರ ಬದಲು ಆಯಾಯ ಸ್ಥಳೀಯ ತಳಿಗಳನ್ನೇ ಅಭಿವೃದ್ಧಿಮಾಡಿ ಇಟ್ಟುಕೊಂಡರೆ ಅವು ಅಲ್ಲಿಯ ವಾತಾವರಣಕ್ಕೂ ಚೆನ್ನಾಗಿ ಹೊಂದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹೀಗೆ ಅಲ್ಲಲ್ಲೇ ನಮ್ಮ ಲೋಕಲ್‌ಬ್ರೀಡ್ ಹೋರಿಗಳಿಂದ ಉತ್ಪತ್ತಿಯಾದ ತಳಿಯನ್ನು, ಇಲ್ಲವೇ ಕೃತಕ ಇಂದ್ರಿಯ ಗರ್ಭದಿಂದ ಉತ್ಪತ್ತಿಯಾದ ತಳಿಯನ್ನು ಅಭಿವೃದ್ಧಿಮಾಡಲು ಒಂದು ಡೈರಿ ಫಾರಂ-ಕಂ-ಕ್ಯಾಟಲ್ ಬ್ರೀಡಿಂಗ್ ಫಾರಂ ಅನ್ನು ತೆರೆಯಲು ಎಲ್ಲೆಲ್ಲಿ ಅಮೃತಮಹಲ್ ಕಾವಲು ಭೂಮಿ ಇದೆಯೋ ಅದನ್ನು ತಾಲ್ಲೂಕ್ ಬೋರ್ಡುಗಳು ಮುಂದೆ ಬಂದರೆ ಲಾಂಗ್‌ಲೀಜ್ ಒಪ್ಪಂದದ ಮೇಲೆ ಈ ಭೂಮಿಗಳನ್ನು ಕೊಡುವುದಕ್ಕೆ ಸರ್ಕಾರದವರ ಅಭ್ಯಂತರವೇನೂ ಇಲ್ಲ. ಇಷ್ಟೇ ಅಲ್ಲದೆ ಸರ್ಕಾರದವರೇ ಸ್ವತಃ ಒಂದು ದೊಡ್ಡ ಕೇಂದ್ರವನ್ನು ತೆರೆಯಬೇಕೆಂಬುದಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಈ ದಿವಸ ಯಾರಾದರೂ ಬಂದು ಸರ್ಕಾರದವರಿಗೆ ನಮಗೆ ಒಳ್ಳೆಯ ಹಾಲು ಕರೆಯತಕ್ಕ ಉತ್ತಮ ತಳಿಯ ಆಕಳನ್ನು ಕೊಡಿ ಎಂದು ಕೇಳಿದರೆ ಆ ಆಕಳು ನಮ್ಮಲ್ಲಿ ಈ ದಿವಸ ಇರುವುದಿಲ್ಲ. ಇಲ್ಲಿಯವರೆಗೂ ಇಂಥಾ ಒಂದು ಸ್ಕೀಮನ್ನು ಸರ್ಕಾರ ಕೈಗೊಂಡಿಲ್ಲ. ಇನ್ನು ಮುಂದೆ ಯಾರಾದರೂ ಖಾಸಗೀ ವ್ಯಕ್ತಿಗಳು ಇಲ್ಲವೇ ಸಹಕಾರ ಸಂಘಗಳು ಮುಂದೆ ಬಂದರೆ ನಮಗೆ ಉತ್ತಮ ತಳಿಯ ರಾಸುಗಳು ಬೇಕು ಎಂದರೆ ನಾವು ಎಲ್ಲಿಂದ ತಂದು ಕೊಡುವುದು ? ಈ ದಿವಸ ಮದ್ರಾಸಿನಿಂದ ಜನರು ಬಂದು ಉತ್ತಮ ರಾಸುಗಳನ್ನು ಇಲ್ಲಿಂದ ಕೊಂಡುಕೊಂಡು ಹೋಗುತ್ತಿದ್ದಾರೆ. ಆದರೆ ಒಳ್ಳೆಯ ಕ್ರಾಸ್‌ಬ್ರೀಡ್ ರಾಸುಗಳನ್ನು ಕೊಳ್ಳಬೇಕಾಗಿದ್ದರೆ ಜನರು ಬೆಂಗಳೂರಿಗೆ ಬರುತ್ತಾರೆ, ಇಲ್ಲವೇ ಮೈಸೂರಿಗೆ ಹೋಗುತ್ತಾರೆ. ಮೊದಲು ಕ್ರಾಸ್‌ಬ್ರೀಡ್ ರಾಸುಗಳನ್ನು ತಯಾರಿಸುವುದು 1930 ರಲ್ಲಿ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜರವರ ಕಾಲದಲ್ಲಿ ಪ್ರಾರಂಭವಾಯಿತು. ರಾಯನಕೆರೆಯಲ್ಲಿ ಮೊದಲು ಪ್ರಾರಂಭವಾದದ್ದು ತದನಂತರ ಬೆಂಗಳೂರಿಗೆ ಇದು ಹರಡಿತು. ಈ ದಿವಸ ಊಟಿಯಲ್ಲಿ ಸಹಾ ಮಿಶ್ರ ತಳಿಯ ಡೈರಿಗಳು ಇರುತ್ತವೆ. ಇಲ್ಲಿಂದ ಸೇಲಂಗೆ ನೂರಾರು ಹಸುಗಳು ಹೋಗುತ್ತಿವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹರಿಯಾಣ ಜಾತಿಯನ್ನು ತಾವು ಟ್ರೈ ಮಾಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಅದು ತ್ರೈವ್ ಆಗುವುದಿಲ್ಲ. ಅದರಿಂದ ಹೆಚ್ಚು ಹಾಲೂ ಕೂಡ ಉತ್ಪತ್ತಿಯಾಗುವುದಿಲ್ಲ. ಆದರೆ ಮುರಾಬಫೆಲೋ ಹೆಚ್ಚು ಹಾಲನ್ನು ಕೊಡುತ್ತದೆ. ನಮಗೆ ಹರಿಯಾನ ತಳಿ ಬೇಕಿಲ್ಲ. ನಮ್ಮ ದೇಶಕ್ಕೆ ಬೇಕಾಗಿರುವುದು ತಜ್ಞರ ಅಭಿಪ್ರಾಯದಂತೆ ಜೆರಸಿ ಬ್ರೀಡ್, ಜೆರಸಿ ಬುಲ್ಸ್. ಅವು ನಮ್ಮ ಸ್ಥಳದ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಸಿಂಧಿ ಬ್ರೀಡ್ ಅಷ್ಟು ಉತ್ತಮವಾದುದಲ್ಲ. ಕೆಲವು ಕಡೆ ಅವು ಚೆನ್ನಾಗಿ ಬೆಳೆಯುವುದಿಲ್ಲ. ಜೆರಸಿ ಬ್ರೀಡ್ ಎಲ್ಲಿ ಬೇಕಾದರೂ ಥ್ರೈವ್ ಆಗುತ್ತದೆ. ಕಿಲಾರ ಬ್ರೀಡ್ ಹಳ್ಳಿಕಾರ್ ಉತ್ಪಾದನೆಗಿಂತ ಹೆಚ್ಚಿಗೆ ಮಾಡಿ ಎಂದು ಘೋರ್ಪಡೆಯವರು ಹೇಳಿದರು. ಅದು ಸರಿಯಲ್ಲ. ರಾಣಿಬೆನ್ನೂರು, ಧಾರವಾಡದಲ್ಲಿರುವ ಕಿಲಾರ ಜಾತಿ ಹೋರಿ ಮೊದಲು ತೆಗೆಯಿರಿ ಸರಿಯಲ್ಲ ಎಂದು ಹೇಳುತ್ತಿದ್ದಾರೆ. ಏಕೆಂದರೆ ಈ ಕಿಲಾರ ಹೋರಿಗಳು ದಪ್ಪ ಆದರೂ ಅವುಗಳಿಗೆ ಚುರುಕು ಬುದ್ಧಿ ಇರುವುದಿಲ್ಲ ಎಂದು ಹೇಳುತ್ತಾರೆ.

SRI M. Y. GHORPADE.—What I said was that the Killara bull is useful for ploughing purposes, they are heavier animals and so they draw weight more than Hallikar bulls. I am not referring to the milk yield cows.

ಶ್ರೀ ಡಿ. ದೇವರಾಜ ಅರಸ್.—ಹಳ್ಳಿಕಾರ್ ದಪ್ಪ ಇಲ್ಲ, ಹೆಚ್ಚಿಗೆ ಭಾರ ಎಳೆಯುವುದಿಲ್ಲ ಎಂದು ಹೇಳುತ್ತಾರೆ. ನನ್ನ ಅನುಭವದಲ್ಲಿ ಅಮೃತಮಹಲ್ ಅಥವಾ ಹಳ್ಳಿಕಾರ್ ಹೋರಿಗಳು ಅಷ್ಟೇ ಚೆನ್ನಾಗಿ ಎಳೆಯುತ್ತದೆ; ಮತ್ತು ಚುರುಕಾಗಿರುತ್ತವೆ. ಸೂಕ್ಷ್ಮ ಬುದ್ಧಿಯಿಂದ ಕೆಲಸ ಮಾಡುವುವು. ಅವೇ ಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅಮೃತ್‌ಮಹಲ್ ಬುಲ್ಲನ್ನು ವರ್ಲ್ಡ್‌ವಾರ್ ಆವಾಗ ಯುದ್ಧಕ್ಕೂ ಕೂಡ ಉಪಯೋಗಿಸಿದ್ದರು.

ಶ್ರೀ ಡಿ. ದೇವರಾಜ ಅರಸ್.—ಹೀಗೆ ಮಿಶ್ರ ತಳಿ ಜಾತಿಯನ್ನು ಹೆಚ್ಚು ಹೆಚ್ಚು ಉತ್ಪತ್ತಿ ಮಾಡಬೇಕಾದುದು ತುಂಬಾ ಅಗತ್ಯ ಇದೆ. ಹೆಚ್ಚು ಹಾಲು ಉತ್ಪತ್ತಿ ಮಾಡಬೇಕು ಎಂದರೆ ಮಾನ್ಯ ಕೆ. ಎಚ್. ಪಾಟೀಲರು ಹೇಳಿದ ಹಾಗೆ ಪಂಜಾಬಿನ ಮುಖ್ಯ ಮಂತ್ರಿಗಳು ಹೇಳುತ್ತಾ ಇದ್ದರು ಒಬ್ಬ ಮನುಷ್ಯನಿಗೆ ಕುಡಿಯುವುದಕ್ಕೆ ಎರಡು ಲೋಟ ಹಾಲು ಸಿಕ್ಕುವ ಹಾಗೆ ಮಾಡಬೇಕು ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ರಾಜ್ಯಭಾರದಲ್ಲಿ ಒಂದು ಲೋಟ ಮಜ್ಜಿಗೆ ಸಿಕ್ಕಿದರೆ ಸಾಕು.

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ರಾಜ್ಯಭಾರದಲ್ಲಿ ಮಜ್ಜಿಗೆ ಸಿಕ್ಕಿದರೆ ಸಾಕು. ನಿಮ್ಮ ರಾಜ್ಯಭಾರ ಬಂದಾಗ ಹೇಗೆ ಹಾಲು ಕೊಡುತ್ತೀರಿ ನೋಡೋಣ. ಈ ರೀತಿ ಹಾಲಿನ ಉತ್ಪಾದನೆ ಜಾಸ್ತಿ ಆಗಬೇಕಾದರೆ ನಮ್ಮ ದೇಶದಲ್ಲಿ ಹಾಲು ಇರತಕ್ಕ ವಿಧವಿಧವಾದ ರಾಸುಗಳು ಏನು ಇವೆ ಅವುಗಳನ್ನು ಹೊರದೇಶದಿಂದ ಬಂದಂಥ ತಳಿಗಳೊಡನೆ ಮಿಶ್ರ ಮಾಡಿ ಮಿಶ್ರದ ಉತ್ಪಾದನೆ ಹಸುಗಳನ್ನು ಸಾಕಿದರೆ ನಮ್ಮ ದೇಶದಲ್ಲಿ ಹೆಚ್ಚು ಹಾಲು ಉತ್ಪಾದನೆ ಮಾಡುವುದಕ್ಕೆ ಸಾಧ್ಯ. ಇದು ಸಿದ್ಧಾಂತವಾದ ಮಾತು. ಇದನ್ನು ಹೇಳುವಾಗ ಹಳ್ಳಿಕಾರ್ ಮತ್ತು ಅಮೃತ್‌ಮಹಲ್ ದನಗಳನ್ನು ಮರೆತು ಬಿಡಬೇಕೆಂದಲ್ಲ. ಉಳುಮೆ ಮಾಡುವುದಕ್ಕೆ ಎತ್ತುಗಳು ಬೇಕಾಗಿದೆ, ಬೇಡ ಎಂದು ಹೇಳುವುದಿಲ್ಲ. ಎಲ್ಲಾ ಏಕಕಾಲದಲ್ಲಿ ಟ್ರ್ಯಾಕ್ಟರುಗಳಿಂದ ಭೂಮಿ ಉಳುವುದಕ್ಕೆ ಆಗುವುದಿಲ್ಲ. ಎತ್ತುಗಳು ಬೇಕು. ಹಳ್ಳಿಯ ರೈತರಲ್ಲಿ ಸಾಕಷ್ಟು ತಿಳಿವಳಿಕೆ ಬಂದಿದೆ ಮತ್ತು ಹಳ್ಳಿಕಾರ್ ಬ್ರೀಡ್ ಬಗ್ಗೆ ಸರ್ಕಾರದವರು ಇಲಾಖೆಯಿಂದಲೇ ಬ್ರೀಡಿಂಗ್ ಸ್ಟೇಷನ್‌ಗಳನ್ನು ತೆರೆದು ಅಭಿವೃದ್ಧಿ ಮಾಡಿದರು. ಇನ್ನು ಮೇಲೆ ಅದು ಅಗತ್ಯ ಇಲ್ಲ. ಅವುಗಳ ಅಭಿವೃದ್ಧಿಯನ್ನು ಹೆಚ್ಚಾಗಿ ಜನರೇ ಮಾಡಿಕೊಳ್ಳುತ್ತಿದ್ದಾರೆ. ಏತಕ್ಕೆಂದರೆ, ಅನುಕೂಲತೆಗಳು ಕೆಲವು ಕಂಡಿವೆ. ನೂರಾರು ಜಾತ್ರೆಗಳಲ್ಲಿ ಹಳ್ಳಿಕಾರ್ ಹೋರಿ ಮತ್ತು ಅಮೃತ್‌ಮಹಲ್ ಹೋರಿಗಳು ಹೆಚ್ಚಿಗೆ ಬೆಲೆಗೆ ಖರೀದಿಯಾಗುತ್ತವೆ. ಒಂದು ಜೊತೆ 4 ಸಾವಿರ ರೂಪಾಯಿನವರೆಗೂ ಹೋಗುತ್ತದೆ. ಎಲ್ಲಾ ಕಡೆಯೂ ಉತ್ತಮ ತಳಿ ಹೋರಿಗಳು ಸಿಕ್ಕುವಂತೆ ಪ್ರಯತ್ನ ಮಾಡುತ್ತೇನೆ. 30-40 ವರ್ಷಗಳಿಂದ ಒಂದು ನೀತಿ ಅನುಸರಿಸಿಕೊಂಡು ಬಂದುದರಿಂದ ಈಗ ಪರಿಸ್ಥಿತಿ ಉತ್ತಮವಾಯಿತು. ಆದರೆ ಹಾಲಿನ ಉತ್ಪಾದನೆ ಕಡಿಮೆಯಾಗುತ್ತಾ ಇದೆ. ಗೋಮಾಳ ಕಡಿಮೆ ಇರುವ ಕಾರಣ ದನಗಳ ಹಾಲಿನ ಉತ್ಪತ್ತಿ ಕಡಿಮೆ ಆಗಿದೆ. ಮಿಶ್ರ ತಳಿ ಜಾಸ್ತಿ ಮಾಡುವುದಕ್ಕೆ ಎಲ್ಲೆಲ್ಲಿ ಸರ್ಕಾರಿ ಫಾರಂ ಇವೆ. ಅಂತಹ ಕಡೆ ಮಿಶ್ರತಳಿ ಉತ್ಪಾದನೆ ಜಾಸ್ತಿ ಮಾಡಬೇಕು ಎಂದು ಸರ್ಕಾರದ ಅಭಿಪ್ರಾಯ ಇದೆ. ಇನ್ನು ಹೆಸರಘಟ್ಟ ಫಾರಂ ದೊಡ್ಡದು ಮಾಡಿ ಮಿಶ್ರತಳಿ ಹೆಚ್ಚು ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಸರ್ಕಾರ ಆಲೋಚಿಸುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅಜ್ಜಂಪುರದಲ್ಲಿ ನಮ್ಮ ಫಾರಂ ಇದೆ. ಅಲ್ಲಿ ಹಳ್ಳಿಕಾರ್ ಪ್ಯೂರಿಟಿ ಕಳೆಯದ ಹಾಗೆ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಒಬ್ಬೊಬ್ಬರು ಮಂತ್ರಿಗಳು ಬಂದಾಗ ಒಂದೊಂದು ಪಾಲಿಸಿ ಮಾಡಿ ಇದ್ದುದನ್ನು ಬದಲಾಯಿಸುತ್ತಾ ಹೋಗುವುದರಿಂದ ಸರಿಹೋಗುವುದಿಲ್ಲ. ಆದುದರಿಂದ ಮೈಸೂರಿನ ಸ್ಪೆಷಾಲಿಟಿಯನ್ನು ಹಳ್ಳಿಕಾರಿನ ತಳಿಯ ಪ್ಯೂರಿಟಿ ಅಳಿಯದ ಹಾಗೆ ಕಾಪಾಡಿಕೊಂಡು ಬರಬೇಕು. ಹೀಗೆ ಮಾಡಿದರೆ ನಮ್ಮ ದೇಶಕ್ಕೆ ಬಹಳ ಉಪಕಾರ ಮಾಡಿದಂತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅಜ್ಜಂಪುರದಲ್ಲಿ ಹಳ್ಳಿಕಾರ್ ಇಲ್ಲ. ಅಲ್ಲಿ ಅಮೃತಮಹಲ್ ಜಾತಿಯ ತಳಿಗಳನ್ನು ಅಭಿವೃದ್ಧಿ ಮಾಡುತ್ತಾ ಇದ್ದಾರೆ. ಅಲ್ಲಿ ಉತ್ಪಾದನೆ ಮಾಡುವ ಅಮೃತ ಮಹಲ್ ಹೋರಿಗಳು ವರ್ಷಕ್ಕೆ ಸುಮಾರು 500 ಆದರೆ ನಮಗೆ ಲಕ್ಷಾನುಗಟ್ಟಲೆ ಹೋರಿಗಳು ಬೇಕಾಗಿವೆ. ಖಾಸಗೀ ಜನರು ಹಳ್ಳಿಕಾರು ಮತ್ತು ಅಮೃತಮಹಲ್ ಹೋರಿಗಳನ್ನು ಉತ್ಪತ್ತಿ ಮಾಡುತ್ತಾರೆ. ದೇಶದ ಹೊರಗಡೆಗೂ ಮಾರಾಟ ಮಾಡುತ್ತಾರೆ. ಸರ್ಕಾರದವರೇ ಇಷ್ಟು ಹೋರಿಗಳನ್ನು ಉತ್ಪತ್ತಿ ಮಾಡಲು ಸಾಧ್ಯವಿಲ್ಲ. ಹೊಸ ಫಾರಂಗಳನ್ನು ಮಾಡಿ ಮಿಶ್ರ ತಳಿಗಳನ್ನು ಉತ್ಪಾದನೆ ಮಾಡಬೇಕು ಎಂದು ಇದ್ದೇವೆ. ಮಿಶ್ರ ತಳಿಗಳನ್ನು ಅಭಿವೃದ್ಧಿ ಮಾಡಿದರೆ ಹಾಲು ಉತ್ಪಾದನೆ ಹೆಚ್ಚು ಮಾಡುವುದು ಸಾಧ್ಯ.

ಇನ್ನು ಬೆಂಗಳೂರು ಡೈರಿ ವಿಚಾರವಾಗಿ ಕೆಲವು ಮಾತುಗಳನ್ನೂ ಹೇಳಿದ್ದಾರೆ, ಕೆಲವು ಸಲಹೆಗಳನ್ನೂ ಹೇಳಿದ್ದಾರೆ. ಕೆಲವು ಟೀಕೆಗಳನ್ನೂ ಹೇಳಿದ್ದಾರೆ, ಟೋನ್ ಮಿಲ್ಕ್ ಕೊಡುತ್ತಾ ಇದ್ದಾರೆ, ಹೋಲ್ ಮಿಲ್ಕ್ ಕೊಡುತ್ತಾ ಇಲ್ಲ. ಯಾವ ಕಾಲಕ್ಕೂ ನೀರು ಬೆರೆಸಿ ಕೊಡುತ್ತಿದ್ದಾರೆ ಎಂದು ಹೇಳಿದರು. ಬೆಂಗಳೂರು ಡೈರಿ ಸ್ಥಾಪನೆ ಮಾಡಿರುವ ಮುಖ್ಯ ಉದ್ದೇಶವನ್ನು ಮಾನ್ಯ ಸಭೆಯ ಗಮನಕ್ಕೆ ತಂದರೆ ಬಹುಶಃ ಅವರು ಮಾಡಿದಂಥ ಟೀಕೆ ಸರಿಯಿಲ್ಲ ಎಂದು ಅವರೇ ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಅರೆ ಮಿಲ್ಕ್ ಕಾಲೋನಿಯಿಂದ ಬೊಂಬಾಯಿನಲ್ಲಿ ಹಾಲಿನ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಬೆಂಗಳೂರಿನಲ್ಲಿಯೂ ಹಾಲಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಇಲ್ಲವೇ ಮತ್ತು ಬೆಂಗಳೂರಿನಲ್ಲಿರುವ ಮಿಲ್ಕ್ ಡೈರಿಗಾಗಿ ಇಷ್ಟು ಹಣ ಖರ್ಚು ಮಾಡಿದಾಗ್ಯೂ ಯಥಾ ಪ್ರಕಾರ ನೀರು ಹಾಲು ಕುಡಿದುಕೊಂಡು ಇರುವುದೇ ? ಬೆಂಗಳೂರಿನ ಹಾಲಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರಕ್ಕೆ ಆಸಕ್ತಿ ಮತ್ತು ಶಕ್ತಿ ಇದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಅರೆ ಮಿಲ್ಕ್ ಕಾಲೋನಿ ಸ್ಥಾಪನೆ ಆಗಿ ಎಷ್ಟು ವರ್ಷ ಆಯಿತು ? ಯಾವ ಮಿಲ್ಕ್ ಕಾಲೋನಿ ಸ್ಥಾಪನ ಆಗಲಿ 2 ವರ್ಷದಲ್ಲಿಯೇ ಫಲ ಕೊಡುವುದಕ್ಕೆ ಸಾಧ್ಯ ಇಲ್ಲ. ಸರ್ಕಾರಕ್ಕೆ ಶಕ್ತಿ ಇದೆಯೇ ಎಂದು ಕೇಳಿದರು. ಕಾಲಕ್ರಮೇಣ ಇದನ್ನು ಸರಿಮಾಡುವುದಕ್ಕೆ ಶಕ್ತಿ ಇದೆ. ಮದುವೆ ಆದಕೂಡಲೇ ಬೆಳಗ್ಗೆ ಕೂಸು ಹುಟ್ಟಬೇಕು ಎಂದರೆ ಸಾಧ್ಯ ಇಲ್ಲ. ನವಮಾಸ ತುಂಬಬೇಕು. ಬೆಂಗಳೂರಿನಲ್ಲಿ ಡೈರಿ ಸ್ಥಾಪನೆ ಮಾಡಿದ ಉದ್ದೇಶ ಲೋಯರ್ ಇನ್‌ಕಂ ಗ್ರೂಪ್ ಎಂದರೆ ಸಂಪಾದನಾ ಶಕ್ತಿ ಕಡಿಮೆ ಇರುವ ಜನರಿಗೆ ಆರೋಗ್ಯಕರವಾದ ಹಾಲನ್ನು ಕೊಡಬೇಕು ಎನ್ನುವುದೇ ಮೊದಲನೇ ಉದ್ದೇಶ.

ಶ್ರೀ ಎಸ್. ಗೋಪಾಲಗೌಡ.—ಅದು ಮಿಸ್ ಲೀಡಿಂಗ್, ಲೋಯರ್ ಇನ್‌ಕಂ ಗ್ರೂಪ್ ಯಾರು ಎಂದು ಹೇಗೆ ಹುಡುಕುವುದು ?

ಶ್ರೀ ಡಿ. ದೇವರಾಜ್ ಅರಸ್.—ಇರುವ ವಿಚಾರವನ್ನು ಹೇಳುತ್ತಿದ್ದೇನೆಯೇ ಹೊರತು ನನಗೆ ಜನರನ್ನು ಮಿಸ್‌ಲೀಡ್ ಮಾಡಬೇಕು ಎಂಬ ಉದ್ದೇಶ ಇಲ್ಲ. ಇದ್ದುದನ್ನು ಇದ್ದ ಹಾಗೆ ಹೇಳುತ್ತಿದ್ದೇನೆ. ಯೂನಿಸೆಫ್‌ನವರು, ವರ್ಲ್ಡ್ ಹೆಲ್ತ್ ಆರ್ಗನೈಸೇಷನ್, ಎಫ್.ಎ.ಓ., ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಲ್ಲಾ ಸೇರಿ ಅಗ್ರಿಮೆಂಟ್ ಆಗಿರುವ ಪ್ರಕಾರ, ಅವರು ಕೊಟ್ಟಿರುವ ಹಣ, ಮೆಷಿನರಿ, ಸಾಲ, ಸಹಾಯ, ಸಲಹೆ ಪ್ರಕಾರ ಟೋನ್ ಮಿಲ್ಕ್ ಒದಗಿಸುತ್ತಾ ಇದ್ದೇವೆ. ಹೋಲ್ ಮಿಲ್ಕ್ ಒದಗಿಸಬೇಕಾದರೆ ಒಂದು ಲೀಟರ್ ಮಿಲ್ಕ್‌ಗೆ 1-30, 1-25, ಸಂದರ್ಭಾನುಸಾರ 1-50 ಪೈಸೆ ಕೂಡ ಈಗಿನ ಮಾರ್ಕೆಟ್‌ನಲ್ಲಿ ಆಗುತ್ತದೆ.

ಈಗ ನಾವು ಕೊಡುತ್ತಾ ಇರತಕ್ಕ ಟೋನ್ಡ್ ಮಿಲ್ಕ್ ಒಂದು ಲೀಟರಿಗೆ 80 ನಯಾಪೈಸಾದಂತೆ ಕೊಡುತ್ತಿದ್ದೇವೆ. ಹೋಲ್‌ಮಿಲ್ಕ್ ಒಂದು ಲೀಟರಿಗೆ 1-40 ಪೈಸಾ ಅದೂ ಆಗಲೀ ಅವನ್ನು ಜನಗಳಿಗೆ ಹಂಚಿ ಎಂದು ಹೇಳಿದರೆ ಶ್ರೀಮಾನ್ ಶ್ಯಾಮಣ್ಣನವರಂತಹ ಅನುಕೂಲಸ್ಥರು ಈ ಹಾಲನ್ನು ಉಪಯೋಗಿಸಬಹುದು. ಈಗ ಕನ್‌ಸ್ಯೂಮರ್ಸ್ ಹಾಲನ್ನು ಕೊಂಡುಕೊಳ್ಳತಕ್ಕವರು ಯಾರು ಯಾರು ಇದ್ದಾರೆ, ಅವರ ಅಭಿಪ್ರಾಯ ಏನಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ನಾವು ಕೊಡುತ್ತಾ ಇರತಕ್ಕ ಟೋನ್ಡ್‌ಮಿಲ್ಕ್ ಸದುಪಯೋಗವಾಗಿದೆ. ಹೆಚ್ಚು ಹೋಲ್ ಮಿಲ್ಕ್ ಕೊಡಬೇಕಾದರೆ ಸಾಕಷ್ಟು ಹಾಲನ್ನು ಒದಗಿಸಿಕೊಳ್ಳಬೇಕು. ಅದು ಸಾಕಷ್ಟು ಒದಗುವುದರ ಜೊತೆಗೆ ಇದೇ ಬೆಂಗಳೂರಿನಲ್ಲಿ ಹೋಲ್ ಮಿಲ್ಕ್ ಕೊಂಡುಕೊಳ್ಳುವವರು ಇರಬೇಕು. ಮತ್ತು ಅದನ್ನು ಕೊಂಡುಕೊಳ್ಳುವ ಸಂಪಾದನಾ ಶಕ್ತಿ ಬೇಕು ಒಂದು ಲೀಟರಿಗೆ 1–40ಪೈಸಾ ಆಗಲೀ ಅಥವಾ 1–50ಪೈಸಾ ಆಗಲೀ ಅದನ್ನು ಕೊಟ್ಟು ಹೋಲ್‌ಮಿಲ್ಕ್ ಕೊಂಡು ಕೊಳ್ಳುವ ಚೈತನ್ಯ ಜನಗಳಿಗೆ ಬೇಕು. ನಾವು ಶಾಸ್ತ್ರೀಯವಾಗಿ ಮಾತನಾಡುವುದಾದರೆ ಬಡವರಿಗೆ ಈ ಹೋಲ್‌ಮಿಲ್ಕನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಈಗ ನಾವು ಟೋನ್ಡ್ ಮಿಲ್ಕ್ ಕೊಡುತ್ತಿದ್ದೇವೆ. ಈಗ ಟೋನ್ಡ್ ಮಿಲ್ಕ್ ಎಂದರೇನು ಹೋಲ್‌ಮಿಲ್ಕ್ ಎಂದರೇನು ಎಂಬುದನ್ನು ನಾವು ಗಮನಿಸಬೇಕು. ನೀರು ಹಾಕದೆ ಇರತಕ್ಕ ಹಸುವಿನ ಹಾಲಿನಲ್ಲಿ 6-7 ಪರ್ಸೆಂಟ್ ಫ್ಯಾಟ್ ಇರುತ್ತದೆ. ಎಸ್. ಎನ್. ಎಫ್. ಎಂದರೆ ''Solid not fat'' ಫ್ಯಾಟ್ ಅಲ್ಲದೆ ಇರತಕ್ಕ ಕೆಲವು ಸಾಲಿಡ್ಸ್ ಇವೆ. ಟೋನ್ಡ್ ಮಿಲ್ಕ್ ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾದರೆ, ಈಗ ಬೆಂಗಳೂರು ಡೈರಿಯಲ್ಲಿ ಕೊಡತಕ್ಕ ಹಾಲಿನಲ್ಲಿ ಜಿಡ್ಡು ಪದಾರ್ಥಗಳು ಯಾವ ಪ್ರಮಾಣದಲ್ಲಿ ಇರಬೇಕು ಎಂದು ಇದೆಯೋ ಅದಕ್ಕಿಂತ ಕಡಿಮೆ ಇದ್ದರೆ ನಾವು ಅಪರಾಧಕ್ಕೆ ಗುರಿಯಾಗುತ್ತೇವೆ. 1.5 ಪರ್ಸೆಂಟಿನಷ್ಟು ಫ್ಯಾಟ್ ಇರಬೇಕು ಮತ್ತು ಅಂತಹ ಹಾಲನ್ನು ಬಡವರಿಗೆ ಕುಡಿಯುವುದಕ್ಕೆ ಕಡಿಮೆ ದರದಲ್ಲಿ ಒದಗಿಸ ಬೇಕೆಂಬುದು ನಮ್ಮ ಉದ್ದೇಶ. ಅದಕ್ಕೋಸ್ಕರ ಟೋನ್ಡ್ ಮಿಲ್ಕಿನಲ್ಲಿ ಫ್ಯಾಟನ್ನು 1.5 ಪರ್ಸೆಂಟಿಗೆ ಇಳಿಸುತ್ತೇವೆ. That is why I say, let it be tested in any laboratory. If it is proved that it does not contain 1.5 per cent but less than that, I am prepared to accept the criticism he offers. The faet is that it does contain 1.5 per cent fat and the required S N F and protien content. ನಾವು ಹೋಟಲ್ ಮಿಲ್ಕ್ ಅನ್ನು ಕೊಡ

(ಶ್ರೀ ಡಿ. ದೇವರಾಜ ಅರಸ್)

ಬೇಕಾದರೆ ಫ್ಯಾಟ್ ರೆಡ್ಯೂಸ್ ಮಾಡುವುದಿಲ್ಲ. ಆದರೆ ಬೆಲೆ ಜಾಸ್ತಿಯಾಗುತ್ತದೆ. I take a challenge if anybody can sell whole milk at 80 nP. in Bangalore or anywhere else. ಈ ರೀತಿ ನಾವು ಬೆಂಗಳೂರಿನ ಜನತೆಗೆ ಬಡವರಿಗೆ ಹಾಲನ್ನು ಒದಗಿಸುತ್ತಿದ್ದೇವೆ. ಹಾಲಿನ ಉತ್ಪತ್ತಿ ಜಾಸ್ತಿ ಆದರೆ ಹೋಲ್ ಮಿಲ್ಕನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಒಳ್ಳೆಯ ಹಾಲನ್ನು ಕೊಡುವಾಗ ಜನಗಳ ಆರೋಗ್ಯ ದೃಷ್ಟಿಯನ್ನು ಸಹ ನಾವು ಯೋಚನೆ ಮಾಡಬೇಕಾಗಿದೆ. ಈ ಹಾಲಿನಲ್ಲಿ ನಾನಾ ರೀತಿಯಾದ ಕ್ರಿಮಿಗಳು ಬರತಕ್ಕಂಥ ಸಂದರ್ಭ ಇದೆ. ಅದು ಮನುಷ್ಯನ ಆರೋಗ್ಯವನ್ನು ಕೆಡಿಸುತ್ತದೆ. ಆದ್ದರಿಂದ ಹಾಲನ್ನು ಪಾಶ್ಚರೈಜ್ ಮಾಡಿ ಅದನ್ನು ನಾವು ಜನಗಳಿಗೆ ಕೊಡುತ್ತಿದ್ದೇವೆ. ಈಗ ಬೆಂಗಳೂರಿನಲ್ಲಿ ಎಲ್ಲರಿಗೂ ಹೋಲ್ ಮಿಲ್ಕ್ ಅನ್ನು ಒಂದು ಲೀಟರಿಗೆ 80—90 ಪೈಸೆಗೆ ಒದಗಿಸಬೇಕೆಂದರೆ ಸರ್ಕಾರದವರು ಮತ್ತು ಬೆಂಗಳೂರು ಕಾರ್ಪೊರೇಷನ್ನಿನವರು ಸಬ್‌ಸಿಡಿ ಕೊಡಬೇಕಾಗುತ್ತದೆ. ಇದರ ಜೊತೆಗೆ ಹೆಚ್ಚು ಹಾಲನ್ನು ಉತ್ಪತ್ತಿ ಮಾಡಬೇಕಾದರೆ ರೈತರಿಗೆ ಹೆಚ್ಚು ಹಾಲಿನ ಬೆಲೆಯನ್ನು ಕೊಡಬೇಕಾಗುತ್ತದೆ ಈಗ ಮದ್ರಾಸು ಮತ್ತು ಕೇರಳ ಪ್ರಾಂತ್ಯಗಳಲ್ಲಿ 30 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದಾರೆ. ಈಗ ನಮ್ಮಲ್ಲಿಯೂ ಸಬ್ಸಿಡಿ ಕೊಡುವುದಕ್ಕೆ ತಯಾರಾಗಿದ್ದರೆ ಬೆಂಗಳೂರಿನಲ್ಲಿಯೂ ಸಹ ಎಲ್ಲರಿಗೂ ಹೋಲ್ ಮಿಲ್ಕನ್ನು ಕೊಡುವುದಕ್ಕೆ ಸಾಧ್ಯವಿದೆ. ಈಗ ನಾವು ಬೆಂಗಳೂರು ನಗರದಲ್ಲಿ 10 ಸಾವಿರ ಲೀಟರ್ ಹೋಲ್ ಮಿಲ್ಕನ್ನು ಜನಗಳಿಗೆ ಹಂಚುತ್ತಿದ್ದೇವೆ. ಒಂದು ಲೆಕ್ಕದಲ್ಲಿ ನಾವು ಹೋಲ್ ಮಿಲ್ಕ್ ಒದಗಿಸುವುದಕ್ಕೆ ಸದ್ಯದಲ್ಲಿ ಪ್ರಯತ್ನ ಮಾಡಬಾರದು. ಅನುಕೂಲಸ್ಥರಾಗಿರುವವರು ಬೇಕಾದರೆ ಒಂದು ಲೀಟರ್ ಹೋಲ್ ಮಿಲ್ಕಿಗೆ 1½—2 ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳಲಿ. ಲೋಇನ್‌ಕಂ ಗ್ರೂಪಿನ ಜನಗಳಿಗೆ ಮಾತ್ರ ನಾವು ಹಾಲನ್ನು ಒದಗಿಸಬೇಕು. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಕಾಲಕ್ರಮದಲ್ಲಿ ಲೋಯರ್ ಇನ್‌ಕಂ ಬರತಕ್ಕವರಿಗೆ ಮಾತ್ರ ಟೋನ್ಡ್ ಮಿಲ್ಕ್ ಸಪ್ಲೈ ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ. ಕೊಳ್ಳತಕ್ಕ ಶಕ್ತಿ ಇರುವವರು ಬೇರೆ ಕಡೆ ಕೊಂಡುಕೊಳ್ಳಲಿ. ಈಗ ಒಟ್ಟು ಬೆಂಗಳೂರಿನಲ್ಲಿ 16 ಲಕ್ಷ ಜನ ಇದ್ದಾರೆ. ಇದರಲ್ಲಿ ಹಾಲನ್ನು ಕುಡಿಯುತ್ತಾ ಇರುವವರು 20 ಪರ್ಸೆಂಟ್ ಇರಬಹುದು. ಇನ್ನು ಉಳಿದ 80 ಪರ್ಸೆಂಟ್ ಜನಗಳು ಹಾಲನ್ನು ನೋಡಿದ್ದಾರೋ ಇಲ್ಲವೊ ಗೊತ್ತಿಲ್ಲ. ಬೆಂಗಳೂರು ಡೈರಿಯಲ್ಲಿ 1966ನೇ ಸಾಲಿನಲ್ಲಿ ಸುಮಾರು 5½ ಲಕ್ಷ ರೂಪಾಯಿಗಳು ನಷ್ಟವಾಗಿದೆ.

ಶ್ರೀ ಎಸ್. ಶಿವಪ್ಪ.—ಪೌಡರ್ ಮಿಲ್ಕ್ ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಏನೂ ಇಲ್ಲದೆ ಇರುವವರಿಗೆ ಪೌಡರ್ ಮಿಲ್ಕ್ ಎಷ್ಟೋ ಉತ್ತಮ.

ಇನ್ನು ಕುರಿ ಸಾಕಾಣಿಕೆಯ ವಿಚಾರ. ಕುರಿ ಸಾಕಾಣಿಕೆಯ ಬಗ್ಗೆ ಮಾನ್ಯ ಸದಸ್ಯರು ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಕಡೆ ಉತ್ತಮವಾದ ತಳಿಗಳು ಬರುತ್ತಿವೆ. ಶ್ರೀಮಾನ್ ನಾಗನಗೌಡರು ಈ ಕುರಿ ಸಾಕಾಣಿಕೆಯ ವಿಷಯದಲ್ಲಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಸರ್ಕಾರದವರೂ ಕೂಡ ಇನ್ನೂ ಹೆಚ್ಚು ಹೆಚ್ಚು ಫಾರಂಗಳನ್ನು ಮಾಡಬೇಕೆಂದಿದ್ದೇವೆ. ಮಂಡ್ಯ ಡಿಸ್ಟ್ರಿಕ್ಟ್ ಮಳವಳ್ಳಿಯಲ್ಲಿ ಒಂದು ಫಾರಂ ತೆಗೆದಿದೆ. ಇಂಡಿಯಾ ಸರ್ಕಾರದವರು ಇತ್ತೀಚೆಗೆ ಒಂದು ದೊಡ್ಡ ಕುರಿ ಸಾಕಾಣಿಕೆಯ ಕೇಂದ್ರವನ್ನು ಮೈಸೂರಿನಲ್ಲಿ ತೆಗೆಯಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಈಗ ಅದಕ್ಕೆ ಈಗಾಗಲೇ 18 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದಕ್ಕೆ ಸುಮಾರು ಐದು ಸಾವಿರ ಎಕರೆ ಭೂಮಿ ಬೇಕು ಎಂದು ಕೇಳಿದ್ದಾರೆ. ಇದನ್ನು ಸರಕಾರ ಒಪ್ಪಿಕೊಂಡಿದೆ. ಮುಂದಿನ ವರ್ಷದಲ್ಲಿ ಈ ಒಂದು ಕೇಂದ್ರ ಮೈಸೂರು ದೇಶಕ್ಕೆ ಬರುತ್ತದೆ.

Sri K. M. THAMMAIAH (Kadur).—In Yemmedoddi Kaval, thousands of acres of land are available and it appears that a team from Denmark visited it and have a proposal to utilise that land. Will the Government consider their proposal ?

Sri D. DEVARAJ URS.—If the Danish people have a proposal, we will certainly consider it.

ಮತ್ತೆ ಆಸ್ಪತ್ರೆ ವಿಚಾರದಲ್ಲಿ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಆಸ್ಪತ್ರೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆಸ್ಪತ್ರೆಯಲ್ಲಿ ಸಾಕಷ್ಟು ಔಷಧಿ ಇರುವುದಿಲ್ಲ, ಆಸ್ಪತ್ರೆಗಳ ಸಂಖ್ಯೆ ಕೂಡ ಬಹಳ ಕಡಿಮೆ ಎಂದು ಹೇಳಿದ್ದಾರೆ. ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಔಷಧದ ಸಲುವಾಗಿ ಕೊಡತಕ್ಕ ಹಣ ಸಾಕಾಗುವುದಿಲ್ಲ ಎಂಬುದನ್ನು ಸಹ ನಾನು ಒಪ್ಪುತ್ತೇನೆ. ಕೊಡತಕ್ಕ ಹಣ ಕೆಲವು ಕಡೆ ಸಾಕಾಗುತ್ತದೆ ಕೆಲವು ಕಡೆ ಸಾಕಾಗುವುದಿಲ್ಲ. ಇದಕ್ಕೆ ಹೆಚ್ಚು ಹಣ ಒದಗಿಸಬೇಕು ಎಂದು ಹೇಳಿದ್ದಾರೆ. ಈಗ ಇರತಕ್ಕಂಥ ರೀತಿಯಲ್ಲಿ ರೂರಲ್ ಡಿಸ್ಪೆನ್ಸರಿಗಳಿಗೆ ಒಂದು ವರ್ಷಕ್ಕೆ ಔಷಧಕ್ಕೋಸ್ಕರ 500 ರೂಪಾಯಿ ಕೊಡಲಾಗುತ್ತಿದೆ. ತಾಲ್ಲೂಕ ಮಟ್ಟದಲ್ಲಿ ಇರತಕ್ಕಂಥ ಆಸ್ಪತ್ರೆಗೆ ಕೊಡತಕ್ಕಂಥ ಹಣ 1,000 ರೂ. ಇದೆ. ಅದೇ ರೀತಿಯಾಗಿ ವೆಟರಿನರಿ ಆಸ್ಪತ್ರೆಗೆ ಅದಕ್ಕೆ ಒದಗಿಸತಕ್ಕಂಥ ಹಣ 4,000 ರೂ. ಇದೆ. 1954ನೇ ಇಸವಿಯಲ್ಲಿ ಅಂದಾಜು ಮಾಡಿ ಗೊತ್ತು ಮಾಡಿರತಕ್ಕಂಥಾದ್ದು ಈಗಲೂ ಸಹ ಹಾಗೆಯೇ ಇವೆ. ಇದನ್ನು ರಿವೈಜ್ ಮಾಡಬೇಕಾಗಿದೆ. ಆಸ್ಪತ್ರೆಯ ಸಂಖ್ಯೆ ಬಗ್ಗೆ ಒಂದು ವಿಚಾರ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಪಶುಪಾಲನೆಯ ಬಗ್ಗೆ 25,000 ದನಗಳಿಗೆ ಒಂದು ಆಸ್ಪತ್ರೆ ಇರಬೇಕು ಎಂದು ಹಿಂದೆ ಇಂಡಿಯಾ ಸರಕಾರ ಹೇಳಿದೆ. ಮೈಸೂರು ದೇಶದಲ್ಲ ಇದುವರೆಗೆ ಕೇಂದ್ರ ಸರಕಾರ ನಿರ್ದಿಷ್ಟಪಡಿಸಿದ ಹಾಗೆ 652 ಆಸ್ಪತ್ರೆಗಳನ್ನು ತೆಗೆದಿದ್ದೇವೆ. ಇದರಲ್ಲಿ 30 ವೆಟರಿನರಿ ಹಾಸ್ಪಿಟಲ್‌ಗಳಿವೆ, 164 ತಾಲ್ಲೂಕ್ ಮಟ್ಟದ ಡಿಸ್ಪೆನ್ಸರೀಸ್ ಇವೆ, 458 ರೂರಲ್ ಡಿಸ್ಪೆನ್ಸರೀಸ್ ಇವೆ. ಈ ಪೈಕಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 200 ರೂರಲ್ ವೆಟರಿನರಿ ಡಿಸ್ಪೆನ್ಸರೀಸ್ ತೆಗೆಯಬೇಕಾಗಿರುವುದರಲ್ಲಿ ಈ ವರ್ಷ 43 ಡಿಸ್ಪೆನ್ಸರೀಸ್ ತೆಗೆಯಬೇಕು ಎಂದು ಅಪ್ಪಣೆ ಮಾಡಿದೆ. ಇರತಕ್ಕಂಥ ರೂರಲ್ ಡಿಸ್ಪೆನ್ಸರೀಸ್‌ಗಳನ್ನು ತಾಲ್ಲೂಕ್ ಮಟ್ಟದಲ್ಲಿ ಅಪ್‌ಗ್ರೇಡ್ ಮಾಡಬೇಕು ಎಂದು ಅಂದಾಜು ಇಟ್ಟುಕೊಂಡಿದ್ದೇವೆ. ಮಲೆನಾಡು ಪ್ರಾಂತ್ಯದಲ್ಲಿ ಸುಮಾರು 15,000 ಪಶುಗಳಿಗೆ ಒಂದು ಆಸ್ಪತ್ರೆ ಅಲ್ಲಿಯ ಲೆಕ್ಕದಲ್ಲಿದೆ. ಅದರೂ ಕೂಡ ಶ್ರೀಮಾನ್ ಘೋರ್ಪಡೆಯವರು 5,000 ಕ್ಯಾಟಲ್ಲಿಗೆ ಒಂದು ಆಸ್ಪತ್ರೆ ಇರಬೇಕು ಎಂದು ಅವರು ತಮ್ಮ ಅಭಿಪ್ರಾಯ ಸೂಚಿಸಿದ್ದಾರೆ. ಅಂದರೆ ಈಗ ಇರತಕ್ಕಂಥ ಆಸ್ಪತ್ರೆಗಳ ಸಂಖ್ಯೆ ಐದು ಪಟ್ಟು ಜಾಸ್ತಿಯಾಗಬೇಕು ಎಂದು ಆಗುತ್ತದೆ.

Sri M. Y. GHORPADE.—I did not say that. I only wanted that even if you are not able to give these medicines for lack of funds, would you take them from wherever they were available for purchase ? For *e.g.*, Bangalore.

Sri D. DEVARAJ URS.—That is why I said, more funds are required. What is provided is inadequate, considered from the point of view of higher cost of medicines.

AN. HON'BLE MEMBER.—You fight with your Hon'ble Finance Minister.

Sri D. DEVARAJ URS.—Yes, I will request him. He is here.

I think there are some more points which I should have liked to mention. But there is no time and I feel it is not proper on my part to keep the House waiting any more. The only point I wish to refer to in passing is, about these artificial insemination centres.

ಇನ್ನು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಬಗ್ಗೆ ಕೆಲವು ಸಲಹೆಗಳನ್ನು ಅವರು ಮಾಡಿದ್ದಾರೆ. ಈ ವಿಚಾರದಲ್ಲಿ ಹೊಸ ಪದ್ಧತಿ ನಮ್ಮ ದೇಶದಲ್ಲಿ ಜಾರಿಗೆ ಬಂದಿಲ್ಲ. ಪರದೇಶಗಳಲ್ಲಿ ಅಂಥ ಒಂದು ವಿಧಾನ ಕಂಡುಹಿಡಿದಿದ್ದಾರೆ. ಇದನ್ನು ಇಡುವುದಕ್ಕೆ ಫ್ರೀಜಿಂಗ್ ಪಾಯಿಂಟಕ್ಕಿಂತ ಕೆಳಕ್ಕೆ ಅಂದರೆ 70 ಡಿಗ್ರೀ ಕೆಳಗೆ ತೆಗೆದುಕೊಂಡು ಹೋಗುತ್ತಾರೆ. ಆಗ್ಗೆ ಸೆಮೆನ್ನು ಗಟ್ಟಿ ಪುಡಿಯಾಗುತ್ತದೆ. ಇದರಲ್ಲಿ ಇರತಕ್ಕಂಥ ಜರ್ಮ್ಸ್ ಬದುಕಿರುತ್ತವೆ. ಇದನ್ನು ಎಷ್ಟೋ ದಿವಸಗಳವರೆಗೆ ಇಡಬಹುದು ಎಂದಿದೆ. ಇದನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಒಯ್ಯುವುದಕ್ಕೆ ಅನುಕೂಲವಾಗುತ್ತದೆ. ಅವರು ಹೇಳಿದ್ದು ಸರಿಯಾಗಿದೆ. ಇದನ್ನು ನಮ್ಮ ದೇಶದಲ್ಲಿ ಪ್ರಚಾರಕ್ಕೆ ತಂದಿಲ್ಲ. ಇತನ್ಮಧ್ಯೆ ನಮ್ಮ ದೇಶದಲ್ಲಿ ಎಳನೀರಿನಲ್ಲಿ ಇಡುವುದರಿಂದ ಎಂಟು ದಿವಸ ಇರುತ್ತದೆ ಎಂದು ಕಂಡುಬಂದಿದೆ. ಇದನ್ನು ಮೊನ್ನೆ ತಾನೆ ಪ್ರಯೋಗ ಮಾಡಿ ನೋಡಿದ್ದೇವೆ. ಅಮೇರಿಕದಿಂದ ಡಾಕ್ಟರ್ ನಾರ್ಮರ್

(ಶ್ರೀ ಡಿ. ದೇವರಾಜ ಅರಸ್)

ಎನ್ನುವವರು ಬಂದು ಇದನ್ನು ಪ್ರಸಿದ್ಧಿ ಮಾಡಿದ್ದಾರೆ ಮತ್ತು ಇಲ್ಲಿಯ ಡಾಕ್ಟರರನ್ನು ತರಬೇತಿ ಮಾಡಿದ್ದಾರೆ. ಪ್ರತಿಯೊಂದು ಅನುಕೂಲವಾಗಬೇಕು ಅಂದರೆ ಇದಕ್ಕೆ ಕೆಲವು ಆಂಟೀ ಬಯಾಟಿಕ್ಸ್ ಅಮೇರಿಕಾ ದೇಶದಲ್ಲಿ ತಯಾರಾದುದನ್ನು ತರಿಸಬೇಕಾಗುತ್ತದೆ. ಇದಕ್ಕೆ ಫಾರಿನ್ ಎಕ್ಸ್‌ಚೇಂಜ್ ಪ್ರಶ್ನೆ ಮಧ್ಯೆ ಬರುತ್ತದೆ. ಇದಲ್ಲದೆ ಸಂಕಷ್ಟು ಔಷಧಿ ತರಿಸುವ ಹಾಗೆ ಇದ್ದರೆ ಇದನ್ನು ಮಾಡಬಹುದು. ಇದಕ್ಕಾಗಿ ಕೇಂದ್ರ ಸರಕಾರಕ್ಕೆ ಬರೆಯಬೇಕಾಗುತ್ತದೆ. ತಳಿ ಅಭಿವೃದ್ಧಿ ಮಾಡಬೇಕು, ಹಾಲು ಉತ್ಪಾದನೆ ಮಾಡಬೇಕು ಎಂಬುದಕ್ಕೆ ಏಕಮೇವ ದಾರಿ ಯಾವುದು ಅಂದರೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಯೋಗ ಪ್ರಚಾರ ಮಾಡಬೇಕಾಗುತ್ತದೆ. ಇದಕ್ಕೆ ಸಹ ಅನೇಕ ಅಡಚಣೆಗಳಿವೆ. ರೆಫ್ರಿಜಿರೇಟರ್, ಐಸ್‌ಕ್ಯಾನ್ ಮೊದಲಾದ ಸಹಾಯ ಬೇಕಾಗುತ್ತದೆ. ಒಂದು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್‌ಗೆ 15-20 ರೂಪಾಯಿ ಖರ್ಚಾಗುತ್ತಿದೆ. ಇದನ್ನೇ ಎಳನೀರಿನಲ್ಲಿ ಇಟ್ಟುಕೊಂಡು ಏಳೆಂಟು ದಿವಸ ಕಾಪಾಡಿಕೊಂಡು ಬೇರೆ ಸ್ಥಳಕ್ಕೆ ಕಳಿಸುವುದಾದರೆ ಇದಕ್ಕೆ ಖರ್ಚಾಗುವುದು ಅರ್ಧದಷ್ಟು ದುಡ್ಡು ಕಡಿಮೆಯಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಪ್ರಕೃತಿಗೆ ವಿರುದ್ಧವಾಗಿ ಹೋಗಬೇಡಿ, ಪಾಪ ಬರುತ್ತದೆ.

ಶ್ರೀ ಡಿ. ದೇವರಾಜ ಅರಸು.—ಇದು ಹ್ಯೂಮನ್ ಬೀಯಿಂಗ್ಸ್ ಬಗ್ಗೆ ಅಲ್ಲ, ಇದು ಅನಿಮಲ್ಸ್ ಬಗ್ಗೆ ಇರುತ್ತದೆ. ಅನೇಕ ಕಡೆ ಇದರ ಕೇಂದ್ರ ತೆರೆಯಬೇಕು ಮತ್ತು ಸಕಾಲಕ್ಕೆ ಇದು ಒದಗುತ್ತಿಲ್ಲ ಎಂದು ಅನೇಕರು ಹೇಳಿದ್ದಾರೆ. ಇದರ ಬಗ್ಗೆ ಯೋಚನೆ ಮಾಡಿದ್ದೇವೆ. ಈಗ ಇರತಕ್ಕಂಥ ಕೃತಕ ಗರ್ಭಧಾರಣೆ ಕೇಂದ್ರವನ್ನು ಒಂದು ಸೆಂಟರ್ ಬ್ಯಾಂಕ್ ತರಹಮಾಡಿ ನಾಲ್ಕಾರು ಸೆಮನ್ ಒದಗಿಸಬೇಕೆಂದು ಇದೆ. ಧಾರವಾಡದ ಬಂಕಾಪೂರ ಫಾರ್ಮ್‌ನಲ್ಲಿ ಮಾಡಬೇಕೆಂದು ಇದೆ. ಆ ಕಡೆ ಗುಲ್ಬರ್ಗದಲ್ಲಿ ಒಂದು, ಮಂಗಳೂರಿನಲ್ಲಿ ಒಂದು ಹೀಗೆ ನಾಲ್ಕಾರು ಕಡೆ ಕೃತಕ ಗರ್ಭಧಾರಣೆ ಕೇಂದ್ರ ಸ್ಥಾಪನೆ ಮಾಡಬೇಕು ಎಂದಿದೆ. ಈ ವರ್ಷ ಒಂದೆರಡು ಕಡೆಯಾದರೂ ಸ್ಥಾಪನೆ ಮಾಡಬೇಕು ಎಂದು ಸರಕಾರದ ದೃಷ್ಟಿಯಲ್ಲಿದೆ. ಈ ರೀತಿ ಮಾಡಿದರೆ ಎರಡು ಮೂರು ವರ್ಷಗಳಲ್ಲಿ ಎಲ್ಲಾ ಕಡೆ ಕೃತಕ ಗರ್ಭಧಾರಣೆ ವೀರ್ಯವನ್ನು ಒದಗಿಸಿ ಕೃತಕ ಗರ್ಭಧಾರಣೆ ಪ್ರಯೋಗವನ್ನು ಹಳ್ಳಿಗಳಲ್ಲಿ ಯಶಸ್ವಿಯಾಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತೇವೆ. ಇದಕ್ಕೆ ಏನು ಖರ್ಚಾದರೂ ಕೂಡ ಸರಕಾರ ಅದನ್ನು ಕೊಡಲಿಕ್ಕೆ ಸಿದ್ಧವಿದೆ ಎಂದು ಈ ಸಭೆಯ ಗಮನಕ್ಕೆ ತರುತ್ತೇನೆ.

ಇನ್ನೂ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅದರಲ್ಲೂ ಶ್ರೀ ಘೋರ್ಪಡೆಯವರು ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಫಾಡರ್ ಡೆವಲಪ್‌ಮೆಂಟ್, ಆರ್ಟಿಫಿಷಿಯಲ್ ಇನ್‌ಸೆಮಿನೇಷನ್, ಕ್ರಾಸ್ ಬ್ರೀಡಿಂಗ್, ವಿಚಾರ ಹೇಳಿದ್ದಾರೆ. ಇದೇರೀತಿ ಮಾನ್ಯಸದಸ್ಯರನೇಕರು ಹೇಳಿದ್ದಾರೆ. ಎಲ್ಲಕ್ಕಿಂತ ಹೆಚ್ಚು ಈ ಇಲಾಖೆಗೆ ಹೆಚ್ಚು ಹಣ ಒದಗಬೇಕಾದ ಅಗತ್ಯವಿದೆ ಎಂದೂ ಇದರಿಂದ ಆಹಾರ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕು ಎಂದೂ, ಹೆಚ್ಚು ಹಾಲನ್ನು ಒದಗಿಸಬೇಕು, ಹೆಚ್ಚು ಕುರಿಗಳನ್ನು ಒದಗಿಸಬೇಕು, ಹೆಚ್ಚು ಕೋಳಿಗಳ ಉತ್ಪಾದನೆ ಆಗಬೇಕು ಎಂದು ಹೇಳಿದ್ದಾರೆ. ಶ್ರೀಮಾನ್ ದೇವೇಗೌಡರು ಮಾತನಾಡುತ್ತ ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ಹೇಳಿದರು. ಇದರ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಡಬೇಕು. ಮೊಟ್ಟೆ ಮತ್ತು ಹಾಲನ್ನು ಹೆಚ್ಚಾಗಿ ಉಪಯೋಗಿಸುವಂತೆ ಜನಗಳಿಗೆ ತಿಳುವಳಿಕೆ ಬರಬೇಕು. ಈಗ ದೇಶದಲ್ಲಿ ಪ್ರೋಟೀನ್ ಡಯಟ್ ಯಾವರೀತಿ ಉಪಯೋಗಿಸಬೇಕು ಎಂದು ಪ್ರಚಾರ ಮಾಡುವುದೇ ದೊಡ್ಡ ಕರ್ತವ್ಯ. ಅನೇಕ ಜನ ಮೊಟ್ಟೆಗಳನ್ನು ತೆಗೆದುಕೊಂಡು ಮಾರುವುದಕ್ಕೆ ಹೋಗುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಪೌಲ್ಟ್ರಿಫೀಡ್ ಅಮೇರಿಕಾ ದೇಶದಿಂದ 8 ರೂಪಾಯಿಗಳಿಗೆ ತಂದು ಕೊಡುತ್ತಿದ್ದೀರಿ. ನಿಮ್ಮ ಪೈಕಿ ಕೆಲವರು ಅದನ್ನು 50 ರೂಪಾಯಿ ಪ್ರಕಾರ ಮಾರಾಟ ಮಾಡುತ್ತಿದ್ದಾರೆ. ಹೀಗಾದರೆ ನಿಮ್ಮ ಪೌಲ್ಟ್ರಿ ಹೇಗೆ ಉದ್ಧಾರವಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಎಲ್ಲಿ ಆ ರೀತಿ ದುರುಪಯೋಗವಾಗಿದೆ ಎಂದು ಹೇಳಿದರೆ, ಆ ರೀತಿ ದುರುಪಯೋಗವಾಗದ ರೀತಿ ನೋಡತಕ್ಕ ಜವಾಬ್ದಾರಿ ನನ್ನದಿದೆ. ಅದನ್ನು ನೋಡಿಸುತ್ತೇನೆ.

ಇಷ್ಟು ಹೇಳಿ, ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟು ಈ ಇಲಾಖೆ ಇನ್ನೂ ಹೆಚ್ಚು ಉತ್ತಮ ರೀತಿಯಲ್ಲಿ ತಮ್ಮ ಮನಸ್ಸಿಗೆ ಸ್ವಲ್ಪವಾದರೂ ತೃಪ್ತಿ ಹೆಚ್ಚಾಗಿ ಉಂಟಾಗುವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಆದರೆ ಇದಕ್ಕೆ ಒಂದು ಮಾತು ಇದೆ.

ಹೆಚ್ಚು ಹೆಚ್ಚು ಹಣವನ್ನು ಒದಗಿಸಿದರೆ ಹೆಚ್ಚು ಕೆಲಸ ಮಾಡವುದಕ್ಕೆ ಸಾಧ್ಯವಿದೆ. ಇಷ್ಟು ಹೇಳಿ ತಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸರ್ವರೂ ಒಪ್ಪಬೇಕು, ಒಪ್ಪುತ್ತಾರೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ. —ಡೈರಿ ಫಾರಂ ಬಗ್ಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟರು. ಅದರಲ್ಲಿ ಐದೂವರೆಲಕ್ಷ ರೂಪಾಯಿ ಲುಕ್ಸಾನಾಗಿದೆ ಎಂದು ಹೇಳಿದರು. ಈ ರೀತಿ ನಷ್ಟವಾಗುವುದನ್ನು ತಡೆಗಟ್ಟುವುದಕ್ಕೆ ಏನು ಕ್ರಮಗಳನ್ನು ತಗೆದುಕೊಂಡಿದ್ದಾರೆ, ಡೈರಿ ಪ್ರಾಜೆಕ್ಟಿಗೆ ಸಬ್ಸಿಡಿ ಕೊಡುವ ಸ್ಥಿತಿಯಲ್ಲಿಲ್ಲ. ಸರ್ಕಾರದವರು ಇದನ್ನು ಲಾಭದಾಯಕವಾಗಿ ಆಗುವಂತೆ ಮಾಡುವುದು ಹೇಗೆ? ಪ್ರತಿ ಸಲವೂ ಈ ರೀತಿ ಲುಕ್ಸಾನು ಆಗುತ್ತಿದ್ದರೆ ಆದನ್ನು ಮುಚ್ಚಿ ಹಾಕುತ್ತೀರಾ ?

ಕೆಲವರು ಶ್ರೀಮಾನ್ ಜತ್ತಿಯವರ ಇಲಾಖೆಯಿಂದ ಕೆಲವು ವಸ್ತುಗಳನ್ನು ಪಡೆದುಕೊಂಡು 'ಫೀಡ್' ಎಂದು ಮಾಡಿ ಅದನ್ನು ಮಾರುತ್ತಿದ್ದಾರೆ. ಬೂಸ ಇಲ್ಲವೆಂದು ದೊಡ್ಡ ಚಳುವಳಿ ಮಾಡಿ ಈ ರೀತಿ ಮಾಡುತ್ತಿದ್ದಾರ. ಸರ್ಕಾರದವರು ಇಂಥ ವ್ಯಾಪಾರಿಗಳಿಗೆ ಎಷ್ಟು ಸಹಾಯ ಮಾಡುತ್ತಿದ್ದಾರೆ? ಮೈಸೂರು ಫೀಡ್ಸ್ ಎನ್ನುವವರಿಗೆ ಏನೇನು ಕೊಡುತ್ತಿದ್ದಾರೆ. ಅಮೆರಿಕಾದಿಂದ ಬಂದಂಥ ವಸ್ತುಗಳನ್ನು ಹೇಗೆ ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದಾರೆ, ಇದರ ಮೇಲೆ ನಿಮ್ಮ ಹತೋಟಿ ಇದೆಯೇ?

ಶ್ರೀ ಡಿ. ದೇವರಾಜ ಅರಸ್.—ಅಮೆರಿಕಾದಿಂದ ಬಂದಂಥ ಜೋಳ, ಮೇಜ್ ಇವುಗಳನ್ನು ಫೀಡ್ಸ್ ಮಾಡಲು ನಾವು ಅವರಿಗೆ ಕೊಟ್ಟಿಲ್ಲ. ಮೈಸೂರು ಫೀಡ್ಸ್ ಅವರು ಬೇಕಾದ ಪದಾರ್ಥಗಳನ್ನು ಮಾರ್ಕೆಟ್ಟಿನಲ್ಲಿ ತೆಗೆದುಕೊಂಡು ಫೀಡ್ಸ್ ಮಾಡಿಕೊಳ್ಳುತ್ತಿದ್ದಾರೆ. ಅದನ್ನು ದನಗಳಿಗೋಸ್ಕರ ಕೊಡುತ್ತಿದ್ದಾರೆ. ಬೆಂಗಳೂರಿನಲ್ಲಿ, ಹುಬ್ಬಳ್ಳಿಯಲ್ಲಿ, ಧಾರವಾಡದಲ್ಲಿ ಮತ್ತು ಇತರ ಕಡೆ ರೋಲಿಂಗ್ ಮಿಲ್ಸ್ ಇವೆ. ಆ ಮಿಲ್ಲುಗಳಿಗೆ ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರಕ್ಕೆ ಏನು ಮೊತ್ತದಲ್ಲಿ ಗೋಧಿಯನ್ನು ಕೊಡುತ್ತಾರೆ ಅದರಂತೆ ಅವರಿಗೂ ಒದಗಿಸುತ್ತಾರೆ. ಕೇಂದ್ರದವರೇ ಗೋಧಿಯನ್ನು ಹಂಚುತ್ತಾರೆ. ಅದರಿಂದ ಬಂದಂಥ ಬೂಸ ಆಹಾರ ಇಲಾಖೆಯ ಡೈರೆಕ್ಟರು ಎಲ್ಲ ಕಡೆಗೂ ಹಂಚಿಕೊಡುತ್ತಾರೆ. ನನ್ನ ಹತ್ತಿರ ಅಂಕಿ ಅಂಶಗಳು ಪೂರ್ತಿ ಇಲ್ಲ. ಹೋದ ತಿಂಗಳು ಮತ್ತು ಈ ತಿಂಗಳು ಬೂಸ ಹಂಚಿರುವುದು ಹತ್ತು ಸಾವಿರ ಕ್ವಿಂಟಾಲುಗಳಿಗೆ ಇಳಿದಿದೆ. ಮೊದಲು 22-23 ಸಾವಿರ ಕ್ವಿಂಟಾಲ್ ಬೂಸ ಒದಗುತ್ತಿತ್ತು. ಮಿಲ್ಲುಗಳಿಂದ ಸರಿಯಾಗಿ ಅದನ್ನು ಉಪಯೋಗ ಮಾಡುವವರಿಗೆ ವಿತರಣೆಯಾಗಲಿಲ್ಲ ಎಂದು ಆಹಾರ ಇಲಾಖೆಯ ಡೈರೆಕ್ಟರು ಹಂಚಿಕೆ ಮಾಡುತ್ತಿದ್ದಾರೆ. ಅದರಲ್ಲಿ ಸ್ವಲ್ಪ ಸೊಸೈಟಿಗಳಿಗೆ ಕೊಡುತ್ತಿದ್ದಾರೆ, ಬೆಂಗಳೂರಿನಲ್ಲಿರುವ ರೇಷನ್ ಡಿಪೋಗಳ ಮುಖಾಂತರ ಮಾಡಿದ್ದಾರೆ, ಕೆಲವು ವ್ಯಕ್ತಿಗಳಿಗೂ ಕೊಟ್ಟಿದ್ದರು. ಆದರೆ ಇದನ್ನು ಸರಿಯಾಗಿ ಕೊಡದೆ ದುರುಪಯೋಗವಾಗಿದೆ ಎಂದು ತಿಳಿದುಬಂದಿದೆ. 14 ರೂಪಾಯಿಗಳಿಗೆ ಕೊಟ್ಟದ್ದನ್ನು 22-23 ರೂಪಾಯಿಗಳಿಗೆ ಬೇರೆ ಕಡೆ ಮಾರಿಕೊಂಡು ಹೆಚ್ಚು ಬೆಲೆಯನ್ನು ಪಡೆದುಕೊಂಡಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಖಾಸಗಿಯವರಿಗೆ ಕೊಡುವುದನ್ನು ಆಹಾರ ಇಲಾಖೆಯ ಡೈರೆಕ್ಟರು ನಿಲ್ಲಿಸಿ ರೇಷನ್ ಡಿಪೋಗಳಲ್ಲಿ ಕೊಡುವಹಾಗೆ ಮಾಡಿದ್ದಾರೆ. ಇತ್ತೀಚೆಗೆ ನಮಗೆ ಹೊರಗಿನಿಂದ ಬರುತ್ತಿದ್ದ ಬೂಸಾ ಕೂಡ ನಿಂತು ಹೋಗಿದೆ. ಆದರೆ ಈಚೆಗೆ ಮಳೆ ಜಾಸ್ತಿ ಬೀಳುತ್ತಿರುವುದರಿಂದ ಬೂಸ ಮತ್ತು ಅಕ್ಕಿ ತವುಡು ಇವುಗಳ ಬೆಲೆಯೂ ಮಾರ್ಕೆಟ್ಟಿನಲ್ಲಿ ಇಳಿದಿದೆ. ಅಮೆರಿಕಾದಿಂದ ಬರುವ ಗೋಧಿಯನ್ನು ಕೇಂದ್ರ ಸರ್ಕಾರದವರು ಕೆಲವು ಮಿಲ್ಲುಗಳಿಗೆ ಇಷ್ಟಿಷ್ಟು ಎಂದು ಕೊಡುತ್ತಾರೆ. ರವೆ ಮತ್ತು ಹಿಟ್ಟು ಮಾಡಬೇಕಾದರೆ ಕೈಯಿಂದ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅದನ್ನು ಮಿಲ್ಲಿನಲ್ಲಿ ಮಾಡಿಸುತ್ತಿದ್ದಾರೆ. ಅದರಲ್ಲಿ ಬರತಕ್ಕ ಬೂಸ ಸರಿಯಾಗಿ ಜನರಿಗೆ ಸಿಕ್ಕಲಿ ಎನ್ನುವ ಉದ್ದೇಶದಿಂದ ಸರ್ಕಾರದವರು ಸ್ವಲ್ಪ ಹತೋಟಿಯನ್ನಿಟ್ಟುಕೊಂಡು ಎಲ್ಲರಿಗೂ ಒದಗುವ ಹಾಗೆ ಮಾಡುತ್ತಿದ್ದಾರೆ. ಇದನ್ನು ಆಹಾರ ಇಲಾಖೆಗೆ ಒಪ್ಪಿಸಲಾಗಿದೆ. ಯಾರು ಕಾರ್ಡುಗಳನ್ನು ಇಟ್ಟುಕೊಂಡಿದ್ದಾರೆ, ಯಾರು ಹಸುವನ್ನಿಟ್ಟುಕೊಂಡಿದ್ದಾರೆ ಅವರಿಗೆ ಮಾತ್ರ ಕೊಡಬೇಕು ಎಂದು ವ್ಯವಸ್ಥೆ ಮಾಡಿದೆ. ಅಮೆರಿಕಾದಿಂದ ಬರುವ ಮೇಜ್ ಏನಿದೆ ಅದನ್ನು ಯಾರಿಗೂ ಕೊಡುತ್ತಿಲ್ಲ. ಬೆಂಗಳೂರು ಡೈರಿಗೋಸ್ಕರವಾಗಿ ಎಫ್.ಎ.ಓ. ಆರ್ಗನೈಜೇಷನ್‌ನಿಂದ ಒಂದು ಸ್ಕೀಂ ಆಗಿದೆ. ಅದರ ಪ್ರಕಾರ ಮೂರು ವರ್ಷ ಕಾಲ ಎರಡೂವರೆ ಸಾವಿರ ಮೆಟ್ರಿಕ್ ಟನ್ ಮೇಜ್ ಕೊಡಬೇಕಾಗಿದೆ. ಕ್ಯಾಟಲ್ ಫೀಡ್ ಮಾಡಿಕೊಳ್ಳಿ ಎಂದು ಒಂದು ಸ್ಕೀಂ ಹಾಕಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದನ್ನು ಯಾವ ಖಾಸಗಿ ಮಿಲ್ಲಿಗೂ ಕೊಟ್ಟಿಲ್ಲ. ಅಮೆರಿಕಾದಿಂದ ಬರತಕ್ಕ ಮೇಜ್‌ಅನ್ನು ಮಂಡ್ಯ ಸೊಸೈಟಿಗೆ ಕೊಡುತ್ತೇವೆ. ಅವರಿಗೆ 8 ಲಕ್ಷ ರೂಪಾಯಿ ಸಾಲ ಕೊಟ್ಟು ಫುಡ್ ಮಿಕ್ಸ್ಚರ್ ಪ್ಲಾಂಟ್ ಅವರು ತರಿಸಬೇಕು ಎಂದು ಒಪ್ಪಂದ ಮಾಡಿಕೊಂಡಿದ್ದೇವೆ. ಮಂಡ್ಯ ರೈತರ ಸಹಕಾರ ಸಂಘವೇನಿದೆ ಅದಕ್ಕೆ ಇದನ್ನು ಕೊಡುವುದು ಮತ್ತು ಅವರು ಅದರಿಂದ ಫೀಡನ್ನು ತಯಾರಿಸಿ ಬೆಂಗಳೂರು ಡೈರಿಗೆ ಕೊಡಬೇಕು ಎಂದಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಮಂಡ್ಯದಿಂದ ಫೀಡ್ ಬರುತ್ತಿದೆಯೇ? ಹಸುಗಳು, ದನಗಳ ಹೆಸರಿನಿಂದ ಪರದೇಶದವರು ಕಳುಹಿಸಿಕೊಡತಕ್ಕ ಸಹಾಯವನ್ನು ದುರುಪಯೋಗ ಮಾಡಲಾಗಿದೆ ಎಂದರೆ ನಮ್ಮ ಪ್ರವೃತ್ತಿ ಎಲ್ಲಿಯವರೆಗೆ ಹೋಗಿದೆ ಎಂದು ನೋಡಬೇಕು. ಪೌಲ್ಟ್ರಿ ಫೀಡ್ ಎನ್ನುವುದನ್ನು ತೆಗೆದುಕೊಳ್ಳುವವರಲ್ಲಿ ಎಷ್ಟು ಜನ ಕೋಳಿ ಸಾಕುತ್ತಾರೆ? ಕೋಳಿಯನ್ನು ಕಣ್ಣಿನಿಂದ ನೋಡದೆ ಇರುವವರು ಕೋಳಿಯ ಹೆಸರು ಹೇಳಿದರೆ ಕಿವಿ ಮುಚ್ಚಿಕೊಳ್ಳುವವರು ಕೋಳಿ ಸಾಕಾಣಿಕೆ ಮಾಡುತ್ತೇವೆಂದು ಪೌಲ್ಟ್ರಿ ಫೀಡ್ ತೆಗೆದುಕೊಂಡು ಅದನ್ನು ಬೇರೆಯವರಿಗೆ ಮಾರುತ್ತಿದ್ದಾರೆ. ಒಬ್ಬೊಬ್ಬರಿಗೆ ಒಂದು ತಿಂಗಳಿಗೆ 5 ಕ್ವಿಂಟಾಲ್, 10 ಕ್ವಿಂಟಾಲ್ ಕೊಡುತ್ತಿರುವುದನ್ನು ಅವರು ಮಾರಾಟ ಮಾಡಿ 300-400 ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ನಿಮ್ಮ ಪೋರ್ಟ್‌ಫೋಲಿಯೋ ಜಾಸ್ತಿ ಇಲ್ಲ. ಜಾಸ್ತಿ ಇದ್ದರೆ ಇಂಥ ವಿಚಾರಗಳು ಗಮನಕ್ಕೆ ಬಾರದೆ ಇರಬಹುದು...

ಶ್ರೀ ಡಿ. ದೇವರಾಜ ಅರಸ್.—ಹೆಚ್ಚು ಕಡಿಮೆ ಪ್ರಶ್ನೆ ಅಲ್ಲ. ಪೋರ್ಟ್‌ಫೋಲಿಯೋ ಎಷ್ಟೇ ಇದ್ದರೂ ನಮಗೆ ಕೊಡುವ ಕೆಲಸವನ್ನು ನಾವು ನಿಷ್ಠೆಯಿಂದ ಮಾಡಬೇಕು.

ಮಂಡ್ಯ ಸೊಸೈಟಿಗೆ ಕೊಡಬೇಕೆಂದು ಒಪ್ಪಂದವಾಗಿದೆ. ನನ್ನಲ್ಲಿರುವ ಮಾಹಿತಿ ಪ್ರಕಾರ ಎರಡೂವರೆ ಸಾವಿರ ಟನ್ ಒಂದು ವರ್ಷಕ್ಕೆ ಬರಬೇಕಾದ್ದು, ಇನ್ನೂ ಬಂದಿಲ್ಲ. ಒಟ್ಟು ಮೂರು ವರ್ಷಕ್ಕೆ ಏಳೂವರೆ ಸಾವಿರ ಟನ್ ಬರಬೇಕು ಎಂದು ಒಪ್ಪಂದವಾಗಿದೆ. ಈ ವರ್ಷ ಬರಬೇಕಾಗಿದೆ. ಇನ್ನೂ ಬಂದಿಲ್ಲ. ನನಗೆ ಅಧಿಕೃತವಾಗಿ ಸಮಾಚಾರವೇನೂ ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಗದಗಿನಲ್ಲಿ 6 ಲಕ್ಷ ರೂಪಾಯಿಗಳನ್ನು ವಸೂಲು ಮಾಡಿಕೊಡಿ ಎಂದು ಹೇಳಿದರು. ಆದರೆ ಆ ಹಣವನ್ನು ಡಿಪಾಜಿಟ್ ಮಾಡಿದರೂ ಕೊಡಬಾರದೆಂದು ಆಜ್ಞೆ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೂ ನನಗೂ ಸಂಬಂಧವೇನಿದೆ? ಆಮೇಲೆ ಮಂಡ್ಯ ಸೊಸೈಟಿಯವರಿಗೆ ಕೊಡಬೇಕು, ಅವರಲ್ಲಿ ಗೋಡೌನ್ ಇದೆ ಎಂದು ಇದ್ದೆವು. ಪೌಲ್ಟ್ರಿ ಫೀಡ್ ಬಗ್ಗೆ ಸಿದ್ದವೀರಪ್ಪನವರು ಹೇಳಿದರು. ದಾವಣಗೆರೆ ಮತ್ತು ಹರಿಹರಕ್ಕೆ ಹೋದಾಗ ಪೌಲ್ಟ್ರಿ ಫೀಡ್ ಒದಗಿಸುತ್ತಿಲ್ಲ, ಸೊಸೈಟಿಯಲ್ಲಿ ಸಾಕಾದಷ್ಟು ಕೊಡುತ್ತಿಲ್ಲ ಎಂದು ಒಬ್ಬರು ನನಗೆ ಹೇಳಿದರು. ಅದು ವಿನಾ ಪೌಲ್ಟ್ರಿಫೀಡ್ ದುರುಪಯೋಗವಾಗಿರುವುದು ನನಗೆ ಗೊತ್ತಾಗಿಲ್ಲ. ನಾನು ದಾವಣಗೆರೆಗೆ ಬೇಕಾದರೆ ಬರುತ್ತೇನೆ, ವಿಚಾರ ತಿಳಿಸಲಿ, ಲೋಪವಿದ್ದರೆ ತಕ್ಕ ಬಂದೋಬಸ್ತು ಮಾಡುವ ಜವಾಬ್ದಾರಿ ನನಗಿದೆ. ಲೋಪವಿದೆಯೆಂದು ಹೇಳಿದ್ದನ್ನು ನಾನು ವಿಚಾರಿಸದೆ ಬಿಡುವುದಿಲ್ಲ ದುರುಪಯೋಗವಾಗಿದ್ದರೆ ಖಂಡಿತ ಅದನ್ನು ಸರಿಪಡಿಸಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಡೈರಿ ಅಭಿವೃದ್ಧಿಗಾಗಿ ಪರದೇಶಕ್ಕೆ ಕಳಿಸಿ ಸ್ಪೆಷಲೈಜ್ ಮಾಡಿಕೊಂಡು ಬಂದ ಒಬ್ಬ ಸ್ಪೆಷಲ್ ಆಫೀಸರಿದ್ದರು, ಈಗ ಅವರನ್ನು ಡೈರಿ ಅಭಿವೃದ್ಧಿ ಶಾಖೆಯಿಂದ ಬೇರೆ ಕಡೆಗೆ ಹಾಕಿರುವಂತೆ ಕಾಣುತ್ತದೆ. ಅದರ ಉದ್ದೇಶವೇನು ? ಹಣ ಕೊಟ್ಟು ಟ್ರೈನಿಂಗ್ ಕೊಟ್ಟಮೇಲೆ ಸಂಬಂಧಪಟ್ಟ ಶಾಖೆಯಿಂದ ಅಂಥವರನ್ನು ತೆಗೆದು ಬೇರೆ ಕಡೆಗೆ ಹಾಕುವುದರಲ್ಲಿ ನೀತಿ, ತತ್ವ ಏನಿದೆ ?

ಶ್ರೀ ಡಿ. ದೇವರಾಜ ಅರಸ್.—ಒಂದೇ ಕಡೆ ಒಬ್ಬ ಅಧಿಕಾರಿ 10—15 ವರ್ಷಗಳವರೆಗೆ ಇರಬೇಕೆಂದೇನೂ ಇಲ್ಲ, ಒಟ್ಟಿನಲ್ಲಿ ಕೆಲಸಕಾರ್ಯ ನಡೆಯುವುದಕ್ಕೆ ಬೇರೆ ಒಬ್ಬ ಅಧಿಕಾರಿ ಇದ್ದಾರೆ. ಕೆಲಸಕ್ಕೇನಾದರೂ ತೊಂದರೆಯಾಗಿದ್ದರೆ ಹೇಳಿ. ಧಕ್ಕೆ ಯಾವರೀತಿಯಲ್ಲೂ ಬರುವುದಿಲ್ಲ. ಈಗ ಡೈರಿಯಲ್ಲಿ ನಷ್ಟವಾಗುತ್ತಿರುವುದಕ್ಕೆ ಇದು ಕಾರಣವೇ ಎಂದು ಕೇಳಬಹುದು. ಇದನ್ನು ಮೊದಲೇ ಹೇಳಿದೆ. ಈಗತಾನೆ ಪ್ರಾರಂಭವಾಗಿದೆ. ಎರಡನೆಯದಾಗಿ ಡೈರಿಯಲ್ಲಿರುವ ಪ್ಲಾಂಟಿಗೆ ಒಂದೂವರೆ ಲಕ್ಷ ಲೀಟರ್ ಹಾಲನ್ನು ಪ್ರೋಸೆಸ್ ಮಾಡುವ ಶಕ್ತಿಯಿದೆ. ನಮಗೆ ಪ್ರಾರಂಭದಲ್ಲಿ 10 ಸಾವಿರ ಲೀಟರು ಒದಗಿತು. ಇದು ಗೋಪಾಲಗೌಡರು ಕೇಳಿದ ವಿಚಾರ. ಒಂದೂವರೆ ಲಕ್ಷ ಲೀಟರಿಗೆ ಬದಲಾಗಿ 10 ಸಾವಿರ ಲೀಟರುಗಳನ್ನು ಹ್ಯಾಂಡಲ್‌ಮಾಡಲಾಗಿದೆ, ಇದು ಅನ್ ಎಕನಾಮಿಕಲ್ ಎಂದು ಹೇಳಬಹುದು. ನಾಲ್ಕಾರು ವರ್ಷಗಳಮೇಲೆ ಇದನ್ನು ಹೆಚ್ಚಿಸುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆಮಾಡಬೇಕು. ಏಕಾಏಕಿ ಹೆಚ್ಚಿಸಲು ಸಾಧ್ಯವಿಲ್ಲ. ಏಕೆಂದರೆ ಬೆಂಗಳೂರಿನ ಸುತ್ತಮುತ್ತ ಇರುವುದು ಹೆಚ್ಚಾಗಿ ನಾಡ ಹಸುಗಳೇ. ಅಲ್ಪಸಲ್ಪ ಕ್ರಾಸ್ ಬ್ರೀಡ್‌ಗಳನ್ನು ಒದಗಿಸಿದ್ದೇವೆ, ನಾಡಹಸುಗಳು ಕೊಡುವ ಹಾಲು ಸಾಕಾಗುವುದಿಲ್ಲ ಮತ್ತು ಕೆಲವು ಕಾಲದಲ್ಲಿ ಹಾಲಿಗೆ ನೀರು ಬೆರಸಿ ಮಾರುವವರಿಗೆ ಅನುಕೂಲವಿದೆ. ಆದುದರಿಂದ ಜನರು ನಾವು ಹೇಳಿದಂತೆ ಕೇಳಲು ಇಷ್ಟಪಡುವುದಿಲ್ಲ. ನಾವು ಹಾಲನ್ನು ಪರೀಕ್ಷೆಮಾಡುವುದರಿಂದ ನೀರು ಬೆರಸಿದ್ದರೆ ಅದಕ್ಕೆ ತಕ್ಕಂತೆ ಹಣ ಕೊಡುತ್ತೇವೆ. ಅದೇ ಬೇರೆ ಕಡೆ ನೀರು ಬೆರಸಿದ್ದರೂ ಒಳ್ಳೆಯ ಬೆಲೆಯೇ ಸಿಕ್ಕುತ್ತದೆ. ಆದುದರಿಂದ ನಮಗೆ ನೇರವಾಗಿ ಕೊಡುತ್ತಿಲ್ಲ. ಈ ಎಲ್ಲಾ ದೃಷ್ಟಿಯಿಂದ

ಕ್ರ್ಯಾಷ್ ಪ್ರೋಗ್ರಾಂ ಪ್ರಕಾರ ಹೆಚ್ಚು ಹಸುಗಳನ್ನು ಅಭಿವೃದ್ಧಿಮಾಡಲು ಅನೇಕರಿಗೆ ಹಣ ಕೊಟ್ಟಿದ್ದೇವೆ. ಮೂರು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರುಗಳನ್ನು ತೆರೆಯಲಾಗಿದೆ, ಸುಮಾರು 80 ಸಾವಿರ ಇಂಜೆಕ್‌ಷನ್‌ಗಳನ್ನು ಕೊಡಲಾಗಿದೆ, ಇದರ ಪರಿಣಾಮ ಗೊತ್ತಾಗಬೇಕಾದರೆ ಇನ್ನೂ ಒಂದೆರಡು ವರ್ಷಗಳಾಗಬಹುದು, ಆ ವೇಳೆಗೆ ಹೆಚ್ಚು ಹಾಲು ಉತ್ಪತ್ತಿಯಾಗಬಹುದು. ಆದಾದಾಗ ಮೆಷೀನ್ ಶಕ್ತಿ ಅಭಿವೃದ್ಧಿಮಾಡುವುದಕ್ಕೆ ಸಾಧ್ಯ. ಆಗ ಪ್ರತಿ ವರ್ಷ 30 ಸಾವಿರ ಲೀಟರು ಹಾಲನ್ನು ಎಲ್ಲಾ ಕಾಲದಲ್ಲೂ ಪ್ರೋಸೆಸ್ ಮಾಡುವುದಕ್ಕೆ ಸಾಧ್ಯವಾಗಬಹುದು, ಅದರಂತೆ ಕಾರ್ಯಕ್ರಮ ಹಾಕಿಕೊಂಡಿದೆ. ಈ ವರ್ಷ ಅಥವಾ ಮುಂದಿನ ವರ್ಷ ಆದಾಯ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ನಷ್ಟ ತುಂಬಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಕಾಣುತ್ತದೆ. ಇದಕ್ಕೆ ಪ್ರಯತ್ನಮಾಡುತ್ತೇವೆ.

Mr. SPEAKER.—The question is :

"That a sum not exceeding Rs. 3,44,49,000 be granted to the Government to defray the charges which will come in course of payment during the financial year for the period ending 31st day of March 1968, in respect of 'Animal Husbandry'."

The motion was adopted.

Mr. SPEAKER.—The House will now stand adjourned to reassemble tomorrow at 1 P.M.

The House adjourned at Forty Minutes past Six of the Clock to mee again at One of the Clock on Wednesday, the 19th July 1967.